॥ श्रीः ॥

Kannada Translation

1st Canto

Naishadheeya-Charitam

of Shriharsha

Translated by

Dr. Deepak Bhat

Mysuru

Jnana-Sudha, Mysuru

2025

Naishadheeya-Makaranda-1 -
A kannada Translation for 1st Canto, Naishadheeya-Charitham of Shriharsha
Translated by Dr. Deepak Bhat, Yuvaraja's College, Mysuru.

First Edition : June-23-2025.
Total Pages : 133
Price : Rs. 100/-
Published By - Jnana-Sudha
Dr. Deepak Bhat, Mysuru.
Mobile - 944 86 03 199.

Available at - Jnana-Sudha (Soft Copy Publication)
Dr. Deepak Bhat, Mysuru.
Mobile - 944 86 03 199.

Welcome for the Donations :
Account Number : 5042500120470801
IFSC : KARB0000504
Karnataka Bank

॥ श्रीः ॥

कर्णाटकभाषानुवादः

प्रथमः सर्गः

॥ नैषधीयचरितम् ॥

[श्रीहर्षविरचितं महाकाव्यम्]

अनुवादकः

विद्वान् दीपकभट्टः

मैसूरुनगरम्

ज्ञानसुधा, मैसूरुनगरम्

2025

Naishadheeya-Makaranda-1 -
A kannada Translation for 1st Canto, Naishadheeya-Charitham of Shriharsha
Translated by Dr. Deepak Bhat, Yuvaraja's College, Mysuru.

First Edition : June-23-2025.
Total Pages : 133
Price : Rs. 100/-
Published By - Jnana-Sudha
Dr. Deepak Bhat, Mysuru.
Mobile - 944 86 03 199.

Available at - Jnana-Sudha (Soft Copy Publication)
Dr. Deepak Bhat, Mysuru.
Mobile - 944 86 03 199.

Welcome for the Donations :
Account Number : 5042500120470801
IFSC : KARB0000504
Karnataka Bank

॥ श्रीः ॥

ಲೇಖಕರ ನುಡಿ

ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನೂ ಸುಖಕ್ಕೋಸ್ಕರವಾಗಿ ಹಾತೊರೆಯುತ್ತಾನೆ. ಕೆಲವರು ತಪಸ್ಸಿನ ಮೂಲಕ ಇಹಲೋಕದ ಕಷ್ಟಗಳನ್ನು ದಾಟಿ ಸುಖವನ್ನು ಅನುಭವಿಸುತ್ತಾರೆ. ಕೆಲವರು ಪಾಂಡಿತ್ಯದ ಅಥವಾ ಜ್ಞಾನದ ಮೂಲಕ ಎಲ್ಲವನ್ನೂ ತಿಳಿಯುತ್ತಾ ಸುಖವನ್ನು ಅನುಭವಿಸುತ್ತಾರೆ. ಇನ್ನು ಕೆಲವರು ಯಜ್ಞ-ಯಾಗಾದಿಗಳನ್ನು ನಡೆಸುತ್ತಾರೆ. ಇನ್ನು ಕೆಲವರು ಭಕ್ತಿಮಾರ್ಗದ ಮೂಲಕ ಪರಮಾತ್ಮನನ್ನು ಒಲಿಸಿಕೊಳ್ಳುತ್ತಾರೆ. ಯಾವುದೇ ಮಾರ್ಗವನ್ನು ಅನುಸರಿಸಿದರೂ ಕೂಡ ಪ್ರತಿಯೊಬ್ಬ ಆಸ್ತಿಕನ ಮುಖ್ಯವಾದ ಗುರಿ ಮೋಕ್ಷವೇ ಆಗಿದೆ. ಹಾಗೆಯೇ ಯಾವುದೇ ಮಾರ್ಗವನ್ನು ಅನುಸರಿಸುವುದಾದರೂ ಪ್ರಾಥಮಿಕ ಹಂತದ ಸಂಸ್ಕೃತಭಾಷೆಯ ಜ್ಞಾನ ಬೇಕೇಬೇಕು. ಯಾಕೆಂದರೆ ಭಗವದ್ಗೀತೆ, ರಾಮಾಯಣ, ಮಹಾಭಾರತ, ವೇದಾಂತದ ಬಾದರಾಯಣಸೂತ್ರ, ಯೋಗಸೂತ್ರ, ಆಯುರ್ವೇದ ಇವೆಲ್ಲವೂ ಇರುವುದು ಸಂಸ್ಕೃತ ಭಾಷೆಯಲ್ಲಿ ಎಂಬುದನ್ನು ಮರೆಯುವಂತಿಲ್ಲ. ಈ ಭಾಷಾಜ್ಞಾನವನ್ನು ಪಡೆಯಬೇಕಾದರೆ ಕಾವ್ಯಗಳನ್ನು ಓದಬೇಕು ಮತ್ತು ಕಲಿಯಬೇಕು. ಕಾವ್ಯವು ಭಾಷಾಜ್ಞಾನವನ್ನೂ, ಇತಿಹಾಸದ ಜ್ಞಾನವನ್ನೂ, ವಿನೋದವನ್ನೂ, ಬುದ್ಧಿಗೆ ಕೆಲಸವನ್ನೂ ಮತ್ತು ಚುರುಕುತನವನ್ನೂ ಕೊಡುವುದಲ್ಲದೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬ ವಿವೇಕಶಕ್ತಿಯನ್ನೂ ನೀಡುತ್ತದೆ. ಈ ನಿಟ್ಟಿನಲ್ಲಿ ಕಾವ್ಯವನ್ನು ಪ್ರತಿಯೊಬ್ಬರೂ ಕಲಿಯಬೇಕು. ಕಾವ್ಯವೆಂದಾಗ ಈ ಸಂಸ್ಕೃತಮಹಾಸಾಗರದಲ್ಲಿ ಸಾವಿರಾರು ಕಾವ್ಯಗಳು ತರಂಗಗಳಂತೆ ನೆನಪಿಗೆ ಬರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳು ಪಂಚ ಮಹಾಕಾವ್ಯಗಳು. ಅವು ಯಾವುವೆಂದರೆ ಕಾಳಿದಾಸನ ರಘುವಂಶ ಮತ್ತು ಕುಮಾರಸಂಭವ, ಭಾರವಿಯ ಕಿರಾತಾರ್ಜುನೀಯ, ಮಾಘನ ಶಿಶುಪಾಲವಧ ಮತ್ತು ಶ್ರೀಹರ್ಷನ ನೈಷಧೀಯಚರಿತ. ಈ ಐದು ಮಹಾಕಾವ್ಯಗಳನ್ನು ಕಲಿಯುವುದರಿಂದ ಸಂಸ್ಕೃತದಲ್ಲಿ ಉತ್ತಮವಾದ ಜ್ಞಾನಸಂಪತ್ತನ್ನು ಪಡೆಯಬಹುದು. ಈ ಐದು ಮಹಾಕಾವ್ಯಗಳ ಪೈಕಿ ನೈಷಧೀಯಚರಿತದ ಮೊದಲನೆಯ ಸರ್ಗವನ್ನು ವಿದ್ಯಾರ್ಥಿಗಳಿಗೆ ಪಠ್ಯವಾಗಿ ಇಡಲಾಗಿದೆ. ಇಂತಹ ಮಹಾಕಾವ್ಯವನ್ನು ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳು ಸಂಸ್ಕೃತದ ಮೂಲಕವೇ ಕಲಿಯುವುದು ಸ್ವಲ್ಪ ಕಷ್ಟವಾಗಬಹುದು. ಈ ಕಾರಣದಿಂದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು

ಗಮನದಲ್ಲಿಟ್ಟುಕೊಂಡು ಕನ್ನಡಕ್ಕೆ ಅನುವಾದವನ್ನು ಮಾಡಲಾಗಿದೆ. ಇಲ್ಲಿ ಕೊಟ್ಟಿರುವ ಅರ್ಥವು ಪ್ರಾಥಮಿಕ ಹಂತದ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡುತ್ತದೆ. ವಿದ್ಯಾರ್ಥಿಗಳಿಗೆ ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳು ತಿಳಿಯಬೇಕು ಎಂಬ ಉದ್ದೇಶದಿಂದ ಸಂಸ್ಕೃತದ ಕರ್ಮಣಿ ಪ್ರಯೋಗವನ್ನು ಕನ್ನಡದಲ್ಲಿಯೂ ಕರ್ಮಣಿ ಪ್ರಯೋಗವನ್ನಾಗಿಯೇ ಅನುವಾದಿಸಲಾಗಿದೆ. ನೈಷಧೀಯಚರಿತವನ್ನು ಚೆನ್ನಾಗಿ ಕಲಿಯಬೇಕಾದರೆ ಸಂಸ್ಕೃತವನ್ನು ಚೆನ್ನಾಗಿ ಕಲಿತು, ಸಂಸ್ಕೃತ ವ್ಯಾಖ್ಯಾನಗಳನ್ನೇ ಓದಬೇಕು. ಆಗ ಕಾವ್ಯದ ನಿಜವಾದ ರಸಾಸ್ವಾದ ನಮಗೆ ಸಿಗುತ್ತದೆ.

ನೈಷಧೀಯಚರಿತದಂತಹ ಮಹಾಕಾವ್ಯವನ್ನು ಕನ್ನಡಕ್ಕೆ ಅನುವಾದಿಸಲು ಸಾಧ್ಯವೇ ಇಲ್ಲ. ಅದರ ನಿಜವಾದ ರಸಾಸ್ವಾದ ಬೇಕಾಗಿದ್ದರೆ ಸಂಸ್ಕೃತವನ್ನು ಕಲಿಯಲೇಬೇಕು. ಹಾಗೇನಾದರೂ ಕನ್ನಡದಲ್ಲಿ ಎಲ್ಲ ಅರ್ಥಗಳನ್ನೂ, ಸಂಧಿಗಳನ್ನೂ, ಸಮಾಸಗಳನ್ನೂ, ಪಾಣಿನಿಸೂತ್ರಗಳನ್ನೂ ಬರೆಯುತ್ತಾ ಹೋದರೆ, ಒಂದು ಸರ್ಗದ ವಿವರಣೆಯೇ ಐನೂರು ಪುಟಗಳನ್ನು ಮೀರುತ್ತದೆ. ಸಂಸ್ಕೃತ ಭಾಷೆಯ ಪರಿಚಯಕ್ಕೋಸ್ಕರ ಒಂದು ಪದವನ್ನು ಇಲ್ಲಿ ನೋಡೋಣ. ವಿಭ್ರಮಃ ಅಂದರೆ ಅಮರಕೋಶದ ಪ್ರಕಾರ - ಸ್ತ್ರೀಯರು ಯೌವನದ ಮದದಿಂದ ಮಾಡುವ ಶೃಂಗಾರರಸಪ್ರಧಾನವಾದ ಚೇಷ್ಟೆ. ಆದರೆ ವಿಶಿಷ್ಟಃ ಭ್ರಮಃ ಅಂದರೆ ವಿಶೇಷವಾಗಿ ಸುತ್ತಾಡುವುದು ಮತ್ತು ವಿಶೇಷವಾದ ಭ್ರಾಂತಿ ಎಂಬ ಅರ್ಥಗಳೂ ಸಿಗುತ್ತವೆ. ವೇಃ ಭ್ರಮಃ ಎಂದು ಬಿಡಿಸಿದರೆ ಪಕ್ಷಿಯ ಹಾರಾಟ ಎಂಬ ಅರ್ಥವೂ ಇದೆ. ವಿಶಿಷ್ಟಃ ಭ್ರಮಃ ಯಸ್ಯ ಸಃ ಎಂಬ ಬಹುವ್ರೀಹಿಯಿಂದ, ವಿಶಿಷ್ಟವಾದ ನಡವಳಿಕೆ ಇರುವವನು ಮತ್ತು ವಿಶಿಷ್ಟವಾದ ಭ್ರಾಂತಿ ಇರುವವನು ಎಂಬ ಅರ್ಥಗಳೂ ಸಿಗುತ್ತವೆ. ವಿಭಾಂ ಕರೋತಿ, ವಿಭವಯತಿ ಎಂಬ ನಾಮಧಾತುವನ್ನು ಬಳಸಿ, ಕ್ವಿಪ್-ಪ್ರತ್ಯಯವನ್ನು ಬಳಸಿದರೆ, ವಿಬ್-ವಿಭೌ-ವಿಭಃ ಎಂಬ ರೂಪಗಳು ಸಿಗುತ್ತವೆ. ಕಾಂತಿಯನ್ನು ಅಥವಾ ಬಿಸಿಲನ್ನು ಮಾಡುವವನು ಸೂರ್ಯ ಎಂದರ್ಥ. ವಿಭಿ ರಮಃ = ವಿಭ್ರಮಃ, ಸೂರ್ಯನಲ್ಲಿ ರಮಿಸುವುದು ಅಂದರೆ ಸೂರ್ಯೋಪಾಸನೆ ಎಂಬ ಅರ್ಥವನ್ನೂ ಕಲ್ಪಿಸಬಹುದು. ಕೆಲವೊಮ್ಮೆ ಸಂಭ್ರಮ ಅಂದರೆ ಸಂತೋಷ ಎಂಬ ಅರ್ಥದಲ್ಲಿಯೂ ವಿಭ್ರಮ ಎಂಬ ಶಬ್ದವು ಬಳಕೆಯಾಗುತ್ತದೆ. ವಿಶಿಷ್ಟಃ ಭ್ರಮಃ ಅಂದರೆ ವಿಶಿಷ್ಟವಾದ ನಡಿಗೆ, ಹೆಜ್ಜೆ ಮತ್ತು ನೃತ್ಯ ಎಂಬ ಈ ಮೂರು ಅರ್ಥಗಳೂ ಸಿಗುತ್ತವೆ. ಹೀಗೆ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದವನಿಗೆ ಚಿತ್ರ-ವಿಚಿತ್ರವಾದ ಅರ್ಥಗಳನ್ನು ಕಲ್ಪಿಸಲು ಸಾಧ್ಯವಿದೆ. ಇದನ್ನು ಅನುವಾದದಿಂದ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಮುಖ್ಯವಾದ

ಕೆಲವನ್ನು ಮಾತ್ರ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಉಳಿದವುಗಳನ್ನು ಗುರುಗಳಲ್ಲಿ ಕೇಳಿ ಕಲಿಯಬೇಕು. ಹಾಗೆಯೇ ಪ್ರತಿಯೊಂದು ಶ್ಲೋಕಕ್ಕೂ ಒಂದು ಅರ್ಥವನ್ನು ಮಾತ್ರ ವಿವರಿಸಿದರೆ, ಇಷ್ಟು ಅದ್ಭುತವಾದ ಕಾವ್ಯಕ್ಕೆ ಅಪಚಾರವೆಸಗಿದಂತೆ ಆಗುವುದಂತೂ ನಿಜ. ಈ ಕಾರಣದಿಂದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಅಲ್ಲಲ್ಲಿ ಕೆಲವು ವಿಶೇಷ ಅರ್ಥಗಳನ್ನೂ ವಿವರಿಸಲಾಗಿದೆ. ಉಳಿದ ಅರ್ಥಗಳನ್ನು ಸಂಸ್ಕೃತ ವ್ಯಾಖ್ಯಾನಗಳನ್ನು ಓದಿ ತಿಳಿಯುವುದು ಅಗತ್ಯವಾಗಿದೆ. ವಿದ್ಯಾರ್ಥಿಗಳು ಮತ್ತು ಓದುಗರು ಈ ಕನ್ನಡ ಅನುವಾದ ಮತ್ತು ವಿವರಣೆಗಳನ್ನು ಮೆಚ್ಚಿದರೆ ಈ ನನ್ನ ಪ್ರಯತ್ನವು ಸಾರ್ಥಕವಾಗುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಮತ್ತು ಕಾವ್ಯವನ್ನು ಪ್ರಾಥಮಿಕ ಹಂತದಲ್ಲಿ ಕಲಿಯುವವರಿಗೆ ಈ ನನ್ನ ಒಂದನೇ ಸರ್ಗದ ವಿವರಣೆಯು ಉಪಯೋಗವಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸಂಸ್ಕೃತವನ್ನು ಸ್ವಲ್ಪ ಬಲ್ಲವರು ಕನ್ನಡದ ಅನುವಾದವನ್ನು ಓದುವುದಕ್ಕೂ, ಸಂಸ್ಕೃತ ಗೊತ್ತಿಲ್ಲದವರು ಕನ್ನಡದ ಅನುವಾದವನ್ನು ಓದುವುದಕ್ಕೂ ಬಹಳ ವ್ಯತ್ಯಾಸವಿದೆ. ಸಃ ಅಂದರೆ ಅವನು ಎಂಬುದು ತಿಳಿದಿರುತ್ತದೆ. ಆದರೆ ಪ್ರತಿಬಾರಿಯೂ ಅವನು ಎಂದು ಬರೆದಾಗ, ನಿಜವಾದ ವ್ಯಕ್ತಿಯು ಗೊತ್ತಿರುವುದಿಲ್ಲ. ಸಃ ಎಂಬುದಕ್ಕೆ ನಳನು ಎಂದು ಬರೆದರೆ, ಸಂಸ್ಕೃತ ಗೊತ್ತಿಲ್ಲದವರು, ಸಃ ಎಂಬುದರ ಅರ್ಥ ನಳ ಎಂದು ಭಾವಿಸುತ್ತಾರೆ. ಇಂತಹ ಗೊಂದಲಗಳನ್ನು ನಿವಾರಣೆ ಮಾಡಲೆಂದು ಆವರಣ ಚಿಹ್ನೆಯಲ್ಲಿ ನಳನು ಎಂದು ಬರೆಯಲಾಗಿದೆ. ಏನೇ ಇರಲಿ, ಕಾಳಿದಾಸನು ಮಾಲವಿಕಾಗ್ನಿಮಿತ್ರದಲ್ಲಿ ಹೇಳಿರುವಂತೆ -

ಶ್ಲಿಷ್ಟಾ ಕ್ರಿಯಾ ಕಸ್ಯಚಿದಾತ್ಮಸಂಸ್ಥಾ ಸಂಕ್ರಾಂತಿರನ್ಯಸ್ಯ ವಿಶೇಷಯುಕ್ತಾ |
ಯಸ್ಯೋಭಯಂ ಸಾಧು ಸ ಶಿಕ್ಷಕಾಣಾಂ ಧುರಿ ಪ್ರತಿಷ್ಠಾಪಯಿತವ್ಯ ಏವ ||

ಕವಿಗಳ, ಗುರುಗಳ, ಪಂಡಿತರ ಅಥವಾ ಅನುವಾದಕರ ಭಾವನೆಯು ವಿದ್ಯಾರ್ಥಿಗಳಿಗೆ ತಲುಪಬೇಕು. ಹಾಗೆ ತಲುಪಿದರೆ ಮಾತ್ರ ಅವನು ನಿಜವಾದ ಗುರು, ಪಂಡಿತ ಅಥವಾ ಅನುವಾದಕ ಆಗುತ್ತಾನೆ. ಈ ಕಾವ್ಯದಲ್ಲಿ ಅನೇಕ ಪಾಠಭೇದಗಳು ಇರುವುದರಿಂದ ಇದೇ ಸರಿ ಎಂದು ಭಾವಿಸುವ ಅಗತ್ಯವಿಲ್ಲ. ಬೇರೆ ಬೇರೆ ಪುಸ್ತಕಗಳಲ್ಲಿ ಶ್ಲೋಕಗಳ ಪದಗಳು ಸ್ವಲ್ಪ ವ್ಯತ್ಯಾಸವಾಗಿರುವುದರಿಂದ, ಸಂದರ್ಭಕ್ಕೆ ತಕ್ಕಂತೆ ವಿವರಿಸಿದರೆ ತಪ್ಪೇನೂ ಇಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಶ್ಲೋಕಗಳನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ

ನೈಷಧೀಯಚರಿತದ ಮೊದಲನೆಯ ಸರ್ಗದ ಅನುವಾದವನ್ನು ಮಾಡಲಾಗಿದೆ. ವಿದ್ಯಾರ್ಥಿಗಳು ಮತ್ತು ಕಾವ್ಯರಸಾಸ್ವಾದಕರು ಇದರ ಸದುಪಯೋಗವನ್ನು ಪಡೆಯಬೇಕೆಂದು ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

ಇದರೊಂದಿಗೆ ಒಂದು ಮಾತನ್ನು ಇಲ್ಲಿ ಹೇಳಲೇಬೇಕಾಗಿದೆ. ನನ್ನ ವೈಯಕ್ತಿಕ ಕೆಲಸಗಳ ಒತ್ತಡದಿಂದ ಇಂತಹ ಮಹಾಕಾವ್ಯವನ್ನು ವಿವರಿಸಲು ನನಗೆ ಆಸಕ್ತಿಯೂ ಇಲ್ಲ ಮತ್ತು ಸಮಯವೂ ಇಲ್ಲ. ಆದರೆ ಅನೇಕ ಶಾಸ್ತ್ರಗಳಲ್ಲಿ ನಿಷ್ಣಾತರೂ, ವಿದ್ವದ್ವರೇಣ್ಯರೂ, ಪೂಜ್ಯರೂ ಆದ ವಿದ್ವಾನ್ ಡಾ. ಹೆಚ್. ವಿ. ನಾಗರಾಜರಾವ್ ರವರು ಸೂಚಿಸಿರುವುದರಿಂದ ಈ ಕೆಲಸವನ್ನು ಮಾಡಲು ಮುಂದಾಗಿದ್ದೇನೆ. ನನಗೆ ಬಹಳ ಆಶ್ಚರ್ಯವಾಯಿತು. ಹಾಗೆಯೇ ಇಲ್ಲವೆನ್ನಲು ನನಗೆ ಮನಸ್ಸಾಗಲಿಲ್ಲ. ವಯಸ್ಸಿನಲ್ಲಿ ಬಹಳ ಚಿಕ್ಕವನಾದ ನನ್ನ ಮೇಲೆ ಅವರು ಇಟ್ಟಿರುವ ಅಭಿಮಾನ ಮತ್ತು ವಿಶ್ವಾಸಗಳನ್ನು ನೋಡಿ ನನಗೆ ದಿಗ್ಭ್ರಮೆಯಾಗಿದೆ. ಪೂಜ್ಯರ ಆಶೀರ್ವಾದ ಸದಾ ನನ್ನ ಮೇಲೆ ಇರಲೆಂದು ಅವರಲ್ಲಿಯೇ ಪ್ರಾರ್ಥಿಸುತ್ತೇನೆ. ಹಾಗೆಯೇ ನನಗೆ ವಿದ್ಯೆಯನ್ನು ನೀಡಿದ ವಿದ್ಯಾಗುರುಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡುತ್ತಾ ವಿರಮಿಸುತ್ತೇನೆ.

ಸಂಸ್ಕೃತಸೇವಾಕಾಂಕ್ಷೀ

ಡಾ. ದೀಪಕಭಟ್ಟ, ಮೈಸೂರು.

ಕವಿಯ ಪರಿಚಯ

ನೈಷಧಂ ವಿದ್ವದೌಷಧಮ್, ಉದಿತೇ ನೈಷಧೇ ಕಾವ್ಯೇ ಕ್ವ ಮಾಘಃ ಕ್ವ ಚ ಭಾರವಿಃ - ಮೊದಲಾದ ವಚನಗಳಿಂದ ನೈಷಧೀಯಚರಿತದ ಮಹತ್ತ್ವವು ಸ್ಪಷ್ಟವಾಗಿ ತಿಳಿಯುತ್ತದೆ. ಇಂತಹ ಗಂಭೀರವಾದ ಮಹಾಕಾವ್ಯಕ್ಕೆ ಕೇವಲ ಲೇಖಕರ ನುಡಿ ಮಾತ್ರ ಇದ್ದರೆ, ಕಾವ್ಯದ ಪರಿಚಯವೇ ಆಗುವುದಿಲ್ಲ. ಈ ಕಾರಣದಿಂದ ಕವಿ-ಪರಿಚಯ ಮತ್ತು ನೈಷಧೀಯಚರಿತೆ ಎಂಬ ಸಣ್ಣ ಪೀಠಿಕೆಯನ್ನು ಬರೆಯಲಾಗಿದೆ. ಓದುಗರು ಈ ಪೀಠಿಕೆಯನ್ನು ಓದಿಕೊಂಡು ಅನಂತರ ಕಾವ್ಯವನ್ನು ಓದಬೇಕಾಗಿ ವಿನಮ್ರವಾದ ವಿನಂತಿ. ಈ ನೈಷಧೀಯಚರಿತಮ್ ಎಂಬ ಮಹಾಕಾವ್ಯವನ್ನು ಬರೆದವನು ಕವಿ ಶ್ರೀಹರ್ಷ. ಇವನ ತಂದೆ ಶ್ರೀಹೀರ. ತಾಯಿ ಮಾಮಲ್ಲದೇವಿ. ಶ್ರೀಹರ್ಷನು ಕಾನ್ಯಕುಬ್ಜದ ರಾಜನಾದ ಜಯಂತಚಂದ್ರನ ಆಸ್ಥಾನದಲ್ಲಿ ಇದ್ದನೆಂದು ತಿಳಿದುಬರುತ್ತದೆ. ಕಾಶಿಯಲ್ಲಿ ಗೋವಿಂದಚಂದ್ರನೆಂಬ ರಾಜನಿದ್ದನು. ಅವನ ಮಗ ವಿಜಯಚಂದ್ರ. ಇವನಲ್ಲಿ ಶ್ರೀಹೀರನು ಆಶ್ರಯವನ್ನು ಪಡೆದು ಆಸ್ಥಾನಪಂಡಿತನಾಗಿ ವಿರಾಜಿಸಿದ್ದನು. ವಿಜಯಚಂದ್ರನ ಮಗನೇ ಜಯಂತಚಂದ್ರ. ಇವನು ಕ್ರಿಸ್ತಶಕ 1169 ರಿಂದ 1190 ರವರೆಗೆ ಕಾನ್ಯಕುಬ್ಜವನ್ನು ಆಳಿದನು. ಜಯಂತಚಂದ್ರನ ಆಸ್ಥಾನದಲ್ಲಿ ಶ್ರೀಹೀರನ ಮಗನಾದ ಶ್ರೀಹರ್ಷನು ಆಸ್ಥಾನ ಪಂಡಿತನಾಗಿದ್ದನು.

ಒಮ್ಮೆ ರಾಜನು ಏನಾದರೊಂದು ಕಾವ್ಯವನ್ನು ರಚಿಸು ಎಂಬುದಾಗಿ ಶ್ರೀಹರ್ಷನಿಗೆ ಹೇಳುತ್ತಾನೆ. ಆಗ ಶ್ರೀಹರ್ಷನು ನೈಷಧೀಯಚರಿತವನ್ನು ರಚಿಸಿ ರಾಜನಿಗೆ ತೋರಿಸುತ್ತಾನೆ. ರಾಜನು ಬಹಳವಾಗಿ ಸಂತೋಷಪಡುತ್ತಾನೆ. ಆದರೆ ಈ ಕಾವ್ಯದ ನೈಜತೆಯನ್ನು ತಿಳಿಯಬೇಕಾದರೆ ಕಾಶ್ಮೀರಕ್ಕೆ ಹೋಗು. ಅಲ್ಲಿನ ಪಂಡಿತರಿಗೆ ತೋರಿಸು. ಹಾಗೆಯೇ ಅಲ್ಲಿ ಸರಸ್ವತಿಯೂ ಇರುತ್ತಾಳೆ. ಕಾವ್ಯ ಉತ್ತಮವಾಗಿದ್ದರೆ ಚೆನ್ನಾಗಿದೆ ಎನ್ನುತ್ತಾಳೆ. ಇಲ್ಲವಾದರೆ ದೂರಕ್ಕೆ ಎಸೆಯುತ್ತಾಳೆ ಎಂದು ರಾಜನು ಹೇಳುತ್ತಾನೆ. ಅದರಂತೆಯೇ ಶ್ರೀಹರ್ಷನು ಕಾವ್ಯವನ್ನು ಪಂಡಿತರಿಗೆ ತೋರಿಸುತ್ತಾನೆ. ಹಾಗೆಯೇ ಸರಸ್ವತಿಗೆ ಸಮರ್ಪಿಸಿದಾಗ, ಅವಳು ಕೋಪದಿಂದ ದೂರಕ್ಕೆ ಎಸೆಯುತ್ತಾಳೆ. ಕಾರಣವೇನೆಂದು ಕೇಳಿದಾಗ, ಸರಸ್ವತಿಯಾದ ನನ್ನನ್ನು ವಿಷ್ಣುವಿನ ಪತ್ನಿಯೆಂದು ವರ್ಣಿಸಿರುವಿ ಎನ್ನುತ್ತಾಳೆ. ಆಗ ಶ್ರೀಹರ್ಷನು, ಸರಸ್ವತಿಯು ವಿಷ್ಣುವಿನ ಪತ್ನಿಯಾಗಿಯೂ ಅವತಾರವನ್ನು

ತಾಳಿದ್ದಾಳೆ ಎಂಬ ಉಲ್ಲೇಖ ಪುರಾಣಗಳಲ್ಲಿದೆ. ಅದಕ್ಕೋಸ್ಕರ ಬರೆದಿದ್ದೇನೆ ಎಂಬ ಸಮಾಧಾನವನ್ನು ನೀಡುತ್ತಾನೆ. ಆಗ ಸರಸ್ವತಿಯೂ ಸಂತುಷ್ಟಳಾಗಿ ಕಾವ್ಯವನ್ನು ಕೈಯಲ್ಲಿ ಧರಿಸುತ್ತಾಳೆ. ಹಾಗೆಯೇ ಅಲ್ಲಿ ಪುಷ್ಪವೃಷ್ಟಿಯಾಗುತ್ತದೆ. ಹೀಗೆ ಕಾವ್ಯಕ್ಕೆ ಮನ್ನಣೆ ಸಿಕ್ಕಿದ ಮೇಲೆ ಅದನ್ನು ಕಾಶ್ಮೀರ ರಾಜನಿಗೂ ತೋರಿಸಬೇಕೆಂದು ಶ್ರೀಹರ್ಷನು ಕೇಳಿಕೊಳ್ಳುತ್ತಾನೆ. ಆದರೆ ರಾಜನ ದರ್ಶನಕ್ಕೆ ಪಂಡಿತರು ಅವಕಾಶವನ್ನು ಕೊಡುವುದಿಲ್ಲ. ಅನಂತರ ದುಃಖದಿಂದ ಬಹಳ ಸಮಯ ಅಲ್ಲಲ್ಲಿ ಅಲೆಯುತ್ತಾನೆ. ಒಮ್ಮೆ ಒಂದು ನದಿಯ ತೀರದಲ್ಲಿ ಕುಳಿತಿರುವಾಗ, ಇಬ್ಬರು ಮಹಿಳೆಯರಿಗೆ ಕಲಹವು ಉಂಟಾಗುತ್ತದೆ. ಕಲಹದ ಪರಿಹಾರಕ್ಕಾಗಿ ಅವರು ರಾಜನಲ್ಲಿಗೆ ಹೋದಾಗ, ಇದಕ್ಕೆ ಸಾಕ್ಷಿ ಯಾರಿದ್ದಾರೆಂದು ರಾಜನು ಕೇಳುತ್ತಾನೆ. ಆಗ ನದಿಯ ತೀರದಲ್ಲಿದ್ದ ಶ್ರೀಹರ್ಷನನ್ನು ಸಾಕ್ಷಿಗಾಗಿ ರಾಜನ ಹತ್ತಿರ ಕರೆತರುತ್ತಾರೆ. ಆಗ ಶ್ರೀಹರ್ಷನು, ನನಗೆ ಈ ದೇಶದ ಭಾಷೆ ಬರುವುದಿಲ್ಲ. ಆದರೆ ಮಹಿಳೆಯರು ಹೇಳಿದ ಶಬ್ದ-ವಾಕ್ಯಗಳನ್ನು ಹೇಳಬಲ್ಲೆ ಎನ್ನುತ್ತಾ, ಅವರ ಸಂಭಾಷಣೆಯನ್ನು ಯಥಾವತ್ತಾಗಿ ಹೇಳುತ್ತಾನೆ. ಅವನ ಪಾಂಡಿತ್ಯವನ್ನು ಕಂಡು ಕಾಶ್ಮೀರದ ರಾಜನು ಬೆರಗಾಗುತ್ತಾನೆ. ಹೀಗೆ ಕಾಶ್ಮೀರ ರಾಜನ ದರ್ಶನವನ್ನು ಪಡೆದು, ಕಾವ್ಯವನ್ನೂ ರಾಜನಿಗೆ ಅರ್ಪಿಸಿ, ರಾಜಮನ್ನಣೆಯನ್ನೂ ಪಡೆದು ತನ್ನ ಸ್ವಂತ ಊರಾದ ಕಾಶಿಗೆ ಶ್ರೀಹರ್ಷನು ಹಿಂತಿರುಗುತ್ತಾನೆ. ಇದು ಶ್ರೀಹರ್ಷನು ನೈಷಧೀಯಚರಿತವನ್ನು ಬರೆದ ಕಾಲದಲ್ಲಿ ನಡೆದ ಘಟನೆಯಾಗಿದೆ.

ನೈಷಧೀಯಚರಿತೆ

ನಳ-ದಮಯಂತಿ ಎಂಬ ಹೆಸರನ್ನು ಕೇಳದೇ ಇರುವವರು ಬಹಳ ವಿರಳ. ಅಷ್ಟೊಂದು ಪ್ರಸಿದ್ಧವಾಗಿದೆ ಈ ನಳ-ದಮಯಂತಿಯರ ಕಥೆ. ನಳ-ದಮಯಂತಿಯರ ಹೆಸರು ಮತ್ತು ಕಥೆ ಎಷ್ಟು ಪ್ರಸಿದ್ಧವೋ, ನಳಪಾಕ ಎಂಬ ಪದವೂ ಕೂಡ ಅಷ್ಟೇ ಪ್ರಸಿದ್ಧವಾಗಿದೆ. ಆದ್ದರಿಂದಲೇ ಯಾರಾದರೂ ತುಂಬ ಚೆನ್ನಾಗಿ ಅಡುಗೆಯನ್ನು ಮಾಡಿದರೆ ಅದನ್ನು ನಳಪಾಕ ಎಂದು ಕೊಂಡಾಡುವುದು ಈಗಲೂ ರೂಢಿಯಲ್ಲಿದೆ. ಅಂದರೆ ನಳಚಕ್ರವರ್ತಿಯ ಅಡುಗೆ ಅಷ್ಟೊಂದು ಶ್ರೇಷ್ಠವಾದ ಅಡುಗೆಯಾಗಿರುತ್ತಿತ್ತು. ನಳ ಚಕ್ರವರ್ತಿಯು ಪಾಕಶಾಸ್ತ್ರ ಪ್ರವೀಣನಾಗಿದ್ದನು. ಆದ್ದರಿಂದಲೇ ನಳಪಾಕ ಎಂಬ ಬಿರುದು ಇಂದಿಗೂ ಕೂಡ ರೂಢಿಯಲ್ಲಿದೆ.

ವಿದರ್ಭ ದೇಶದ ಮಹಾರಾಜ ಭೀಮ. ಇವನ ಮಗಳು ರಾಜಕುಮಾರಿ ದಮಯಂತಿ. ಇವಳಿಗೆ ತಂದೆಯಾದ ಭೀಮನು ಬಹಳ ವಿಜೃಂಭಣೆಯಿಂದ ಸ್ವಯಂವರವನ್ನು ಏರ್ಪಡಿಸುತ್ತಾನೆ. ಸ್ವಯಂವರ ಅಂದರೆ ಸ್ವಯಂ = ತಾನೇ, ವರ = ವರನನ್ನು ಹುಡುಕುವುದು ಎಂದರ್ಥ. ಸ್ವಯಂವರ ಸಭೆಗೆ ಎಲ್ಲ ದೇಶಗಳ ರಾಜರಿಗೆ, ಮಹಾರಾಜರಿಗೆ, ರಾಜಕುಮಾರರಿಗೆ ವಿಶೇಷವಾದ ಆಹ್ವಾನವನ್ನು ನೀಡಲಾಗುತ್ತದೆ. ಹಾಗೆಯೇ ಸ್ವಯಂವರವನ್ನು ನೋಡಲು ಅನೇಕ ದೇಶಗಳ ಜನರು ಅಲ್ಲಿಗೆ ಬಂದಿರುತ್ತಾರೆ. ಸ್ವಯಂವರ ಮಾಲೆಯನ್ನು ಕೈಯಲ್ಲಿ ಹಿಡಿದು ರಾಜಕುಮಾರಿಯು ಸ್ವಯಂವರ ಸಭೆಯಲ್ಲಿ ನೆರೆದಿರುವ ಎಲ್ಲ ರಾಜ-ಮಹಾರಾಜರನ್ನೂ, ರಾಜಕುಮಾರರನ್ನೂ ನೋಡುತ್ತಾ ಸುತ್ತಾಡುತ್ತಾಳೆ. ಯಾವ ರಾಜ ಅಥವಾ ರಾಜಕುಮಾರನು ಇಷ್ಟವಾಗುತ್ತಾನೋ ಅವನ ಕೊರಳಿಗೆ ಸ್ವಯಂವರ ಮಾಲೆಯನ್ನು ಹಾಕುತ್ತಾಳೆ. ಹೀಗೆ ರಾಜಕುಮಾರಿಯು ತನಗೆ ಇಷ್ಟವಾದ ವರನನ್ನು ಆರಿಸಿಕೊಳ್ಳುತ್ತಾಳೆ. ಇದನ್ನು ಸ್ವಯಂವರ ಎನ್ನುತ್ತಾರೆ. ಅನಂತರ ಶುಭ ಮುಹೂರ್ತದಲ್ಲಿ ಅವರಿಬ್ಬರಿಗೂ ಧಾರ್ಮಿಕ ವಿಧಿ-ವಿಧಾನಗಳ ಮೂಲಕ ವಿವಾಹವು ನೆರವೇರುತ್ತದೆ.

ನಿಷಧ ದೇಶದ ಮಹಾರಾಜ ನಳ ಚಕ್ರವರ್ತಿ ಮತ್ತು ವಿದರ್ಭ ದೇಶದ ಮಹಾರಾಜ ಭೀಮನ ಮಗಳು ರಾಜಕುಮಾರಿ ದಮಯಂತಿಯ ಸ್ವಯಂವರ ಮತ್ತು ಇವರಿಬ್ಬರ ವಿವಾಹವೇ ನೈಷಧೀಯಚರಿತದ ಕಥಾವಸ್ತುವಾಗಿದೆ. ಸೂರ್ಯನಂತೆ ತೇಜಸ್ವಿಯಾದ ನಳನೆಂಬ ರಾಜನಿಗೆ ದಮಯಂತಿಯಲ್ಲಿ ಅನುರಾಗವುಂಟಾಗುತ್ತದೆ. ಹಾಗೆಯೇ ದಮಯಂತಿಗೂ ನಳ ಚಕ್ರವರ್ತಿಯ ಬಗ್ಗೆ

ಒಲವು-ಅನುರಾಗಗಳು ಉಂಟಾಗುತ್ತವೆ. ನಳ ಮಹಾರಾಜನಿಗೆ ದಮಯಂತಿಯ ಮೇಲೆ ಒಲವು ಹೆಚ್ಚಾದಂತೆ ವಿರಹವೇದನೆಯೂ ಹೆಚ್ಚಾಗುತ್ತದೆ. ಈ ಕಾರಣದಿಂದ ಅರಮನೆಯಲ್ಲಿ ಎಲ್ಲರೊಂದಿಗೆ ಇರಲು ಸಾಧ್ಯವಾಗದೆ ಏಕಾಂತ ಸ್ಥಳಕ್ಕೆ ಹೋಗಬೇಕೆಂದು ನಿಶ್ಚಯಿಸಿ ಉದ್ಯಾನಕ್ಕೆ ಹೋಗುತ್ತಾನೆ. ಉದ್ಯಾನವೆಂದರೆ ಕೇವಲ ಹೂವಿನ ಗಿಡಗಳಿರುವ ಉದ್ಯಾನವಲ್ಲ. ಅಲ್ಲಿ ದೊಡ್ಡ ದೊಡ್ಡ ಮರಗಳು, ಸರೋವರ, ಪಕ್ಷಿಗಳು, ಜಿಂಕೆಗಳು ಇವೆಲ್ಲವೂ ಇರುತ್ತವೆ. ಆದ್ದರಿಂದ ಅದೊಂದು ದೊಡ್ಡ ಅರಣ್ಯದಂತೆಯೇ ಭಾಸವಾಗುತ್ತದೆ. ಅಂತಹ ಉದ್ಯಾನದಲ್ಲಿ ವಿಹರಿಸುವಾಗ ಸರೋವರದಲ್ಲಿ ಅವನಿಗೆ ಒಂದು ರಾಜಹಂಸವು ಕಾಣಿಸುತ್ತದೆ. ಅದನ್ನು ಹಿಡಿದು, ಚೆನ್ನಾಗಿ ಪಳಗಿಸಿ, ದಮಯಂತಿಯ ಹತ್ತಿರಕ್ಕೆ ಕಳಿಸುತ್ತಾನೆ. ಆಮೇಲೆ ಆ ರಾಜಹಂಸವು ಇವರಿಬ್ಬರ ನಡುವೆ ದೂತನ ಪಾತ್ರವನ್ನು ನಿರ್ವಹಿಸುತ್ತದೆ. ನಳ ಮತ್ತು ದಮಯಂತಿ ತಮ್ಮ ಭಾವನೆಗಳನ್ನು ರಾಜಹಂಸದ ಮೂಲಕ ಹಂಚಿಕೊಳ್ಳುತ್ತಾರೆ. ಹೀಗೆ ಅವರಿಬ್ಬರಲ್ಲಿ ಒಡನಾಟವಿರುತ್ತದೆ ಮತ್ತು ತಾನು ನಳ ಚಕ್ರವರ್ತಿಯನ್ನೇ ವಿವಾಹವಾಗಬೇಕೆಂದು ದಮಯಂತಿಯು ನಿಶ್ಚಯಿಸಿರುತ್ತಾಳೆ. ಸ್ವಯಂವರ ಸಭೆಗೆ ಬಂದ ಎಲ್ಲ ರಾಜ-ಮಹಾರಾಜರನ್ನೂ ಸಾಕ್ಷಾತ್ ಸರಸ್ವತಿಯೇ ಪರಿಚಯವನ್ನು ಮಾಡಿಕೊಡುತ್ತಾಳೆ. ಅಲ್ಲಿ ಇಂದ್ರ, ಅಗ್ನಿ, ಯಮ ಮತ್ತು ವರುಣ ಎಂಬ ನಾಲ್ಕು ದಿಕ್ಪಾಲದೇವತೆಗಳೂ ದಮಯಂತಿಯಲ್ಲಿ ಅನುರಕ್ತರಾಗಿ ನಳನ ವೇಷವನ್ನೇ ಧರಿಸಿ, ನಳನ ಜೊತೆಯಲ್ಲಿ ಕುಳಿತಿರುತ್ತಾರೆ. ಆದರೆ ಸರಸ್ವತಿಯ ಶ್ಲೇಷಮಯವಾದ ಮಾತಿನಿಂದ ಮತ್ತು ದಮಯಂತಿಯು ದಿಕ್ಪಾಲಕರನ್ನು ಕುರಿತು ಮಾಡಿದ ಪ್ರಾರ್ಥನೆಯಿಂದ ದಿಕ್ಪಾಲಕರು ಸಂತುಷ್ಟರಾಗಿ, ನಿಜವಾದ ನಳನನ್ನು ತೋರಿಸುತ್ತಾರೆ. ದಮಯಂತಿಯು ಸ್ವಯಂವರ ಮಾಲೆಯನ್ನು ನಳ ಚಕ್ರವರ್ತಿಯ ಕೊರಳಿಗೆ ಹಾಕುತ್ತಾಳೆ. ಅವರಿಬ್ಬರ ವಿವಾಹವು ನಿರ್ವಿಘ್ನವಾಗಿ ನೆರವೇರುತ್ತದೆ. ಹೀಗೆ ಕಥೆಯು ಮುಂದುವರೆಯುತ್ತದೆ. ಶ್ರೀಹರ್ಷನು ಮಾಡಿರುವ ವರ್ಣನೆಯು ರಮಣೀಯವಾಗಿಯೂ, ಗಂಭೀರವಾಗಿಯೂ ಇದೆ. ಅರ್ಥಮಾಧುರ್ಯ, ಅರ್ಥಗಾಂಭೀರ್ಯ, ಶಬ್ದಮಾಧುರ್ಯ, ಶಬ್ದಗಾಂಭೀರ್ಯ, ಭಾವಪುಷ್ಟಿ, ಪದಲಾಲಿತ್ಯ, ಶಬ್ದಚಮತ್ಕಾರ, ಅರ್ಥಚಮತ್ಕಾರ, ನವರಸಗಳು, ಅಲಂಕಾರಗಳು, ಧ್ವನಿ, ವ್ಯಂಗ್ಯಾರ್ಥ - ಹೀಗೆ ಅನೇಕ ಆಯಾಮಗಳನ್ನು ಹೊಂದಿರುವ ಈ ಮಹಾಕಾವ್ಯವು ಪಂಡಿತರಿಗೆ ಮಾತ್ರ ಅತ್ಯಂತ ಪ್ರಿಯವಾಗಬಲ್ಲದು. ಪಾಂಡಿತ್ಯವಿಲ್ಲದವರಿಗೆ - ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಣಮ್ - ಎಂಬಂತೆ ಭಯಂಕರವಾದ ಅರಣ್ಯದಂತೆ

ಭಾಸವಾಗುತ್ತದೆ. ಶ್ಲೇಷ, ಉತ್ಪ್ರೇಕ್ಷೆ, ಅತಿಶಯೋಕ್ತಿಗಳನ್ನು ಕವಿಯು ಹೇರಳವಾಗಿ ತೋರಿಸಿದ್ದಾನೆ. ಇಂತಹ ಅದ್ಭುತವಾದ ಮಹಾಕಾವ್ಯಕ್ಕೆ ಪೀಠಿಕೆಯನ್ನು ಬರೆಯದೆ, ಕೇವಲ ಶ್ಲೋಕಗಳಿಗೆ ಅರ್ಥವನ್ನು ಬರೆದರೆ ವಿದ್ಯಾರ್ಥಿಗಳಿಗಾಗಲಿ ಅಥವಾ ಕಲಿಯುವವರಿಗಾಗಲಿ ಕಾವ್ಯದ ಪರಿಚಯವೇ ಆಗುವುದಿಲ್ಲ. ಈ ಕಾರಣದಿಂದ ಮುನ್ನುಡಿಯ ಜೊತೆಗೆ ಸರಳವಾದ ಪೀಠಿಕೆಯನ್ನು ಬರೆಯಲಾಗಿದೆ. ಇದು ಶ್ರೀಹರ್ಷನ ನೈಷಧೀಯಚರಿತವನ್ನು ಕಲಿಯುವವರಿಗೆ ಉಪಯೋಗವಾಗಲೆಂದು ಆಶಿಸುತ್ತೇನೆ.

ಮೊದಲನೆಯ ಸರ್ಗದ ಸಾರಾಂಶ

ನಿಷಧದೇಶದ ಚಕ್ರವರ್ತಿಯಾಗಿ ನಳನೆಂಬ ರಾಜನಿರುತ್ತಾನೆ. ಇವನು ಸಕಲಸದ್ಗುಣ-ಶಾಲಿಯೂ, ಸಕಲಕಲಾವಲ್ಲಭನೂ, ಚತುರ್ದಶವಿದ್ಯಾವಿಚಕ್ಷಣನೂ, ಅಷ್ಟಾದಶವಿದ್ಯಾಪ್ರವೀಣನೂ ಮತ್ತು ಚತುಃಷಷ್ಟಿಕಲಾಪಾರಂಗತನೂ ಆಗಿರುತ್ತಾನೆ. ಇವನ ಸೌಮ್ಯ ಸ್ವಭಾವ, ಪರಾಕ್ರಮ, ದಯಾಗುಣ, ಸೌಂದರ್ಯ, ಸಂಪತ್ತು, ಪಾಂಡಿತ್ಯ, ಜ್ಞಾನ, ವಿವೇಕ, ಸರಳತೆ ಮತ್ತು ಪ್ರಜಾನುರಾಗ - ಇವೆಲ್ಲವೂ ಇವನ ಕೀರ್ತಿಯನ್ನು ಹೆಚ್ಚಿಸಿರುತ್ತದೆ. ಜನರು ಆಡುವ ಮಾತುಗಳಿಂದ, ನಳನಿಗೆ ದಮಯಂತಿಯ ಬಗ್ಗೆ ತಿಳಿಯುತ್ತದೆ. ದಮಯಂತಿಗೂ ಜನರ ಮಾತಿನಿಂದಲೇ ನಳನ ವಿದ್ಯೆ, ಸೌಂದರ್ಯ, ಪರಾಕ್ರಮ ಮೊದಲಾದವುಗಳು ತಿಳಿಯುತ್ತವೆ. ಈ ಕಾರಣದಿಂದ ನಳನಿಗೆ ವಿದರ್ಭದೇಶದ ರಾಜ ಭೀಮನ ಮಗಳಾದ ದಮಯಂತಿಯ ಮೇಲೆ ಒಲವಿರುತ್ತದೆ. ಹಾಗೆಯೇ ದಮಯಂತಿಗೂ ಸರ್ವಾಂಗಸುಂದರನಾದ ನಳನ ವಿಷಯದಲ್ಲಿ ಪ್ರೇಮಾಂಕುರವಾಗುತ್ತದೆ. ದಮಯಂತಿಯನ್ನೇ ಧ್ಯಾನ ಮಾಡುತ್ತಿರುವ ನಳನಿಗೆ ವಿರಹದ ನೋವುಗಳೇ ಹೆಚ್ಚಾಗಿ, ಒಂದು ದಿನ ಸುತ್ತಾಡಲೆಂದು ಒಂದು ಉದ್ಯಾನಕ್ಕೆ ಹೋಗಬೇಕೆಂದು ನಿಶ್ಚಯಿಸುತ್ತಾನೆ. ಒಂದು ದಿನ ಇಂದ್ರನ ಕುದುರೆಯನ್ನೂ ಮೀರಿಸುವಷ್ಟು ದೊಡ್ಡದಾದ ಕುದುರೆಯನ್ನೇರಿ ಉದ್ಯಾನಕ್ಕೆ ಹೋಗುತ್ತಾನೆ. ಉದ್ಯಾನದಲ್ಲಿ ವಿಧವಿಧವಾದ ಗಿಡ-ಮರ-ಬಳ್ಳಿಗಳನ್ನು ನೋಡುತ್ತಾನೆ. ಹಾಗೆಯೇ ಅವುಗಳಲ್ಲಿರುವ ಹೂವು-ಹಣ್ಣು-ಕಾಯಿಗಳನ್ನೂ ನೋಡಿ ಸಂಭ್ರಮಿಸುತ್ತಾನೆ. ತಂಪಾಗಿ ಬೀಸುತ್ತಿರುವ ಗಾಳಿಯು, ಬಳ್ಳಿಯೆಂಬ ನೃತ್ಯಗಾತಿಯರಿಗೆ ಗುರುವೋ ಎಂಬಂತೆ ಭಾಸವಾಗುತ್ತದೆ. ಉದ್ಯಾನದಲ್ಲಿ ಕಂಡುಬರುವ ಎಲ್ಲ ಸೌಂದರ್ಯಗಳನ್ನೂ ಆಸ್ವಾದಿಸುತ್ತಾನೆ. ಹಾಗೆಯೇ ಸಮೀಪದಲ್ಲಿರುವ ಸರೋವರದ ಹತ್ತಿರಕ್ಕೆ ಹೋಗುತ್ತಾನೆ. ಸರೋವರದಲ್ಲಿ ಹೆಣ್ಣು

ಹಂಸಗಳೊಂದಿಗೆ ಆಟವಾಡಬೇಕೆಂದು ಆಲೋಚನೆ ಮಾಡುತ್ತಿರುವ ಒಂದು ಚಿನ್ನದ ಗಂಡು ಹಂಸವನ್ನು ನೋಡುತ್ತಾನೆ. ಇದನ್ನು ನೋಡಿ ನಳನಿಗೆ ಬಹಳ ಆಶ್ಚರ್ಯವಾಗುತ್ತದೆ. ಅದನ್ನು ನಿಧಾನವಾಗಿ ಹೋಗಿ ಹಿಡಿಯುತ್ತಾನೆ. ಆ ಹಂಸವು ಬಹಳವಾಗಿ ಗೋಳಾಡುತ್ತದೆ. ನಳನಿಗೆ ಕಚ್ಚುತ್ತದೆ. ತನ್ನನ್ನು ತಾನು ಬಿಡಿಸಿಕೊಳ್ಳಬೇಕೆಂದು ಬಹಳವಾಗಿ ಪ್ರಯತ್ನಿಸುತ್ತದೆ. ಎಲ್ಲ ಪ್ರಯತ್ನಗಳೂ ವಿಫಲವಾದಾಗ ದಣಿವು-ಆತಂಕಗಳು ಹೆಚ್ಚಾಗಿ ಅದರ ಪ್ರಜ್ಞೆ ತಪ್ಪುತ್ತದೆ. ಆ ಹಂಸದ ನೋವನ್ನು ನೋಡುತ್ತಲೇ ಕರುಣಾಮಯಿಯಾದ ನಳನಿಗೆ ಕಣ್ಣೀರು ಉಕ್ಕಿ ಬರುತ್ತದೆ. ಆ ಕಣ್ಣೀರಿನ ಹನಿಯು ಕೈಯಲ್ಲಿರುವ ಹಂಸದ ಮೇಲೆ ಬೀಳುತ್ತದೆ. ಆಗ ಅದಕ್ಕೆ ಮರಳಿ ಪ್ರಜ್ಞೆ ಬಂದು ಎಚ್ಚರವಾಗುತ್ತದೆ. ಕೊನೆಗೆ ಹಂಸದ ಮೇಲೆ ನಳನಿಗೆ ಕರುಣೆಯು ಉಕ್ಕಿ ಬಂದು, ಆ ಹಂಸವನ್ನು ಬಿಟ್ಟುಬಿಡುತ್ತಾನೆ. ಇಲ್ಲಿಗೆ ಮೊದಲನೆಯ ಸರ್ಗವು ಕೊನೆಗೊಳ್ಳುತ್ತದೆ.

॥ श्रीः ॥

॥ नैषधीयचरितम् ॥

अथ प्रथमः सर्गः

ಕಾವ್ಯ ಅಥವಾ ಗ್ರಂಥಗಳನ್ನು ರಚಿಸುವಾಗ ಮೊದಲು ಮಂಗಲವನ್ನು ಮಾಡುವ ಸಂಪ್ರದಾಯವಿದೆ. ಇದರ ಮುಖ್ಯ ಉದ್ದೇಶ ವಿಘ್ನಗಳನ್ನು ನಿವಾರಿಸುವುದು ಮತ್ತು ಗ್ರಂಥಗಳನ್ನು ಪೂರ್ಣಗೊಳಿಸುವುದು. ದೇವರಿಗೆ ಮತ್ತು ಗುರು-ಹಿರಿಯರಿಗೆ ನಮಸ್ಕಾರವನ್ನು ಮಾಡಿದಾಗ ಹಾಗೂ ಅವರಿಂದ ಆಶೀರ್ವಾದವನ್ನು ಪಡೆದಾಗ, ನಮ್ಮ ಕೆಲಸವು ನಿರ್ವಿಘ್ನವಾಗಿ ನೆರವೇರುತ್ತದೆ ಎಂಬುದು ಭಾರತೀಯ ಕಾವ್ಯಪರಂಪರೆಯಲ್ಲಿ ಕಂಡುಬರುವ ಬಹಳ ವಿಶಿಷ್ಟವಾದ ಮತ್ತು ಶ್ರೇಷ್ಠವಾದ ಸಂಸ್ಕೃತಿಯಾಗಿದೆ. ಹಾಗೆಯೇ ಮಂಗಳಕರವಾದ ವಸ್ತುಗಳನ್ನು ಸ್ಮರಿಸುವುದರಿಂದ, ಹೇಳುವುದರಿಂದ, ಬರೆಯುವುದರಿಂದ ಅಥವಾ ಉಲ್ಲೇಖ ಮಾಡುವುದರಿಂದ ಮಂಗಳವಾಗುತ್ತದೆ ಎಂಬ ಬಲವಾದ ನಂಬಿಕೆಯೂ ಇದೆ. ಹೀಗೆ - ಆಶೀರ್ನಮಸ್ಕ್ರಿಯಾವಸ್ತುನಿರ್ದೇಶೋ ವಾಪಿ ತನ್ಮುಖಮ್ ಎಂಬ ಉಕ್ತಿಯಂತೆ - ಆಶೀರ್ವಾದ, ನಮಸ್ಕಾರ ಮತ್ತು ವಸ್ತುನಿರ್ದೇಶಗಳೆಂಬ ಮೂರು ವಿಧದ ಮಂಗಲವಿದೆ. ಈ ಕಾವ್ಯದ ಪ್ರಾರಂಭದಲ್ಲಿ ಅತ್ಯಂತ ಶ್ರೇಷ್ಠನಾದ ಮತ್ತು ಮಂಗಳಕರನಾದ ನಳ ಚಕ್ರವರ್ತಿಯ ಉಲ್ಲೇಖವಿರುವುದರಿಂದ ವಸ್ತುನಿರ್ದೇಶವೆಂಬ ಮಂಗಲಾಚರಣೆಯನ್ನು ಕವಿಯು ಮಾಡಿದ್ದಾನೆ ಎಂದು ತಿಳಿಯಬೇಕು. ಕ್ಷಿತಿರಕ್ಷಿಣಃ ಎಂಬುದಕ್ಕೆ ಭೂಮಿಯನ್ನು ರಕ್ಷಿಸುವವರು, ದೇವತೆಗಳು ಅಥವಾ ಆದಿಶೇಷ ಎಂಬ ಅರ್ಥವನ್ನಿಟ್ಟುಕೊಂಡರೂ ವಸ್ತುನಿರ್ದೇಶವೆಂಬ ಮಂಗಲವೇ ಆಗಿದೆ. ಅಥವಾ ಶ್ರೀರಾಮನ ಕಥೆಗಳನ್ನು ಪಂಡಿತರು ಜಗತ್ತಿನಲ್ಲಿ ಎಷ್ಟು ಗೌರವಿಸುವರೋ ಅಷ್ಟು ಅಮೃತವನ್ನು ಗೌರವಿಸುವುದಿಲ್ಲ ಎಂದು ಶ್ರೀರಾಮನ ಸ್ಮರಣೆಯನ್ನು ಮಾಡಿದರೂ ವಸ್ತುನಿರ್ದೇಶವೆಂಬ ಮಂಗಲವೇ ಆಗಿದೆ. ಮಂಗಲಶ್ಲೋಕ -

निपीय यस्य क्षितिरक्षिणः कथाः
तथाद्रियन्ते न बुधाः सुधामपि ॥
नलः सितच्छत्रितकीर्तिमण्डलः
स राशिरासीन्महसां महोज्ज्वलः ॥१॥

1. ಅನ್ವಯ : **यस्य** = ಯಾವ, **क्षितिरक्षिणः** = ರಾಜನ, **कथाः** = ಕಥೆಗಳನ್ನು, **निपीय** = ತದೇಕಚಿತ್ತದಿಂದ ಕೇಳಿ, **बुधाः** = ಪಂಡಿತರು, **सुधाम् अपि** = ಅಮೃತವನ್ನು ಕೂಡ, **तथा** = ಹಾಗೆ, **न आद्रियन्ते** = ಗೌರವಿಸುವುದಿಲ್ಲವೋ, **सः** = ಅಂತಹ, **महोज्ज्वलः** = ಬಹಳ ತೇಜಸ್ವಿಯಾದ (ಬೆಳಗುತ್ತಿರುವ), **महसाम्** = ತೇಜಸ್ಸುಗಳ, **राशिः** = ರಾಶಿಯಾದ, **सितच्छत्रितकीर्तिमण्डलः** = ಚಕ್ರವರ್ತಿಯ ಚಿಹ್ನೆಯಾದ ಶ್ವೇತಚ್ಛತ್ರವನ್ನು (ಬಿಳಿ ಕೊಡೆ) ಹೊಂದಿದವನೂ ಮತ್ತು ಬಹಳ ಕೀರ್ತಿಯಿಂದ ಕೂಡಿದ ರಾಜ್ಯವುಳ್ಳವನೂ ಆದ, **नलः** = ನಳನೆಂಬ ಚಕ್ರವರ್ತಿಯು, **आसीत्** = ಇದ್ದನು.

महसाम् राशिः, सितच्छत्रितकीर्तिमण्डलः ಎಂಬ ವಿಶೇಷಣಗಳಿಂದ ನಳನಲ್ಲಿ ತೇಜಸ್ಸಿನ ರಾಶಿಯನ್ನೂ, ಸಿತಚ್ಛತ್ರತ್ವ ಅಂದರೆ ಚಕ್ರವರ್ತಿತ್ವವನ್ನೂ ಆರೋಪ ಮಾಡಿರುವುದರಿಂದ ರೂಪಕಾಲಂಕಾರ.

ಅಮೃತಕ್ಕಿಂತಲೂ ನಳನ ಕಥೆಗಳೇ ಶ್ರೇಷ್ಠವೆಂದು ಉಪಮಾನಕ್ಕಿಂತ ಉಪಮೇಯವೇ ಹೆಚ್ಚೆಂದು ವರ್ಣಿಸಿರುವುದರಿಂದ ವ್ಯತಿರೇಕಾಲಂಕಾರ.

ವಿವಿಧ ಅರ್ಥಗಳ ವಿವರಣೆ :

೧. ನಳ ಚಕ್ರವರ್ತಿಯ ಕಥೆಗಳನ್ನು ಆಲಿಸಿದ ಮೇಲೆ ಪಂಡಿತರಾದವರು ಅಮೃತವನ್ನೂ ಇಷ್ಟಪಡುವುದಿಲ್ಲ. ಅಂದರೆ ನಳನ ಕಥೆಗಳು ಅಮೃತಕ್ಕಿಂತಲೂ ಆಪ್ಯಾಯಮಾನವಾಗಿವೆ.

೨. ಜಗತ್ತಿನಲ್ಲಿ ಯಾವ ಶ್ರೀರಾಮನ ಕಥೆಗಳನ್ನು ಕೇಳಿದ ಮೇಲೆ ಯಾವ ಅಮೃತವನ್ನೂ ಪಂಡಿತರು ಆದರಪೂರ್ವಕವಾಗಿ ನೋಡುವುದಿಲ್ಲವೋ, ಸಃ = ಅಂತಹ = ಶ್ರೀರಾಮನಂತಹ, ಸಕಲ ಸದ್ಗುಣಶಾಲಿಯಾದ ನಳ ಚಕ್ರವರ್ತಿಯು ಇದ್ದನು. ವಾಚಕೋಪಮಾನಲುಪ್ತಾ ಉಪಮಾ. ರಾಮಃ = ಉಪಮಾನ, ನಲಃ = ಉಪಮೇಯ, ಆದ್ರಿಯಂತೇ = ಸಾಧಾರಣಧರ್ಮ, ಇವ =ವಾಚಕ. ಈ ಶ್ಲೋಕದಲ್ಲಿ ಉಪಮಾನ ಮತ್ತು ವಾಚಕಗಳು ಇಲ್ಲ ಎಂಬ ಪಕ್ಷದಲ್ಲಿ ವಾಚಕೋಪಮಾನಲುಪ್ತವೆಂಬ ಪ್ರಕಾರದ ಉಪಮಾಲಂಕಾರವಾಗುತ್ತದೆ. ರಾಮನು ತ್ರೇತಾಯುಗದಲ್ಲಿ ಇದ್ದುದರಿಂದ ಮತ್ತು ನಳ ಮಹಾರಾಜನು ರಾಮನಿಗಿಂತಲೂ ಬಹಳ ಹಿಂದೆ ಅಂದರೆ ಕೃತಯುಗದಲ್ಲಿ ಇದ್ದುದರಿಂದ, ನಳನನ್ನು ರಾಮನ ಜೊತೆಗೆ ಹೋಲಿಸಲು ಸಾಧ್ಯವಿಲ್ಲ ಎಂಬುದು ಆಕ್ಷೇಪ. ಆದರೆ ಕವಿಯ ದೃಷ್ಟಿಗೆ ಇಬ್ಬರೂ ಪ್ರತ್ಯಕ್ಷವಾಗಿರುವುದರಿಂದ

ಶ್ರೀರಾಮನ ಜೊತೆ ಹೋಲಿಕೆಯನ್ನು ಮಾಡಲು ಕವಿಗೆ ಸಾಧ್ಯವಿದೆ ಎಂಬುದು ಮೇಲಿನ ಆಕ್ಷೇಪಕ್ಕೆ ಸಮಾಧಾನ. ಶ್ರೀರಾಮನು ವಿಷ್ಣುವಿನ ಅವತಾರವಾಗಿರುವುದರಿಂದ ನಳನಿಗಿಂತ ಶ್ರೀರಾಮನೇ ಶ್ರೇಷ್ಠ ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ನಳನೆಂಬ ಉಪಮೇಯ ಮತ್ತು ಶ್ರೀರಾಮನೆಂಬ ಉಪಮಾನ ಇವೆರಡೂ ಕಾವ್ಯಸೌಂದರ್ಯವನ್ನು ಹೆಚ್ಚಿಸುತ್ತವೆಯೇ ಹೊರತು ಕಡಿಮೆ ಮಾಡುವುದಿಲ್ಲ.

೩. ಕ್ಷಿತಿರಕ್ಷಿಣಃ (ರಾಜರು) ಎಂಬುದನ್ನು ಪ್ರಥಮಾ ವಿಭಕ್ತಿಯಾಗಿಟ್ಟುಕೊಂಡರೆ, ಪಂಡಿತರಾದ ರಾಜರು ರಾಜಸೂಯ ಮೊದಲಾದ ಯಾಗಗಳನ್ನು ಮಾಡಿ ಅಮೃತತ್ತ್ವವನ್ನು ಪಡೆಯುತ್ತಿದ್ದರು. ಆದರೆ ನಳ ಚಕ್ರವರ್ತಿಯ ಕಥೆಗಳನ್ನು ಕೇಳಿದ ಮೇಲೆ ಆ ರಾಜರು ಅಮೃತಕ್ಕೂ ಆಸೆಪಡುತ್ತಿರಲಿಲ್ಲ. ಅವರು ಅಮೃತಕ್ಕಿಂತಲೂ ನಳನ ಕಥೆಗಳೇ ಹೆಚ್ಚು ಶ್ರೇಷ್ಠವೆಂದು ಭಾವಿಸಿದ್ದರು. ಆಗ - न (केवलम्) बुधाः । क्षितिरक्षिणः अपि यस्य कथाः निपीय सुधाम् अपि तथा न आद्रियन्ते । ಎಂದು ಅನ್ವಯವನ್ನು ಮಾಡಿಕೊಳ್ಳಬೇಕು.

೪. ಕ್ಷಿತಿರಕ್ಷಿಣಃ ಅಂದರೆ ಭೂಮಿಯನ್ನು ರಕ್ಷಿಸುವವರು. ತಮ್ಮ ಹೆಡೆಯ ಮೇಲೆ ಭೂಮಿಯನ್ನು ಹೊತ್ತುಕೊಂಡಿರುವುದರಿಂದ ಆದಿಶೇಷ ಮತ್ತು ನಾಗದೇವತೆಗಳು ಎಂದರ್ಥ. ಸುಧಾ ಭುಜಂಗಭೋಜನಮ್ ಎಂಬ ಮಾತಿನಂತೆ, ಆದಿಶೇಷ ಮತ್ತು ನಾಗದೇವತೆಗಳಿಗೆ ಅಮೃತವೇ ಊಟವಾಗಿರುತ್ತದೆ. ಆದರೆ ಅವರಿಗೂ ಕೂಡ ನಳನ ಕಥೆಗಳನ್ನು ಕೇಳಿದ ಮೇಲೆ ಅಮೃತವೆಂಬ ಊಟದ ಮೇಲೆ ಇದ್ದ ಆಸಕ್ತಿಯು ಹೊರಟುಹೋಯಿತು.

೫. ಕ್ಷಿತಿಃ = ನಾಶ, ಅಕ್ಷಿಣಃ = ತಾರೆ ಗಿಡದಲ್ಲಿ ವಾಸ ಮಾಡುವ ಕಲಿಯ ಎಂದರ್ಥ. ಅಂದರೆ ಯಾವ ರಾಜನ ಕಥೆಗಳನ್ನು ಕೇಳಿ, ಕಲಿಯ ನಾಶವಾಯಿತೋ ಅಂತಹ ನಳ ಚಕ್ರವರ್ತಿಯು ಇದ್ದನು. ಯಾಕೆಂದರೆ -

ಕರ್ಕೋಟಕಸ್ಯ ನಾಗಸ್ಯ ದಮಯಂತ್ಯಾ ನಲಸ್ಯ ಚ ॥
ಋತುಪರ್ಣಸ್ಯ ರಾಜರ್ಷೇಃ ಕೀರ್ತನಂ ಕಲಿನಾಶನಮ್ ॥

ಇವರ ಸ್ತುತಿಯನ್ನು ಮಾಡಿದಾಗ ಕಲಿಯು ನಾಶವಾಗುತ್ತಾನೆ ಎಂಬ ಆಧಾರವಿದೆ.

೬. ಅಕ್ಷಃ = ಪಗಡೆಕಾಯಿ, ಅಕ್ಷೀ = ಪಗಡೆಯಾಡುವವನು. ಬಹುಶಃ ಪಗಡೆಯಾಡುವವರು (ಜೂಜಾಡುವವರು) ತಮ್ಮ ಸಾಮ್ರಾಜ್ಯವನ್ನು ಕಳೆದುಕೊಂಡು ಅವಮಾನಕ್ಕೆ ಒಳಗಾಗುತ್ತಾರೆ. ಆದರೆ ಯಾವ ಈ ನಳ ಚಕ್ರವರ್ತಿಯ ಕಥೆಗಳನ್ನು ಕೇಳಿಕೊಂಡು, ರಾಜರು ಜೂಜಾಡುತ್ತಿದ್ದರೋ

ಅವರನ್ನು ಕೂಡ ಪಂಡಿತರು ಗೌರವಿಸುತ್ತಿದ್ದರು. ಅಂದರೆ ಜೂಜಾಡುವವರು ಸಾಮಾನ್ಯವಾಗಿ ತಮ್ಮ ರಾಜ್ಯ ಮತ್ತು ಸಂಪತ್ತನ್ನು ಕಳೆದುಕೊಳ್ಳುತ್ತಾರೆ. ಆದರೆ ನಳನ ಕಥೆಗಳನ್ನು ಕೇಳಿದಾಗ ಉಂಟಾದ ಪುಣ್ಯವಿಶೇಷದಿಂದ ಜೂಜಾಡುವವರು ಏನನ್ನೂ ಕಳೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ಅಮೃತಕ್ಕಿಂತಲೂ ಕೂಡ ಈ ಜೂಜಾಡುವವರೇ ಹೆಚ್ಚು ಗೌರವಿಸಲ್ಪಡುತ್ತಿದ್ದರು. ಅಂದರೆ ನಳ ಚಕ್ರವರ್ತಿಯ ಕಥೆಗಳನ್ನು ಕೇಳಿ, ರಾಜರು ತಮ್ಮ ಜೂಜಾಟದ ಎಲ್ಲ ಕಳಂಕವನ್ನೂ ಕಳೆದುಕೊಳ್ಳುತ್ತಿದ್ದರು.

೭. ಮಹಾನ್ ಉಜ್ಜ್ವಲಃ ಯಸ್ಯ ಸಃ = ಮಹೋಜ್ಜ್ವಲಃ, ಬಹಳವಾದ ಶೃಂಗಾರ ರಸವು ಯಾರಲ್ಲಿ ಇದ್ದಿತೋ, ಅಂತಹ ನಳ ಚಕ್ರವರ್ತಿಯು ಇದ್ದನು.

ಹೀಗೆ ಶ್ರೀಹರ್ಷನು ಬರೆದಿರುವ ನೈಷಧೀಯಚರಿತದ ಶ್ಲೋಕಗಳಿಗೆ ಅನೇಕ ಅರ್ಥಗಳು ಇವೆ. ಆದ್ದರಿಂದಲೇ ಇದನ್ನು - ನೈಷಧಂ ವಿದ್ವದೌಷಧಮ್ - ಎನ್ನುತ್ತಾರೆ. ಇಲ್ಲಿ ಪರಿಚಯಕ್ಕೋಸ್ಕರ ಏಳು ವಿಧದ ಅರ್ಥಗಳನ್ನು ವಿವರಿಸಲಾಗಿದೆ.

1ನೇ ಶ್ಲೋಕದಿಂದ 142ನೇ ಶ್ಲೋಕದವರೆಗೆ ವಂಶಸ್ಥವೃತ್ತವು ಬಳಕೆಯಾಗಿದೆ. 143 ನೇ ಶ್ಲೋಕದಲ್ಲಿ ದೋಧಕವೃತ್ತ, 144 ನೇ ಶ್ಲೋಕದಲ್ಲಿ ವಸಂತತಿಲಕಾವೃತ್ತ ಮತ್ತು 145 ನೇ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತಗಳು ಬಳಕೆಯಾಗಿವೆ.

* ಆಙ್-ಉಪಸರ್ಗಪೂರ್ವಕ, ದೃಙ್-ಆದರೇ ಧಾತು. ಲಟ್-ಲಕಾರ,

ಆದ್ರಿಯತೇ-ಆದ್ರಿಯೇತೇ-ಆದ್ರಿಯಂತೇ.

* ಅಸ-ಭುವಿ, ಅನದ್ಯತನಭೂತೇ ಲಙ್-ಲಕಾರ, ಆಸೀತ್-ಆಸ್ತಾಮ್-ಆಸನ್.
* ಇನ್ನಂತ-ಪುಲ್ಲಿಂಗ - ಕ್ಷಿತಿರಕ್ಷೀ- ಕ್ಷಿತಿರಕ್ಷಿಣೌ- ಕ್ಷಿತಿರಕ್ಷಿಣಃ.
* ಸಕಾರಾಂತ-ನಪುಂಸಕಲಿಂಗ - ಮಹಃ-ಮಹಸೀ-ಮಹಾಂಸಿ.
* तथा + आद्रियन्ते = तथाद्रियन्ते । सवर्णदीर्घसन्धिः । अकः सवर्णे दीर्घः-६-१-१०१.
* निपीय = ल्यबन्तम् अव्ययम् । पीङ् - पाने इति धातुः ।
* सित + छत्रितम् = सितच्छत्रितम् । तुगागमसन्धिः । छे च ।
* सः राशिः = स राशिः । सुलोपसन्धिः । एतत्तदोः सुलोपोऽकोरनञ्समासे हलि ।
* राशिः + आसीत् = राशिरासीत् । रुत्वसन्धिः । ससजुषो रुः-८-२-६६.
* रासीत् + महसाम् = रासीन्महसाम् । अनुनासिकसन्धिः ।

यरोऽनुनासिकेऽनुनासिको वा-८-४-४५.

* महा + उज्ज्वलः = महोज्ज्वलः । गुणसन्धिः । आद् गुणः-६-१-८७.

* महोज्ज्वलर् = महोज्ज्वलः । विसर्गसन्धिः । खरवसानयोः विसर्जनीयः-८-३-१५.

* सितच्छत्रितकीर्तिमण्डलः = सितच्छत्रितं कीर्तिमण्डमं यस्य सः । बहुव्रीहिः समासः । अनेकमन्यपदार्थे ।

रसैः कथा यस्य सुधावधीरणी
नलः स भूजानिरभूद्गुणाद्भुतः ॥
सुवर्णदण्डैकसितातपत्रित-
ज्वलत्प्रतापावलिकीर्तिमण्डलः ॥२॥

2. ಅನ್ವಯ : **यस्य** = ಯಾವ ರಾಜನ, **कथा** = ಕಥೆಯು, **रसैः** = ಶೃಂಗಾರಾದಿ ನವರಸಗಳಿಂದ, **सुधावधीरणी** = ಅಮೃತವನ್ನೂ ತಿರಸ್ಕರಿಸುವಂತಹುದು, **अभूद्** = ಆಯಿತೋ, **सः नलः** = ಅಂತಹ ನಳ ಚಕ್ರವರ್ತಿಯು, **गुणाद्भुतः** = ಸಕಲ ಸದ್ಗುಣಗಳಿಂದ ಆಶ್ಚರ್ಯವನ್ನುಂಟುಮಾಡುವವನಾಗಿಯೂ, **भूजानिः** = ಭೂಮಿಯನ್ನೇ (ಸಾಮ್ರಾಜ್ಯಲಕ್ಷ್ಮಿಯನ್ನೇ) ಪತ್ನಿಯನ್ನಾಗಿ ಹೊಂದಿದ ಚಕ್ರವರ್ತಿಯೂ, **सुवर्णदण्डैकसितातपत्रित-ज्वलत्प्रतापावलिकीर्तिमण्डलः** = ಚಿನ್ನದ ದಂಡದಿಂದ ಕೂಡಿರುವ ಒಂದೇ ಶ್ವೇತಛತ್ರವನ್ನು ಹೊಂದಿದವನಾಗಿಯೂ, ಚೆನಾಗಿ ಬೆಳಗುತ್ತಿರುವ ಪ್ರಭಾವಗಳ (ಪರಾಕ್ರಮಗಳ) ಸಾಲುಗಳನ್ನು ಹೊಂದಿದವನಾಗಿಯೂ, ಕೀರ್ತಿಯಿಂದ ತುಂಬಿರುವ ರಾಜ್ಯವನ್ನು ಹೊಂದಿದವನೂ, **अभूत्** = ಆಗಿದ್ದನು.

ಚಕ್ರವರ್ತಿಗೂ ನಳನಿಗೂ ಅಭೇದವನ್ನು ವರ್ಣಿಸಿರುವುದರಿಂದ ರೂಪಕಾಲಂಕಾರ. ನಳನ ಕಥೆಗಳು ರಸಗಳೆಂಬ ಮಾಧುರ್ಯದಿಂದ ಅಮೃತಕ್ಕಿಂತಲೂ ಹೆಚ್ಚು ಎಂದು ಹೇಳಿರುವುದರಿಂದ ವ್ಯತಿರೇಕಾಲಂಕಾರ.

ವಿವರಣೆ : ಸುಧಾ = ಅಮೃತ. ಅಮೃತವು ಬಹಳ ಮಧುರವಾಗಿರುತ್ತದೆ ಎಂದೇ ಹೆಚ್ಚಿನ ಎಲ್ಲ ಕವಿಗಳೂ ವರ್ಣಿಸುತ್ತಾರೆ. ಆದರೆ ಇಲ್ಲಿ ಕೇವಲ ಮಧುರ ರಸವಲ್ಲ. ಮಧುರ=ಸಿಹಿ, ಆಮ್ಲ=ಹುಳಿ, ಕಟು=ಖಾರ, ಲವಣ=ಉಪ್ಪು, ತಿಕ್ತ=ಕಹಿ ಮತ್ತು ಕಷಾಯ=ಚೊಗರು ಎಂಬ ಆರು ರಸಗಳೂ ಅಮೃತದಲ್ಲಿ ಇರುವುದರಿಂದ ಅಮೃತವು ಬಹಳ ಆಪ್ಯಾಯಮಾನವಾಗಿದೆ. ಆದರೆ

ಆರಕ್ಕಿಂತಲೂ ಹೆಚ್ಚು ಅಂದರೆ ಒಂಭತ್ತು ರಸಗಳನ್ನು (ನವರಸ) ಹೊಂದಿರುವ ನಳ ಮಹಾರಾಜನ ಕಥೆಯು ಅಮೃತವನ್ನು ಸೋಲಿಸಿತು ಎಂಬುದು ತಾತ್ಪರ್ಯ. ಶೃಂಗಾರ, ವೀರ, ಕರುಣಾ, ಅದ್ಭುತ, ಹಾಸ್ಯ, ಭಯಾನಕ. ಬೀಭತ್ಸ, ರೌದ್ರ ಮತ್ತು ಶಾಂತ ಎಂಬ ನವರಸಗಳು ಕಾವ್ಯಗಳಲ್ಲಿ ಪ್ರಸಿದ್ಧವಾಗಿವೆ.

ಅನೇಕ ರಾಜರಿದ್ದರೂ ಅವರಿಗೆ ಶ್ವೇತಚ್ಛತ್ರವಾಗಲಿ ಅಥವಾ ಶ್ವೇತಚ್ಛತ್ರಕ್ಕೆ ಚಿನ್ನದ ದಂಡವಾಗಲಿ (ಕೋಲು) ಇರಲಿಲ್ಲ. ಚಿನ್ನದ ದಂಡವಿರುವ ಶ್ವೇತಚ್ಛತ್ರವು ಕೇವಲ ನಳ ಚಕ್ರವರ್ತಿಗೆ ಮಾತ್ರ ಇತ್ತು ಎಂದರ್ಥ. ಪ್ರತಾಪಃ = ಸ ಪ್ರತಾಪಃ ಪ್ರಭಾವಃ ಸ್ಯಾತ್ ಯತ್ತೇಜಃ ಕೋಶದಂಡಜಮ್. ಇಲ್ಲಿ ಕೋಶವೆಂದರೆ ರಾಜನ ಸಂಪತ್ತು ಅಥವಾ ಶ್ರೀಮಂತಿಕೆ. ದಂಡವೆಂದರೆ ಅಪರಾಧಿಗಳನ್ನು ಮತ್ತು ಶತ್ರು ರಾಜರನ್ನು ಶಿಕ್ಷಿಸಲು ಅಥವಾ ನಿಗ್ರಹಿಸಲು ಬೇಕಾಗಿರುವ ಸೈನ್ಯ. ಇವೆರಡೂ ಚೆನ್ನಾಗಿದ್ದರೆ ರಾಜನು ಪ್ರಭಾವಶಾಲಿಯಾಗಿರುತ್ತಾನೆ. ಇಂತಹ ಈ ಪ್ರಭಾವವನ್ನೇ ಪ್ರತಾಪ ಎನ್ನುತ್ತಾರೆ.

* भूः जाया यस्य सः = भूजानिः । बहुव्रीहिः समासः । अनेकमन्यपदार्थे ।

सूत्रम् - जायाया निङ् ।

* भूजानिः + अभूत् = भूजानिरभूत् । रुत्वसन्धिः । ससजुषो रुः-८-२-६६.

* अभूत् + गुणाद्भुतः = अभूद्गुणाद्भुतः । जश्त्वसन्धिः । झलां जशोऽन्ते-८-२-३९.

* गुणाद्भुतर् = गुणाद्भुतः । विसर्गसन्धिः । खरवसानयोः विसर्जनीयः-८-३-१५.

* सुधावधिः + रणी = सुधावधीरणी । रेफलोपसन्धिः । रो रि-८-३-१४.

ढ्रलोपे पूर्वस्य दीर्घोऽणः । ಸುಧಾಯಾಃ ಅವಧಿಃ ಅಂದರೆ ಅಮೃತಕ್ಕೂ ಗಡಿಯಂತೆ ಇರುವವನು ನಳ ಮಹಾರಾಜ. ಇವನಿಗಿಂತಲೂ ಬೇರೆ ಅಮೃತ ಇಲ್ಲ ಎಂಬ ಅರ್ಥವನ್ನು ವಿವರಿಸುವಾಗ - ಸುಧಾವಧಿಃ + ರಣೀ ಎಂಬುದಾಗಿಯೂ ಪದಚ್ಛೇದವನ್ನು ವ್ಯಾಖ್ಯಾನಕಾರರು ತಿಳಿಸಿದ್ದಾರೆ.

पवित्रमत्रातनुते जगद्युगे
स्मृता रसक्षालनयेव यत्कथा ॥
कथं न सा मद्गिरमाविलामपि
स्वसेविनीमेव पवित्रयिष्यति ॥३॥

3. ಅನ್ವಯ : **स्मृता** = ಸ್ಮರಿಸಲ್ಪಟ್ಟಿರುವ, **यत्कथा** = ಯಾವ ನಳ ಮಹಾರಾಜನ ಕಥೆಯು, **अत्र** = ಈ, **युगे** = ಯುಗದಲ್ಲಿ (ಕಲಿಯುಗದಲ್ಲಿ), **जगत्** = ಜಗತ್ತನ್ನು, **पवित्रम्** = ಪವಿತ್ರವನ್ನಾಗಿ, **आतनुते** = ಮಾಡುವುದೋ, **सा** = ಆ ಕಥೆಯು, **स्वसेविनीम् एव** = ತನ್ನವರನ್ನೇ ಸೇವಿಸುತ್ತಿರುವ (ಬೇರೆಯವರ ಸೇವೆಯನ್ನು ಮಾಡದೇ, ನಳ ಮಹಾರಾಜನನ್ನೇ ವರ್ಣಿಸುತ್ತಿರುವ), **आविलाम्** = ಮಲಿನವಾದ, **मद्गिरम् अपि** = ನನ್ನ ಮಾತನ್ನು ಕೂಡ, **रसक्षालनयेव** = ನವರಸಗಳಿಂದ ತೊಳೆಯುವುದರಿಂದಲೋ ಎಂಬಂತೆ, **कथम्** = ಹೇಗೆ ತಾನೆ, **न पवित्रयिष्यति** = ಪವಿತ್ರಗೊಳಿಸಲಾರದು ?

ನಳ ಮಹಾರಾಜನ ಕಥೆಗಳು ಜಗತ್ತನ್ನೇ ಪವಿತ್ರಗೊಳಿಸುತ್ತವೆ. ಹೀಗಿರುವಾಗ ನನ್ನ ಮಾತನ್ನು ಯಾಕೆ ಪವಿತ್ರಗೊಳಿಸುವುದಿಲ್ಲ ? ಎಂಬ ಪ್ರಶ್ನೆಯ ಮೂಲಕ ಅರ್ಥಾಪತ್ತಿ ಅಲಂಕಾರವು ವರ್ಣಿಸಲ್ಪಟ್ಟಿದೆ.

ವಿವರಣೆ : ಕೇವಲ ನಳ ಮಹಾರಾಜನ ಕಥೆಯನ್ನು ಸ್ಮರಿಸಿದರೆ ಸಾಕು, ಸಂಪೂರ್ಣ ಜಗತ್ತೇ ಪವಿತ್ರಗೊಳ್ಳುತ್ತದೆ. ಹೀಗಿರುವಾಗ ನಳ ಮಹಾರಾಜನ ಕಥೆಯನ್ನೇ ವರ್ಣಿಸುತ್ತಿರುವ ನನ್ನ ಮಾತು ದೋಷಪೂರಿತವಾಗಿದ್ದರೂ ಕೂಡ ಯಾಕೆ ಪವಿತ್ರಗೊಳ್ಳುವುದಿಲ್ಲ ? ನಿಶ್ಚಯವಾಗಿಯೂ ಪವಿತ್ರಗೊಳ್ಳುತ್ತದೆ ಎಂದು ಕವಿಯು ತನ್ನ ವಿನಮ್ರತೆಯನ್ನು ವ್ಯಕ್ತಪಡಿಸುತ್ತಾನೆ. ಯಾರಿಂದ ಯಾವುದು ಸೇವಿಸಲ್ಪಡುವುದೋ ಅದು ನಿಶ್ಚಯವಾಗಿಯೂ ಅವರಿಂದ ಪವಿತ್ರಗೊಳಿಸಲ್ಪಡುತ್ತದೆ. ಹೇಗೆಂದರೆ - ನಿಸರ್ಗದಲ್ಲಿ ಸಿಗುವ ಆಹಾರವು ಶುದ್ಧವಿಲ್ಲದಿದ್ದರೂ -ತೊಳೆಯುವುದು, ಸಿಪ್ಪೆ ತೆಗೆಯುವುದು, ಬೇಯಿಸುವುದು ಮೊದಲಾದ ಸಂಸ್ಕಾರಗಳಿಂದ ಶುದ್ಧಗೊಳಿಸಲ್ಪಟ್ಟು ಅನಂತರ ಸೇವಿಸಲ್ಪಡುತ್ತದೆ. ಬಟ್ಟೆಗಳು ಶುದ್ಧವಾಗಿರದಿದ್ದರೆ ತೊಳೆದು (ಒಗೆದು) ಧರಿಸಲ್ಪಡುತ್ತವೆ. ಹೀಗಿರುವಾಗ ನನ್ನ ಮಾತುಗಳಲ್ಲಿ ತಪ್ಪುಗಳಿದ್ದರೂ, ನಳ ಮಹಾರಾಜನ ಸ್ತುತಿ ಎಂಬ ಸೇವೆಯ ಪುಣ್ಯ ವಿಶೇಷದಿಂದ ನನ್ನ ಮಾತು ಯಾಕೆ ಪವಿತ್ರಗೊಳ್ಳುವುದಿಲ್ಲ ? ನಳ ಮಹಾರಾಜನನ್ನು ಸ್ತುತಿಸುವ ಪುಣ್ಯ ವಿಶೇಷದಿಂದಲೇ ನನ್ನ ಮಾತು ಪರಿಶುದ್ಧವಾಗುತ್ತದೆ. ಯಾಕೆಂದರೆ ನಳ ಮಹಾರಾಜನನ್ನು ಬಿಟ್ಟು ನಾನು ಬೇರೆ ಯಾರನ್ನೂ ಸ್ತುತಿಸುತ್ತಿಲ್ಲ ಎಂದರ್ಥ.

* **रसक्षालनयेव** - ಇವೇನ ನಿತ್ಯಸಮಾಸೋ ವಿಭಕ್ತ್ಯಲೋಪಶ್ಚ ಎಂಬ ವಾರ್ತಿಕದಿಂದ ಸಮಾಸವಾಗಿರುವುದರಿಂದ ಒಂದೇ ಪದ.

* **जगत् + युगे = जगद्युगे । जश्त्वसन्धिः । झलां जशोऽन्ते-८-२-३९.**

* अत्र + आतनुते = अत्रातनुते । सवर्णदीर्घसन्धिः । अकः सवर्णे दीर्घः-६-१-१०१.
* यद् + कथा = यत्कथा । चर्त्वसन्धिः । खरि च-८-४-५५.
* कथम् + न = कथं न । अनुस्वारसन्धिः । मोनुस्वारः-८-३-२३.
* रसक्षालनया इव = रसक्षालनयेव । इवेन नित्यसमासो विभक्त्यलोपश्च - वार्तिकम् ।

अधीतिबोधाचरणप्रचारणैः
दशाश्चतस्रः प्रणयन्नुपाधिभिः ॥
चतुर्दशत्वं कृतवान्कुतः स्वयम्
न वेद्मि विद्यासु चतुर्दशस्वयम् ॥४॥

4. ಅನ್ವಯ : अयम् = ಇವನು (ಈ ನಳ ಮಹಾರಾಜನು), चतुर्दशसु = ಹದಿನಾಲ್ಕು, विद्यासु = ವಿದ್ಯೆಗಳಲ್ಲಿ, अधीतिबोधाचरणप्रचारणैः = ಅಧ್ಯಯನ-ಅರ್ಥಜ್ಞಾನ-ಆಚರಣೆ-ಅಧ್ಯಾಪನಗಳೆಂಬ, उपाधिभिः = ಪ್ರಕಾರಗಳಿಂದ, चतस्रः = ನಾಲ್ಕು, दशाः = ವಿಧಗಳನ್ನು. प्रणयन् = ಹುಟ್ಟುಹಾಕುತ್ತಾ, स्वयम् = ತಾನು ಮಾತ್ರ, चतुर्दशत्वम् = ಹದಿನಾಲ್ಕು ಎಂಬುದನ್ನು, कुतः = ಹೇಗೆ, कृतवान् = ಮಾಡಿದನು ? (ಎಂಬುದನ್ನು) न वेद्मि = ನಾನು ತಿಳಿಯುತ್ತಿಲ್ಲ. (ಎಂಬುದು ನನಗೆ ತಿಳಿಯುತ್ತಿಲ್ಲ).

ವಿವರಣೆ : ಪುರಾಣ-ನ್ಯಾಯ-ಮೀಮಾಂಸಾ-ಧರ್ಮಶಾಸ್ತ್ರಾಂಗಮಿಶ್ರಿತಾಃ ॥ ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥ ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ತಿಳಿಸಲಾಗಿದೆ. ಹಾಗೆಯೇ - ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾನ್ಯಾಯವಿಸ್ತರಃ ॥ ಧರ್ಮಶಾಸ್ತ್ರಂ ಪುರಾಣಂ ಚ ವಿದ್ಯಾಸ್ತ್ವೇತಾಶ್ಚತುರ್ದಶ ॥ ಎಂಬುದಾಗಿಯೂ ತಿಳಿಸಲಾಗಿದೆ. ಅಂಗ ಅಂದರೆ ಷಡಂಗಗಳು ಒಟ್ಟು ಆರು, ವೇದಗಳು ಒಟ್ಟು ನಾಲ್ಕು, ಮೀಮಾಂಸಾ, ನ್ಯಾಯ, ಧರ್ಮಶಾಸ್ತ್ರ, ಪುರಾಣ ಇವಿಷ್ಟು ಸೇರಿದಾಗ 14 ಆಗುತ್ತದೆ. ಆದರೆ ಇವುಗಳಿಗೆ ಮೊದಲು ತಿಳಿಸಿದಂತೆ - ಅಧ್ಯಯನ-ಅರ್ಥಜ್ಞಾನ-ಆಚರಣೆ-ಅಧ್ಯಾಪನಗಳೆಂಬ ನಾಲ್ಕು ಪ್ರಕಾರಗಳಿಂದ 14 X 4 = 56 ಆಗುತ್ತದೆ. ಹೀಗಿದ್ದರೂ ನಳ ಮಹಾರಾಜನು 14 ವಿದ್ಯೆಗಳೆಂದು ಏಕೆ ಹೇಳಿದ್ದಾನೆ ಎಂಬುದು ಪ್ರಶ್ನೆ.

ಚತಸ್ರಃ ದಶಾಃ ಯಾಸಾಂ ತಾಃ = ಚತುರ್ದಶಾಃ ವಿದ್ಯಾಃ ಎಂದು ಬಹುವ್ರೀಹಿ ಸಮಾಸವನ್ನು ಮಾಡಬೇಕು. ಚತುರ್ದಶಾನಾಂ ಭಾವಃ ಚತುರ್ದಶತ್ವಮ್ ಎಂದಾಗುತ್ತದೆ. ಇಲ್ಲಿರುವ ಚತುರ್ದಶ ಶಬ್ದವು ಸಂಖ್ಯಾವಾಚಕವಲ್ಲ. ಚತುರ್ ಮತ್ತು ದಶಾ ಎಂಬ ಶಬ್ದಗಳು ಸೇರಿ ಆಗಿವೆ. ಈ

ಕಾರಣದಿಂದ ಚತುರ್ (ನಾಲ್ಕು) ದಶಾಃ (ವಿಧಗಳು) ಎಂದಿಟ್ಟುಕೊಂಡರೂ ಚತುರ್ದಶ ಎಂಬುದೇ ಸಿದ್ಧವಾಗುತ್ತದೆ. ಆದ್ದರಿಂದ ಅಧ್ಯಯನ ಮೊದಲಾದ ನಾಲ್ಕು ಪ್ರಕಾರಗಳನ್ನು ಇಟ್ಟುಕೊಂಡರೂ ಚತುರ್ದಶ ವಿದ್ಯೆಗಳು ಎಂದು ನಳ ಮಹಾರಾಜನು ತಿಳಿಸಿದ್ದಾನೆ ಎಂಬುದು ಮೇಲಿನ ಪ್ರಶ್ನೆಗೆ ಸಮಾಧಾನ. ವಿರೋಧಾಭಾಸ ಅಲಂಕಾರ.

*** चतुर्दशसु + अयम् = चतुर्दशस्वयम् । यण्सन्धिः । इको यणचि-६-१-७७.**

*** दशाः + चतस्रः = दशाश्चतस्रः । श्चुत्वसन्धिः । स्तोश्चुना श्चुः-८-४-४०.**

*** प्रणयन् + उपाधिभिः = प्रणयन्नुपाधिभिः । ङमुडागमसन्धिः ।**

ङमो ह्रस्वादचि ङमुण्नित्यम्-८-३-३२.

*** अधीतिश्च बोधश्च आचरणञ्च प्रचारणञ्च = अधीतिबोधाचरणप्रचारणानि । तैः ।**

द्वन्द्वसमासः । चार्थे द्वन्द्वः ।

अमुष्य विद्या रसनाग्रनर्तकी
त्रयीव नीताङ्गगुणेन विस्तरम् ॥
अगाहताष्टादशतां जिगीषया
नवद्वयद्वीपपृथग्जयश्रियाम् ॥५॥

5. ಅನ್ವಯ : **अमुष्य** = ಇವನ (ಈ ನಳ ಮಹಾರಾಜನ), **रसनाग्रनर्तकी** = ನಾಲಿಗೆಯ ತುದಿಯಲ್ಲಿ ನೃತ್ಯವನ್ನು ಮಾಡುತ್ತಿರುವ, **विद्या** = ವಿದ್ಯೆಯು (ಸರಸ್ವತಿಯು), **अङ्गगुणेन** = ಆರು ಅಂಗಗಳಿಂದ (ಷಡಂಗಗಳಿಂದ), **विस्तरं नीता** = ವಿಸ್ತಾರ ಹೊಂದಲ್ಪಟ್ಟಿರುವ (ಗುಣಿಸಲ್ಪಟ್ಟಿರುವ), **त्रयी इव** = ಮೂರು ವೇದಗಳೋ ಎಂಬಂತೆ, **नवद्वयद्वीपपृथग्जयश्रियाम्** = ಹದಿನೆಂಟು ದ್ವೀಪಗಳಲ್ಲಿ ಪ್ರತ್ಯೇಕವಾಗಿ ವಿಜಯಲಕ್ಷ್ಮಿಯನ್ನು, **जिगीषया** = ಗೆಲ್ಲುವ ಆಸೆಯಿಂದ, **अष्टादशताम्** = ಹದಿನೆಂಟನ್ನು, **अगाहता** = ಹೊಂದಿತು.

ಇಲ್ಲಿ ತ್ರಯೀ ಇವ ಎಂಬಲ್ಲಿ ಉಪಮಾ ಮತ್ತು ನವದ್ವಯದ್ವೀಪಪೃಥಗ್ಜಯಶ್ರಿಯಾಂ ಜಿಗೀಷಯಾ ಎಂಬಲ್ಲಿ ಉತ್ಪ್ರೇಕ್ಷಾ ಅಲಂಕಾರಗಳು ವರ್ಣಿತವಾಗಿವೆ.

ವಿವರಣೆ : ವೇದಗಳು ಒಟ್ಟು ನಾಲ್ಕು ಇದ್ದರೂ, ಯಜ್ಞ-ಯಾಗಾದಿಗಳಲ್ಲಿ ಮೂರು ವೇದಗಳು ಬಳಕೆಯಾಗಿರುವುದರಿಂದ ವೇದಗಳಿಗೆ ತ್ರಯೀ ಎಂಬ ಹೆಸರಿದೆ. ಮೂರು ವೇದಗಳು ಎಂದರ್ಥ. ಹೀಗಿದ್ದರೂ ಪ್ರತಿಯೊಂದು ವೇದಕ್ಕೂ ಆರು ಅಂಗಗಳು (ಷಡಂಗಗಳು)

ಎಂದಿಟ್ಟುಕೊಂಡಾಗ, 3 X 6 = 18 ವಿದ್ಯೆಗಳಾಗುತ್ತವೆ. ನಳನು 18 ದ್ವೀಪಗಳಲ್ಲಿಯೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿರುವುದರಿಂದ, ಪ್ರತ್ಯೇಕವಾಗಿ 18 ದ್ವೀಪಗಳಲ್ಲಿಯೂ ವಿಜಯವನ್ನು ಸಾಧಿಸುವುದಕ್ಕೋಸ್ಕರ ಅವನಲ್ಲಿದ್ದ ವಿದ್ಯೆಯು (ಸರಸ್ವತಿ) ಅಥವಾ 14 ವಿದ್ಯೆಗಳು 18 ವಿದ್ಯೆಗಳಾದವು. ಒಂದೊಂದು ದ್ವೀಪವನ್ನು ಗೆಲ್ಲಲು ಒಂದೊಂದು ವಿದ್ಯೆಯನ್ನು ಬಳಸಿಕೊಂಡನು ಎಂಬುದು ಭಾವಾರ್ಥ.

ಹಿಂದಿನ ಶ್ಲೋಕದಲ್ಲಿ ತಿಳಿಸಿರುವಂತೆ ಒಟ್ಟು 14 ವಿದ್ಯೆಗಳು ಇದ್ದವು. ಆದರೆ ನಳ ಮಹಾರಾಜನಲ್ಲಿಗೆ ಬಂದಾಗ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥವೇದಗಳೆಂಬ ನಾಲ್ಕು ಉಪವೇದಗಳು ಸೇರಿ ಒಟ್ಟು 18 ಆದವು ಎಂಬುದು ಇನ್ನೊಂದು ಅರ್ಥ. ಹಿಂದೆ ತಿಳಿಸಿರುವ ಶ್ಲೋಕಕ್ಕೆ - ಆಯುರ್ವೇದೋ ಧನುರ್ವೇದೋ ಗಾಂಧರ್ವಶ್ಚೇತಿ ತೇ ತ್ರಯಃ ॥ ಅರ್ಥಶಾಸ್ತ್ರಂ ಚತುರ್ಥಂ ತು ವಿದ್ಯಾ ಹ್ಯಷ್ಟಾದಶ ಸ್ಮೃತಾಃ ॥ ಎಂಬ ಶ್ಲೋಕವನ್ನು ಸೇರಿಸಿ 18 ವಿದ್ಯೆಗಳೆಂದೂ ಹೇಳುತ್ತಾರೆ.

ಅಥವಾ ವಿದ್ಯೆ ಅಂದರೆ ಸರಸ್ವತಿ. ಅವಳು ಒಬ್ಬಳೇ ಆಗಿದ್ದಾಳೆ. ಆದರೆ ರಸನಾಗ್ರನರ್ತಕೀ ಅಂದರೆ ನಾಲಿಗೆಯೆಂಬ ವೇದಿಕೆಯ ಮೇಲೆ ನೃತ್ಯವನ್ನು ಮಾಡುವಾಗ 18 ರೂಪಗಳನ್ನು ಧರಿಸಿದಳು ಎಂದರ್ಥ. ನೃತ್ಯಗಾತಿಯು ಕೈ-ತಲೆ ಮೊದಲಾದ 6 ಅಂಗಗಳಿಂದ, ಕುತ್ತಿಗೆ-ಬಾಹು ಮೊದಲಾದ 6 ಪ್ರತ್ಯಂಗಗಳಿಂದ ಹಾಗೆಯೇ ಕಣ್ಣು-ಹುಬ್ಬು ಮೊದಲಾದ 6 ಉಪಾಂಗಗಳಿಂದ ಒಟ್ಟು 18 ಪ್ರಕಾರಗಳು ಆಗುತ್ತವೆ. ಈ 18 ವಿಧವಾದ ರೂಪಗಳಿಂದ ಅಭಿನಯವನ್ನು ಮಾಡುವಳು. ಹಾಗೆಯೇ ನಳನಲ್ಲಿರುವ ಸರಸ್ವತಿಯೂ (ವಿದ್ಯೆಯೂ) 18 ವಿಧವಾಗಿದ್ದಾಳೆ ಎಂದರ್ಥ.

ಅಥವಾ ಶಿವನು (ಪುರುಷನು) ಮಾಡುವ ತಾಂಡವ ನೃತ್ಯ ಮತ್ತು ಪಾರ್ವತಿ (ಮಹಿಳೆ) ಮಾಡುವ ಲಾಸ್ಯ ನೃತ್ಯ ಎಂಬ ಎರಡು ಪ್ರಕಾರಗಳನ್ನು ನವರಸಗಳಿಂದ (2 X 9 = 18) ಅಭಿನಯಿಸಿದಾಗ 18 ವಿಧದ ನೃತ್ಯವಾಗುವುದು. ನರ್ತಕಿಯು ತಾಂಡವ ಮತ್ತು ಲಾಸ್ಯ ಎರಡೂ ಬಗೆಯ ನೃತ್ಯವನ್ನು ಒಬ್ಬಳೇ ಮಾಡುವುದರಿಂದ ಅವಳು 18 ವಿಧವಾಗಿ ವೇದಿಕೆಯಲ್ಲಿ ಕಾಣಿಸುತ್ತಾಳೆ ಎಂದರ್ಥ.

*** जेतुम् इच्छा = जिगीषा । तया । जिगीषया । सन्-प्रत्ययः ।**

*** नर्तकी = शिल्पिनि ष्वुन् ।** ನೃತ್ಯದಲ್ಲಿ ಪ್ರಾವೀಣ್ಯ ಅಥವಾ ಕೌಶಲ್ಯ ಇರುವವಳು ನರ್ತಕೀ ಆಗುತ್ತಾಳೆ. ಕೌಶಲ್ಯ ಅಥವಾ ಪ್ರಾವೀಣ್ಯ ಇಲ್ಲದೆ ನೃತ್ಯ ಮಾಡುವವಳು ಎಂದಾದರೆ ನರ್ತಿಕಾ. ಣ್ವುಲ್-ತೃಚೌ -ಸೂತ್ರ.

*** अगाहत = गाहू - विलोडने । अनद्यतनभूते लङ्-लकारः ।**

दिगीशवृन्दांशविभूतिरीशिता
दिशां स कामप्रसरावरोधिनीम् ॥
बभार शास्त्राणि दृशं द्वयाधिकाम्
निजत्रिनेत्रावतरत्वबोधिकाम् ॥६॥

6. ಅನ್ವಯ : **दिगीशवृन्दांशविभूतिः =** ದಿಕ್ಪಾಲ ದೇವತೆಗಳ ಸಮೂಹದ ಒಂದು ಅಂಶರೂಪದ ಐಶ್ವರ್ಯವನ್ನು (ಸಾಮರ್ಥ್ಯವನ್ನು / ಸಂಪತ್ತನ್ನು) ಹೊಂದಿರುವಂತಹ, **दिशाम् =** ಎಲ್ಲ ದಿಕ್ಕುಗಳಿಗೆ, **ईशिता =** ಒಡೆಯನಾಗಿರುವಂತಹ, **सः =** ಆ ನಳ ಮಹಾರಾಜನು, **शास्त्राणि =** ಶಾಸ್ತ್ರಗಳನ್ನು, **कामप्रसरावरोधिनीम् =** ಸ್ವೇಚ್ಛಾಚಾರದ ಪ್ರವೃತ್ತಿಯನ್ನು ತಡೆಯುವಂತಹ, **निजत्रिनेत्रावतरत्वबोधिकाम् =** ಸಹಜವಾಗಿ ಮೂರು ಕಣ್ಣುಗಳನ್ನು ಹೊಂದಿರುವ ಶಿವನ ಅವತಾರರೂಪವೆಂದು ತಿಳಿಸುವಂತಹ, **द्वयाधिकाम् =** ಎರಡಕ್ಕಿಂತ ಹೆಚ್ಚಾಗಿರುವ (ಮೂರನೆಯ), **दृशम् =** ಕಣ್ಣನ್ನು, **बभार =** ಧರಿಸಿದ್ದನು.

ವಿವರಣೆ : ೧. ನಳ ಮಹಾರಾಜನು ಯಜ್ಞ-ಯಾಗಾದಿಗಳ ಮೂಲಕ ನೀಡಿರುವ ಹವಿಸ್ಸನ್ನು ದಿಕ್ಪಾಲ ದೇವತೆಗಳು ಸ್ವೀಕರಿಸಿದ್ದಾರೆ. ಈ ಕಾರಣದಿಂದ ನಳನ ಒಂದು ಅಂಶವು ದಿಕ್ಪಾಲಕರಲ್ಲಿ ಇದೆ. ಹೀಗೆ ದಿಕ್ಪಾಲಕರಲ್ಲಿಯೂ ಒಂದು ಅಂಶವನ್ನು ಯಾರು ಹೊಂದಿದ್ದಾನೋ ಅಂತಹ ನಳ ಮಹಾರಾಜ ಎಂಬುದು ಒಂದು ಅರ್ಥ.

೨. ವಿಭೂತಿ ಅಂದರೆ ಐಶ್ವರ್ಯ ಅಂದರೆ ಒಡೆತನ. ಸಂಪತ್ತು ಎಂಬ ಅರ್ಥವೂ ಇದೆ. ವಿಶಿಷ್ಟ ಭೂತಿಃ ಎಂದು ಬಿಡಿಸಿದರೆ ವಿಶಿಷ್ಟವಾದ ಹುಟ್ಟು ಅಥವಾ ಜನ್ಮ ಎಂಬ ಅರ್ಥವೂ ಇದೆ. ದಿಕ್ಪಾಲ ದೇವತೆಗಳ ಒಂದು ಅಂಶದಿಂದಲೇ ಜನ್ಮವನ್ನು ಪಡೆದವನು ನಳ ಎಂಬುದು ಇನ್ನೊಂದು ಅರ್ಥ. ಹೀಗೆ ದಿಕ್ಪಾಲಕರ ಅಂಶ ಅವನಲ್ಲಿ ಇರುವುದರಿಂದಲೇ ಎಲ್ಲ ದಿಕ್ಕುಗಳಲ್ಲಿಯೂ ವಿಜಯವನ್ನು ಸಾಧಿಸಿ, ನಳ ಮಹಾರಾಜನೂ ಎಲ್ಲ ದಿಕ್ಕುಗಳಿಗೂ ಒಡೆಯ (ದಿಶಾಮ್ ಈಶಿತಾ) ಆಗಿದ್ದಾನೆ ಎಂದರ್ಥ.

ಶಾಸ್ತ್ರಗಳನ್ನು ತಿಳಿದವನು ಸ್ವೇಚ್ಛಾಚಾರದಲ್ಲಿ ತೊಡಗುವುದಿಲ್ಲ. ಶಾಸ್ತ್ರಜ್ಞಾನವೇ ಅವನ ಮೂರನೆಯ ಕಣ್ಣು. ಈ ಕಣ್ಣಿನ ಮೂಲಕ ಸ್ವೇಚ್ಛಾಚಾರದಲ್ಲಿ ತೊಡಗುವವರನ್ನೂ ತಡೆಯುತ್ತಿದ್ದನು ಅಥವಾ ನಿಯಂತ್ರಿಸುತ್ತಿದ್ದನು. ಕಾಮಪ್ರಸರ ಅಂದರೆ ಸ್ವೇಚ್ಛಾಚಾರದ ನಡತೆ. ಶಿವನು ಹೇಗೆ ಕಾಮದೇವನನ್ನು ತನ್ನ ಮೂರನೆಯ ಕಣ್ಣಿನಿಂದ ಸುಟ್ಟು ಬೂದಿ ಮಾಡಿದನೋ, ಹಾಗೆಯೇ ನಳನು ಶಾಸ್ತ್ರಗಳೆಂಬ (ಶಾಸ್ತ್ರಜ್ಞಾನವೆಂಬ) ಮೂರನೆಯ ಕಣ್ಣಿನಿಂದ ಸ್ವೇಚ್ಛಾಚಾರದಲ್ಲಿ ತೊಡಗಿದವರನ್ನು ಸುಟ್ಟುಹಾಕುತ್ತಿದ್ದನು ಅಥವಾ ಶಿಕ್ಷಿಸುತ್ತಿದ್ದನು ಎಂದರ್ಥ.

*** कामस्य प्रसरः = कामप्रसरः । षष्ठीतत्पुरुषः समासः । षष्ठी ।**

*** कामप्रसरस्य अवरोधिनीम् = कामप्रसरावरोधिनीम् । षष्ठीतत्पुरुषः समासः । षष्ठी ।**

पदैश्चतुर्भिः सुकृते स्थिरीकृते
कृतेऽमुना के न तपः प्रपेदिरे ॥
भुवं यदेकाङ्घ्रिकनिष्ठया स्पृशन्
दधावधर्मोऽपि कृशस्तपस्विताम् ॥७॥

7. ಅನ್ವಯ : **अमुना** = ಇವನಿಂದ (ನಳನಿಂದ), **चतुर्भिः पदैः** = ನಾಲ್ಕು ಪಾದಗಳ ಮೂಲಕ, **सुकृते** = ಧರ್ಮವು, **स्थिरीकृते** = ಸ್ಥಿರವಾಗಿ ಮಾಡಲ್ಪಟ್ಟಿರುವಂತಹ, **कृते** = ಕೃತಯುಗದಲ್ಲಿ, **के** = ಯಾರು, **तपः** = ತಪಸ್ಸನ್ನು ಅಥವಾ ಧರ್ಮವನ್ನು, **न प्रपेदिरे** = ಹೊಂದಲಿಲ್ಲ ? (ಎಲ್ಲರೂ ಧರ್ಮವನ್ನು ಪಾಲಿಸುತ್ತಿದ್ದರು). **यत्** = ಯಾವ ಕಾರಣದಿಂದ, **एकाङ्घ्रिकनिष्ठया** = ಒಂದೇ ಪಾದದ ಇರುವಿಕೆಯಿಂದ, **भुवम्** = ಭೂಮಿಯನ್ನು, **स्पृशन्** = ಸ್ಪರ್ಶಿಸುತ್ತಾ, **कृशः** = ತೆಳ್ಳಗಾಗಿರುವ (ದುರ್ಬಲವಾಗಿರುವ), **अधर्मोऽपि** = ಅಧರ್ಮವೂ ಕೂಡ, **तपस्विताम्** = ಧರ್ಮವನ್ನು (ತಪಸ್ಸನ್ನು), **दधौ** = ಧರಿಸಿತು (ಆಚರಿಸಿತು).

ವಿವರಣೆ : ಕೃತಯುಗದಲ್ಲಿ ಮೂರು ಪಾದಗಳಷ್ಟು (ಮುಕ್ಕಾಲು ಭಾಗ) ಧರ್ಮವೂ, ಒಂದು ಪಾದದಷ್ಟು (ಕಾಲು ಭಾಗ) ಅಧರ್ಮವೂ ಇರುತ್ತದೆ. ಹೀಗೆ ಕೃತಯುಗದಲ್ಲಿ ಅಧರ್ಮವು ಕೇವಲ ಒಂದು ಪಾದದಿಂದ ಮಾತ್ರ ಭೂಮಿಯನ್ನು ಸ್ಪರ್ಶಿಸಿರುವುದರಿಂದ, ಅದು ಭೂಮಿಯಲ್ಲಿ ಇನ್ನೂ ಗಟ್ಟಿಯಾಗಿ ನೆಲೆನಿಂತಿಲ್ಲ. ಬಹಳ ದುರ್ಬಲವಾಗಿದೆ. ಇಂತಹ ದುರ್ಬಲವಾದ ಅಧರ್ಮವೂ ಕೂಡ ಧರ್ಮವನ್ನೇ ಆಚರಿಸುತ್ತಿತ್ತು. ಕಾರಣವೇನೆಂದರೆ ಕೃತಯುಗದಲ್ಲಿ ನಳ ಮಹಾರಾಜನು ಭೂಲೋಕದಲ್ಲಿ ಧರ್ಮವನ್ನು ನಾಲ್ಕು ಪಾದಗಳಿಂದ ಗಟ್ಟಿಯಾಗಿ ನೆಲೆಯೂರುವಂತೆ

ಮಾಡಿದ್ದನು. ಈ ಕಾರಣದಿಂದ ಅವನ ಆಡಳಿತದಲ್ಲಿ ಅಧರ್ಮಕ್ಕೆ ಒಂದು ಕಾಲಿನಿಂದ ನೆಲೆಯೂರಲು ಅವಕಾಶವಿರಲಿಲ್ಲ ಎಂಬುದು ತಾತ್ಪರ್ಯ.

ಏಕಾಂಘ್ರಿಕ + ನಿಷ್ಠಯಾ ಎಂದು ಬಿಡಿಸಿಕೊಂಡಾಗ, ಮೇಲೆ ತಿಳಿಸಿದಂತೆ, ಅಧರ್ಮವು ಒಂದು ಪಾದದಿಂದ ಭೂಮಿಯನ್ನು ಸ್ಪರ್ಶಿಸುತ್ತಾ ಇತ್ತು. ಆದರೆ ನಳನು ಅದಕ್ಕೂ ಅವಕಾಶವನ್ನು ಕೊಡಲಿಲ್ಲ ಎಂದರ್ಥ. ಏಕಾಂಘ್ರಿ + ಕನಿಷ್ಠಯಾ ಎಂದು ಬಿಡಿಸಿದರೆ, ಅಧರ್ಮವು ಒಂದು ಪಾದದ ಕಿರು ಬೆರಳಿನಿಂದ ಭೂಮಿಯನ್ನು ಸ್ಪರ್ಶಿಸುತ್ತಾ ಇದ್ದುದರಿಂದ ಬಹಳ ದುರ್ಬಲವಾಗಿತ್ತು. ಆದರೆ ನಳನು ಅದಕ್ಕೂ (ಕಿರು ಬೆರಳಿನಿಂದ ಸ್ಪರ್ಶಿಸಲೂ) ಅವಕಾಶವನ್ನು ಕೊಡಲಿಲ್ಲ ಎಂದರ್ಥ.

*** स्पृशन् । वर्तमानं कृदन्तम् । शतृ-प्रत्ययः । स्पृशन् स्पृशन्तौ स्पृशन्तः ।**

*** पदैः + चतुर्भिः = पदैश्चतुर्भिः । श्चुत्वसन्धिः । स्तोश्चुना श्चुः-८-४-४०.**

*** कृते + अमुना = कृतेऽमुना । पूर्वरूपसन्धिः । एङः पदान्तादति-६-१-१०९.**

*** दधौ + अधर्मः = दधावधर्मः । यान्त-वान्तादेशसन्धिः । एचोयवायावः-६-१-७८.**

*** अधर्मः + अपि = अधर्मो अपि । उत्वसन्धिः । अतो रोरप्लुतादप्लुते ।**

*** अधर्मो + अपि = अधर्मोऽपि । पूर्वरूपसन्धिः । एङः पदान्तादति-६-१-१०९.**

*** कृशः + तपस्विताम् = कृशस्तपस्विताम् । सत्वसन्धिः । विसर्जनीयस्य सः-८-३-३४.**

*** तपस्विता । तपःसहस्राभ्यां विनीनी - इति विन्-प्रत्ययः । तस्य भावः तपस्विता ।**

यदस्य यात्रासु बलोद्धतं रजः
स्फुरत्प्रतापानलधूममञ्जिम ॥
तदेव गत्वा पतितं सुधाम्बुधौ
दधाति पङ्कीभवदङ्कतां विधौ ॥८॥

8. ಅನ್ವಯ : **अस्य** = ಈ ನಳ ಮಹಾರಾಜನ, **यात्रासु** = ದಿಗ್ವಿಜಯ ಯಾತ್ರೆಗಳಲ್ಲಿ, **बलोद्धतम्** = ಸೇನೆಯಿಂದ ಮೇಲಕ್ಕೆ ಹಾರಿಸಲ್ಪಟ್ಟಿರುವ, **स्फुरत्प्रतापानलधूममञ्जिम** = ಶೋಭಿಸುತ್ತಿರುವಂತಹ ಪ್ರತಾಪವೆಂಬ ಬೆಂಕಿಯ ಹೊಗೆಯಂತೆ ಸೌಂದರ್ಯವನ್ನು ಹೊಂದಿರುವ, **यत्** = ಯಾವ, **रजः** = ಧೂಳಿ (ಧೂಳು) ಇದೆಯೋ, **तदेव** = ಅದೇ ಧೂಳಿ, **गत्वा** = ಹೋಗಿ, **सुधाम्बुधौ** = ಅಮೃತ ಸಾಗರದಲ್ಲಿ, **पतितम्** = ಬಿದ್ದು, **पङ्कीभवत्** = ಕೆಸರಾಗಿ, **विधौ** =

ಚಂದ್ರನಲ್ಲಿ, अङ्कताम् = ಕಲೆಯಾಗಿ (ಮೊಲದ ಚಿಹ್ನೆಯನ್ನಾಗಿ), दधाति = ಈಗಲೂ ಪೋಷಿಸುತ್ತಿದೆ.

ವಿವರಣೆ : ಡುಧಾಞ್- ಧಾರಣಪೋಷಣಯೋಃ ಎಂಬಲ್ಲಿ ಧಾರಣ ಮತ್ತು ಪೋಷಣ ಎಂಬ ಎರಡು ಅರ್ಥಗಳಿವೆ. ಸಾಮಾನ್ಯವಾಗಿ ದಧಾತಿ ಎಂಬುದಕ್ಕೆ ಧರಿಸುತ್ತದೆ, ಧರಿಸುತ್ತಾನೆ ಎಂಬ ಅರ್ಥವನ್ನು ಬಳಸುತ್ತಾರೆ. ಆದರೆ ಇಲ್ಲಿ ಧೂಳಿಯೇ ಕರ್ತೃಪದವಾಗಿರುವುದರಿಂದ, ಪೋಷಿಸುತ್ತದೆ ಎಂಬ ಅರ್ಥವು ಸರಿಹೊಂದುತ್ತದೆ. ಕೃತಯುಗದಲ್ಲಿ ನಳನ ಸೇನೆಯಿಂದ ಹಾರಿಸಲ್ಪಟ್ಟಿರುವ ಧೂಳಿಯು ಈ ಕಲಿಯುಗದಲ್ಲಿಯೂ ಚಂದ್ರನ ಕಳಂಕವನ್ನು ಪೋಷಿಸುತ್ತಾ ಇದೆ ಎಂಬುದನ್ನು ತಿಳಿಸಲು ಕವಿಯು ವರ್ತಮಾನ ಕಾಲವನ್ನು ಬಳಸಿದ್ದಾನೆ. ಅತಿಶಯೋಕ್ತಿ ಅಲಂಕಾರ.

* बल + उद्धतम् = बलोद्धतम् । गुणसन्धिः । आद् गुणः-६-१-८७.
* स्फुरद् + प्रतापः = स्फुरत्प्रतापः । चर्त्वसन्धिः । खरि च-८-४-५५.
* अङ्कस्य भावः = अङ्कता । तस्य भावस्त्वतलौ । तलन्तं स्त्रियाम् ।
* मञ्जु अस्य अस्ति इति = मञ्जिम । वर्णदृढादिभ्यः ष्यञ्च - ५-१-१२३.

इमनिच्-प्रत्ययः । मञ्जिम - मञ्जिम्नी, मञ्जिमनी - मञ्जिमानि ।

स्फुरद्धनुर्निस्वनतद्धनाशुग-
प्रगल्भवृष्टिव्ययितस्य सङ्गरे ॥
निजस्य तेजःशिखिनः परश्शता
वितेनुरिङ्गालमिवायशः परे ॥९॥

9. ಅನ್ವಯ : परश्शताः = ನೂರಾರು (ಸಾವಿರಾರು), परे = ಶತ್ರುಗಳು, सङ्गरे = ಯುದ್ಧದಲ್ಲಿ, स्फुरद्धनुर्निस्वनतद्धनाशुगप्रगल्भवृष्टिव्ययितस्य = ಹೊಳೆಯುತ್ತಿರುವ ಧನುಸ್ಸಿನ ನಾದವಿರುವ ಆ ದಟ್ಟವಾದ ಬಾಣಗಳ (ಪರಾಕ್ರಮಿಗಳಿಗೂ) ಅಸಹ್ಯವಾದ ಮಳೆಯಿಂದ ನಾಶವಾಗಿರುವ, निजस्य = ತನ್ನ, तेजःशिखिनः = ತೇಜಸ್ಸು (ಪರಾಕ್ರಮ) ಎಂಬ ಬೆಂಕಿಯ, इङ्गालम् इव = ಇದ್ದಿಲೋ (ಸುಟ್ಟು ಕರಕಲಾಗಿರುವ ಕಟ್ಟಿಗೆ) ಎಂಬಂತೆ, अयशः = ಸೋಲನ್ನು, वितेनुः = ಹರಡಿದರು (ಉಂಟುಮಾಡಿದರು).

ವಿವರಣೆ : ಶತ್ರುಗಳ ಪರಾಕ್ರಮವೆಂಬ ಬೆಂಕಿ ಎಷ್ಟೇ ಪ್ರಖರವಾಗಿದ್ದರೂ, ಅದು ನಳನ ಪರಾಕ್ರಮವೆಂಬ ಬೆಂಕಿಯಲ್ಲಿ ಸುಟ್ಟುಹೋಗಿರುವ ಇದ್ದಿಲಿನಂತೆ ತೋರುತ್ತಿತ್ತು. ಅಂದರೆ

ಸಾವಿರಾರು ಶತ್ರುಗಳು ನಳ ಮಹಾರಾಜನ ಪ್ರತಾಪಾಗ್ನಿಯಲ್ಲಿ ಸಂಪೂರ್ಣವಾಗಿ ಸುಟ್ಟು ಕರಕಲಾದರು ಎಂಬಂತೆ ಭಾಸವಾಗುತ್ತಿತ್ತು. ವಿತೇನುಃ = ತನು- ವಿಸ್ತಾರೇ, ಲಿಟ್-ಲಕಾರ.

*** स्फुरत् + धनुः = स्फुरद्धनुः । जश्त्वसन्धिः । झलां जशोऽन्ते ।**

*** धनुः + निस्वनः = धनुर्निस्वनः । रुत्वसन्धिः । ससजुषो रुः ।**

*** शतात् परे = परश्शताः । पञ्चमीतत्पुरुषः समासः । राजदन्तादिषु परम् - इति शतशब्दस्य परनिपातः ।**

*** तेजः एव शिखी = तेजःशिखी । तस्य । तेजःशिखिनः । अवधारणापूर्वपदकर्मधारयः ।**

अनल्पदग्धारिपुरानलोज्ज्वलैः
निजप्रतापैर्वलयञ्ज्वलद्भुवः ॥
प्रदक्षिणीकृत्य जयाय सृष्टया
रराज नीराजनया स राजघः ॥१०॥

10. ಅನ್ವಯ : **जयाय** = ವಿಜಯವನ್ನು ಪಡೆಯುವುದಕ್ಕೋಸ್ಕರವಾಗಿ, **अनल्पदग्धारिपुरानलोज्ज्वलैः** = ಶತ್ರುಗಳ ನಗರಗಳನ್ನು ಬಹಳವಾಗಿ ಸುಟ್ಟಿರುವ ಬೆಂಕಿಯಂತೆ ಕಂಗೊಳಿಸುತ್ತಿರುವ, **निजप्रतापैः** = ತನ್ನ ಪರಾಕ್ರಮಗಳಿಂದ, **सृष्टया** = ಸೃಷ್ಟಿ ಮಾಡಿರುವ, **नीराजनया** = ಆರತಿಯಿಂದ, **ज्वलत्** = ಬೆಳಗುತ್ತಿರುವ, **भुवः वलयम्** = ಭೂಮಿಯ ಮಂಡಲವನ್ನು (ಭೂಮಂಡಲವನ್ನು), **प्रदक्षिणीकृत्य** = ಪ್ರದಕ್ಷಿಣೆಯಾಗಿ ಸುತ್ತಿ ಬಂದು, **सः** = ಆ, **राजघः** = ರಾಜರನ್ನು ಕೊಂದಿರುವ (ಸೋಲಿಸಿರುವ) ನಳ ಮಹಾರಾಜನು, **रराज** = ವಿರಾಜಿಸಿದನು.

ವಿವರಣೆ : ನೀರಾಜನಯಾ - ಆರತಿಯಿಂದ ಎಂಬುದು ಒಂದು ಅರ್ಥ. ರಾಜ್ಞಾಮ್ ಅಭಾವಃ = ನೀರಾಜಮ್. ರಾಜರೇ ಇಲ್ಲದಿರುವುದು. ನೀರಾಜಂ ಕರೋತಿ, ನೀರಾಜಯತಿ, ಣ್ಯಾಸಶ್ರಂಥೋ ಯುಚ್ ಸೂತ್ರದಿಂದ ಯುಚ್-ಪ್ರತ್ಯಯವನ್ನು ಬಳಸಿದಾಗ, ರಾಜರಿಲ್ಲದಂತೆ ಮಾಡುವುದು ಎಂಬ ಅರ್ಥವು ಸಿಗುತ್ತದೆ. ನಳನು ತನ್ನ ಪರಾಕ್ರಮದಿಂದ ಎಲ್ಲರನ್ನೂ ಸೋಲಿಸಿ, ಜಗತ್ತಿನಲ್ಲಿ ರಾಜರೇ ಇಲ್ಲದಂತೆ ಮಾಡಿ, ಶೋಭಿಸಿದನು ಎಂಬುದು ಇನ್ನೊಂದು ಅರ್ಥ. ರರಾಜ = ರಾಜೃ-ದೀಪ್ತೌ, ಲಿಟ್-ಲಕಾರ.

*** न अल्पम् = अनल्पम् । नञ्समासः । (नञ्-तत्पुरुषः) । नञ् ।**

* अप्रदक्षिणं प्रदक्षिणं कृत्वा = प्रदक्षिणीकृत्य । कृभ्वस्तियोगे सम्पद्यकर्तरि च्विः ।
* जयाय । तादर्थ्ये चतुर्थी वाच्या - इति वार्तिकेन चतुर्थी ।

निवारितास्तेन महीतलेऽखिले
निरीतिभावं गमितेऽतिवृष्टयः ॥
न तत्यजुर्नूनमनन्यविश्रमाः
प्रतीपभूपालमृगीदृशां दृशः ॥११॥

11. ಅನ್ವಯ : **तेन** = ನಳ ಮಹಾರಾಜನಿಂದ, **निरीतिभावम्** = ಈತಿ ಬಾಧೆಗಳಿಲ್ಲದಂತಹ ಸ್ಥಿತಿಯನ್ನು, **गमिते** = ಉಂಟುಮಾಡಿರುವ, **अखिले** = ಸಂಪೂರ್ಣವಾದ, **महीतले** = ಭೂಮಂಡಲದಲ್ಲಿ, **निवारिताः** = ನಿವಾರಿಸಲ್ಪಟ್ಟು (ಇರಲು ಅವಕಾಶವಿಲ್ಲದೆ), **अनन्यविश्रमाः** = ಬೇರೆ ಕಡೆ ಎಲ್ಲಿಯೂ ವಿಶ್ರಾಂತಿಯನ್ನು ಪಡೆಯಲೂ ಸಾಧ್ಯವಾಗದೆ, **अतिवृष्टयः** = ಅತಿವೃಷ್ಟಿಗಳು (ಅತಿವೃಷ್ಟಿ, ಅನಾವೃಷ್ಟಿ, ಈತಿಬಾಧೆ ಮೊದಲಾದವುಗಳು), **प्रतीपभूपालमृगीदृशाम्** = ಶತ್ರು ರಾಜರ ಪತ್ನಿಯರ, **दृशः** = ಕಣ್ಣುಗಳನ್ನು, **नूनम्** = ನಿಶ್ಚಯವಾಗಿಯೂ, **न तत्यजुः** = ಬಿಡಲಿಲ್ಲ.

ವಿವರಣೆ : ಅತಿವೃಷ್ಟಿರನಾವೃಷ್ಟಿಃ ಮೂಷಕಾಃ ಶಲಭಾಃ ಶುಕಾಃ | ಪ್ರತ್ಯಾಸನ್ನಾಶ್ಚ ರಾಜಾನಃ ಷಡೇತಾ ಈತಯಃ ಸ್ಮೃತಾಃ || ಅಂದರೆ ವಿಪರೀತವಾದ ಮಳೆ, ಬರಗಾಲ, ಇಲಿಗಳ ಕಾಟ, ಪೈರಿಗೆ (ಬೆಳೆಗೆ) ಮಿಡತೆ ಕಾಟ, ಬೆಳೆಗೆ ಗಿಳಿಗಳ ಹಾವಳಿ ಮತ್ತು ಶತ್ರುಗಳ ಆಕ್ರಮಣ - ಈ ಆರು ವಿಧದ ಪೀಡೆಯನ್ನು ಈತಿಬಾಧೆ ಎನ್ನುವರು. ನಳ ಮಹಾರಾಜನ ಸಾಮ್ರಾಜ್ಯದಲ್ಲಿ ಈತಿಬಾಧೆಗಳಿಗೆ ಅವಕಾಶಗಳೇ ಇರಲಿಲ್ಲ. ಎಲ್ಲ ಈತಿಬಾಧೆಗಳನ್ನೂ ನಳನು ತನ್ನ ಸಾಮ್ರಾಜ್ಯದಿಂದ ಹೊರಹಾಕಿದ್ದನು. ಹೀಗೆ ಎಲ್ಲಿಯೂ ಇರಲು ಸ್ಥಳಾವಕಾಶವಿಲ್ಲದೆ ಈ ಈತಿಬಾಧೆಗಳು ಶತ್ರುರಾಜರ ಹೆಂಡತಿಯರ ಕಣ್ಣುಗಳನ್ನು ಆಶ್ರಯಿಸಿದ್ದವು. ಅವರ ಕಣ್ಣುಗಳನ್ನು ಮಾತ್ರ ಬಿಟ್ಟುಹೋಗಲಿಲ್ಲ. ಅಂದರೆ ಶತ್ರು ರಾಜರ ಪತ್ನಿಯರು ನಿರಂತರವಾಗಿ ದುಃಖದಿಂದ ಕಣ್ಣೀರು ಸುರಿಸುತ್ತಿದ್ದರು ಎಂದರ್ಥ. ತತ್ಯಜುಃ - ತ್ಯಜ- ಹಾನೌ, ಲಿಟ್ ಲಕಾರ.

* निरीतिभावम् + गमिते = निरीतिभावं गमिते । अनुस्वारसन्धिः । मोनुस्वारः ।
* मृगीदृशाम् + दृशः = मृगीदृशां दृशः । अनुस्वारसन्धिः । मोनुस्वारः-८-३-२३.
* महीतले + अखिले = महीतलेऽखिले । पूर्वरूपसन्धिः । एङः पदान्तादति-६-१-१०९.

* गमिते + अतिवृष्टयः = गमितेऽतिवृष्टयः । पूर्वरूपसन्धिः । एङः पदान्तादति ।

* मृग्याः दृक् इव दृक् यस्याः सा = मृगीदृक् । तासाम् । मृगीदृशाम् । उपमानोत्तरपदः बहुव्रीहिः समासः । अनेकमन्यपदार्थे ।

सितांशुवर्णैर्वयति स्म तद्गुणैः
महासिवेम्नः सहकृत्वरी बहुम् ॥
दिगङ्गनाङ्गावरणं रणाङ्गणे
यशःपटं तद्भटचातुरीतुरी ॥१२॥

12. ಅನ್ವಯ : **महासिवेम्नः** = ಬಹಳ ದೊಡ್ಡದಾದ ಖಡ್ಗವೆಂಬ ಬಟ್ಟೆ ನೇಯುವ ಕೋಲಿಗೆ, **सहकृत्वरी** = ಸಹಾಯವನ್ನು ಮಾಡುವಂತಹ, **तद्भटचातुरीतुरी** = ನಳ ಮಹಾರಾಜನ ಸೈನಿಕರಲ್ಲಿದ್ದಂತಹ (ಭಟ=ಸೇವಕ / ಸೈನಿಕ) ಪ್ರಾವೀಣ್ಯದ ಕೋಲು (ಪ್ರಾವೀಣ್ಯವೆಂಬ ಕೋಲು ಅಥವಾ ಶಿಕ್ಷೆ ಅಥವಾ ಪರಾಕ್ರಮ), **सितांशुवर्णैः** = ಚಂದ್ರನ ಬಣ್ಣಗಳಂತೆ ಇರುವ, **तद्गुणैः** = ನಳನ ಸದ್ಗುಣಗಳಿಂದ ಅಥವಾ ನಳನ ಶೌರ್ಯಾದಿಗುಣಗಳಿಂದ, **रणाङ्गणे** = ಯುದ್ಧಭೂಮಿಯಲ್ಲಿ, **बहुम्** = ಬಹಳವಾದ, **दिगङ्गनाङ्गावरणम्** = ದಿಕ್ಕುಗಳೆಂಬ ವನಿತೆಯರ ಅಂಗಾಂಗಗಳನ್ನು (ಶರೀರವನ್ನು) ಮುಚ್ಚುವ, **यशःपटम्** = ಯಶಸ್ಸೆಂಬ ಬಟ್ಟೆಯನ್ನು, **वयति स्म** = ನೇಯುತ್ತಿತ್ತು.

ವಿವರಣೆ : ಸಾಮಾನ್ಯವಾಗಿ ನೇಕಾರರು ಕೋಲನ್ನು ಬಳಸಿ ಬಟ್ಟೆಯನ್ನು ನೇಯುತ್ತಾರೆ. ನೇಯ್ದ ಬಟ್ಟೆಯನ್ನು ಸುತ್ತಿಡಲು ಬಳಸುವ ಕೋಲನ್ನು ತುರೀ ಎನ್ನುವರು. ಇದನ್ನೇ ಬಟ್ಟೆ ನೇಯಲು ಬಳಸಿದ ಕೋಲು ಎಂದು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ. ಆ ನೇಕಾರರು ನೇಯುವ ಬಟ್ಟೆಯು ಮನುಷ್ಯರಿಗಷ್ಟೇ ಉಟ್ಟುಕೊಳ್ಳಲು ಸಾಕಾಗುತ್ತದೆ. ಇಲ್ಲಿ ನಳ ಮಹಾರಾಜನೆಂಬ ನೇಕಾರನಿಗೆ ಖಡ್ಗವೇ ನೇಯುವ ಕೋಲು ಆಗಿತ್ತು. ಆದರೆ ಆ ನೇಯುವ ಕೋಲನ್ನು ಬಳಸುವ ಅಗತ್ಯವೇ ಇರಲಿಲ್ಲ. ಏಕೆಂಬರೆ ನಳನ ಸೈನಿಕರಲ್ಲಿ ಇದ್ದಂತಹ ಖಡ್ಗಗಳೆಂಬ ನೇಯುವ ಕೋಲುಗಳು, ದಿಕ್ಕುಗಳೆಂಬ ವನಿತೆಯರ ದೇಹವನ್ನು ಮುಚ್ಚುವಷ್ಟು ದೊಡ್ಡದಾದ ಬಟ್ಟೆಯನ್ನು ನೇಯುತ್ತಿದ್ದವು. ಅಂದರೆ ನಳ ಮಹಾರಾಜನ ಸೈನಿಕರ ಪರಾಕ್ರಮವೆಂಬ ವಸ್ತ್ರರೂಪದ ಕೀರ್ತಿಯು ಎಲ್ಲ ದಿಕ್ಕುಗಳನ್ನೂ ಆವರಿಸಿತ್ತು ಎಂದರ್ಥ.

ವಯತಿ ಸ್ಮ = ವೇಞ್- ತಂತುಸಂತಾನೇ, ಲಟ್-ಲಕಾರ.

*** वयति स्म । लट् स्मे ।** ಸ್ಮ ಎಂಬ ಅವ್ಯಯವು ಲಟ್-ಲಕಾರಕ್ಕೆ ಅನ್ವಯವಾಗುವಂತೆ ಬಳಕೆಯಾದರೆ, ಲಟ್-ಲಕಾರಕ್ಕೆ ಭೂತಕಾಲದ ಅರ್ಥವು ಉಂಟಾಗುತ್ತದೆ.

*** यशः + पटम् = यशःपटम् । उपध्मानीयसन्धिः । कुप्वोः ०ःकःपौ च ।**

*** यशः एव पटः = यशःपटः । तम् । यशःपटम् । अवधारणापूर्वपदकर्मधारयः समासः ।** ಸಮಾಸವಾದ ಮೇಲೆ ಅಂದರೆ ಸಮಸ್ತಪದದ ಮಧ್ಯದಲ್ಲಿ ವಿಸರ್ಗವು ಇದ್ದರೆ, ಅದನ್ನು ಉಪಧ್ಮಾನೀಯವಾಗಿ ಉಚ್ಚಾರಣೆ ಮಾಡಬೇಕು (ಯಶಃಪಟಮ್ = ಯಶಫ್-ಪಟಮ್) ಸೂತ್ರ - कुप्वोः ०ःकःपौ च ।

*** चतुरस्य भावः कर्म वा = चातुर्यम् । गुणवचनब्राह्मणादिभ्यः कर्मणि च । ष्यञ्-प्रत्ययः ।**

*** चातुर्यमेव चातुरी = ष्यञः षित्त्वात् - षिद्गौरादिभ्यश्च इति ङीष्-प्रत्ययः ।**

*** चातुरी एव तुरी = चातुरीतुरी । अवधारणापूर्वपदः कर्मधारयः ।**

प्रतीपभूपैरिव किं ततो भिया
विरुद्धधर्मैरपि भेत्तृतोज्झिता ॥
अमित्रजिन्मित्रजिदोजसा स यद्
विचारदृक्चारदृगप्यवर्तत ॥१३॥

13. ಅನ್ವಯ : **विरुद्धधर्मैः इव** = ಪರಸ್ಪರ ವಿರುದ್ಧವಾದ ಸ್ವಭಾವಗಳೋ ಎಂಬಂತಿರುವ, **प्रतीपभूपैः अपि** = ಪರಸ್ಪರ ಶತ್ರು ರಾಜರಿಂದಲೂ ಕೂಡ, **ततः** = ನಳನ ಕಾರಣದಿಂದ ಉಂಟಾದ, **भिया** = ಹೆದರಿಕೆಯಿಂದ, **भेत्तृता** = ಭೇದಭಾವವು (ಒಳ ಜಗಳವು), **उज्झिता किम्** = ಬಿಡಲ್ಪಟ್ಟಿತೋ ? (ಎಂಬಂತೆ ಭಾಸವಾಗುತ್ತಿತ್ತು). **यत्** = ಯಾಕೆಂದರೆ, **विचारदृक्** = ವಿಚಾರವೆಂಬ ಕಣ್ಣುಳ್ಳವನು (ಮತ್ತು) **चारदृक् अपि** = ಸೇವಕರೆಂಬ ಕಣ್ಣುಳ್ಳವನೂ ಆಗಿ, **सः** = ಆ ನಳ ಮಹಾರಾಜನು, **ओजसा** = ತನ್ನ ಓಜಸ್ಸಿನಿಂದ (ತೇಜಸ್ಸಿನಿಂದ), **अमित्रजित्** = ಶತ್ರುಗಳನ್ನು ಗೆದ್ದವನೂ, **मित्रजित्** = ಸೂರ್ಯನನ್ನು ಗೆದ್ದವನೂ, **अवर्तत** = ಆಗಿದ್ದನು.

ವಿವರಣೆ : ಸಾಮಾನ್ಯವಾಗಿ ದೊಡ್ಡ ಚಕ್ರವರ್ತಿಗಳ ಕೆಳಗೆ ಸಾಮಂತ ರಾಜರು ಇರುತ್ತಿದ್ದರು. ಸಾಮಂತ ರಾಜರಲ್ಲಿ ಪರಸ್ಪರ ಕಚ್ಚಾಟ-ಜಗಳಗಳು ಇರುತ್ತಿದ್ದವು. ಆದರೆ ನಳ ಮಹಾರಾಜನ ಪರಾಕ್ರಮದ ಬಗ್ಗೆ ಇರುವ ಹೆದರಿಕೆಯಿಂದ ಯಾವೊಬ್ಬ ಸಾಮಂತ ರಾಜರೂ ಒಳ ಜಗಳ ಅಥವಾ ಕಚ್ಚಾಟವನ್ನು ಮಾಡುತ್ತಿರಲಿಲ್ಲ. ಅಮಿತ್ರಜಿತ್ ಎಂಬುದಕ್ಕೆ ಪರಾಕ್ರಮದಿಂದ ಶತ್ರುಗಳನ್ನು

ಗೆದ್ದವನೆಂದೂ, ಮಿತ್ರಜಿತ್ ಎಂಬುದಕ್ಕೆ ಪ್ರೀತಿಯಿಂದ ಗೆಳೆಯರ ಮನಸ್ಸನ್ನು ಗೆದ್ದವನೆಂದು ಹೇಳಬಹುದು. ಹಾಗೆಯೇ ಮಿತ್ರಜಿತ್ ಎಂಬುದಕ್ಕೆ ಸೂರ್ಯನನ್ನು ಗೆದ್ದವನೆಂದೂ, ಅಮಿತ್ರಜಿತ್ ಅಂದರೆ ಸೂರ್ಯನಲ್ಲದೇ ಗ್ರಹ-ನಕ್ಷತ್ರಾದಿಗಳನ್ನು ಗೆದ್ದವನೆಂದೂ ಹೇಳಬಹುದು.

ಚಾರ ಅಂದರೆ ಸಾಮಾನ್ಯ ಸೇವಕ. ಸಾಮಾನ್ಯ ಸೇವಕರೆಂಬ ಕಣ್ಣುಗಳಿಂದ ನಳನು ಸಾಮ್ರಾಜ್ಯವನ್ನು ನೋಡುತ್ತಿದ್ದನು ಅಥವಾ ಗಮನಿಸುತ್ತಿದ್ದನು. ವಿಶಿಷ್ಟಃ ಚಾರಃ = ವಿಚಾರಃ, ವಿಶಿಷ್ಟವಾದ ಅಂದರೆ ಬಹಳ ಬುದ್ಧಿಶಾಲಿಯಾದ ಸೇವಕರೆಂಬ ಕಣ್ಣುಗಳಿಂದ ಸಾಮ್ರಾಜ್ಯವನ್ನು ಗಮನಿಸುತ್ತಿದ್ದನು ಎಂದೂ ಹೇಳಬಹುದು. ವಿಚಾರ ಅಂದರೆ ಆಲೋಚನೆ ಎಂಬ ಅರ್ಥವೂ ಇದೆ. ತನ್ನ ಆಲೋಚನೆ ಅಥವಾ ಶಾಸ್ತ್ರಜ್ಞಾನವೆಂಬ ಕಣ್ಣುಗಳಿಂದ ನಳನು ಸಾಮ್ರಾಜ್ಯವನ್ನು ನೋಡುತ್ತಿದ್ದನು ಎಂಬುದಾಗಿಯೂ ಅರ್ಥವನ್ನು ಹೇಳಬಹುದು. ಅವರ್ತತ = ವೃತು - ವರ್ತನೇ, ಭೂತಕಾಲ, ಲಙ್ ಲಕಾರ.

*** ततः + भिया = ततो भिया । हशि च-६-१-११४. [स्वादिसन्धिः । (उत्वसन्धिः)]**
*** अपि + अवर्तत = अप्यवर्तत । यण्सन्धिः । इको यणचि-६-१-७७.**

तदोजसस्तद्यशसः स्थिताविमौ
वृथेति चित्ते कुरुते यदा यदा ॥
तनोति भानोः परिवेषकैतवात्
तदा विधिः कुण्डलनां विधोरपि ॥१४॥

14. ಅನ್ವಯ : **विधिः** = ಬ್ರಹ್ಮನು, **यदा यदा** = ಯಾವ ಯಾವ ಸಮಯದಲ್ಲಿ, **तदोजसः** = ನಳ ಮಹಾರಾಜನ ಪ್ರತಾಪದ (ಮತ್ತು) **तद्यशसः** = ಅವನ ಯಶಸ್ಸಿನ, **स्थितौ** = ಉಪಸ್ಥಿತಿ (ಹಾಜರಾತಿ) ಇರುವಾಗ, **इमौ** = ಇವರಿಬ್ಬರು (ಸೂರ್ಯ-ಚಂದ್ರರು), **वृथा** = ವ್ಯರ್ಥ, **इति** = ಎಂದು, **चित्ते** = ಮನಸ್ಸಿನಲ್ಲಿ, **कुरुते** = ಮಾಡುತ್ತಾನೆಯೋ (ಆಲೋಚಿಸುತ್ತಾನೆಯೋ), **तदा** = ಆಗ, **भानोः** = ಸೂರ್ಯನಿಗೆ (ಮತ್ತು) **विधोः अपि** = ಚಂದ್ರನಿಗೂ ಕೂಡ, **परिवेषकैतवात्** = ಗ್ರಹಣವೆಂಬ ನೆಪದಿಂದ, **कुण्डलनाम्** = ವ್ಯರ್ಥವೆಂಬುದನ್ನು ಸೂಚಿಸುವ ರೇಖಾಚಿತ್ರವನ್ನು, **तनोति** = ಮಾಡುತ್ತಾನೆ.

ವಿವರಣೆ : ಕೆಲವೊಮ್ಮೆ ನಳ ಮಹಾರಾಜನ ಪ್ರತಾಪ ಮತ್ತು ಯಶಸ್ಸನ್ನು ನೋಡಿದಾಗ, ಸೂರ್ಯ-ಚಂದ್ರರು ಇರುವುದೇ ವ್ಯರ್ಥವೆಂದು ಬ್ರಹ್ಮನಿಗೆ ತೋರುತ್ತದೆ. ಅಂತಹ ಸಮಯದಲ್ಲಿ

ಸೂರ್ಯನಿಗೆ ಮತ್ತು ಚಂದ್ರನಿಗೆ ಗ್ರಹಣವನ್ನು ಉಂಟುಮಾಡಿ, ಕೇವಲ ಒಂದು ವೃತ್ತಾಕಾರದ ಗೆರೆಯ ಮೂಲಕ ಸೂರ್ಯ ಮತ್ತು ಚಂದ್ರರ ಇರುವಿಕೆಯನ್ನು ಬ್ರಹ್ಮನು ಜಗತ್ತಿಗೆ ತೋರಿಸುತ್ತಾನೆ. ಅಂದರೆ ಗ್ರಹಣಕಾಲದಲ್ಲಿ ಸೂರ್ಯ-ಚಂದ್ರರು ಒಂದು ವೃತ್ತಾಕಾರದ ಗೆರೆಯ ರೂಪದಲ್ಲಿ ಮಾತ್ರ ಕಾಣಿಸುತ್ತಾರೆ. ಸಂಪೂರ್ಣವಾಗಿ ಕಾಣಿಸುವುದಿಲ್ಲ ಎಂದರ್ಥ.

*** स्थितौ + इमौ = स्थिताविमौ । यान्त-वान्तादेशः सन्धिः । एचोऽयवायावः ।**

अयं दरिद्रो भवितेति वैधसीम्
लिपिं ललाटेऽर्थिजनस्य जाग्रतीम् ॥
मृषा न चक्रेऽल्पितकल्पपादपः
प्रणीय दारिद्र्यदरिद्रतां नृपः ॥१५॥

15. ಅನ್ವಯ : **अल्पितकल्पपादपः** = ಕಲ್ಪವೃಕ್ಷವನ್ನೂ ಚಿಕ್ಕದಾಗಿ ಮಾಡಿರುವ, **नृपः** = ನಳ ಮಹಾರಾಜನು, **अर्थिजनस्य** = ಬೇಡುವವರ, **ललाटे** = ಹಣೆಯಲ್ಲಿ, **दारिद्र्यदरिद्रताम्** = ಬಡತನಕ್ಕೆ ಬಡತನವನ್ನು, **प्रणीय** = ಉಂಟುಮಾಡಿ, **अयम्** = ಇವನು, **दरिद्रः** = ಬಡವ, **भविता** = ಆಗಲಿದ್ದಾನೆ, **इति** = ಎಂಬ, **जाग्रतीम्** = ಎಚ್ಚರಿಕೆಯ, **वैधसीम्** = ಬ್ರಹ್ಮನ, **लिपिम्** = ಬರವಣಿಗೆಯನ್ನು, **मृषा** = ಸುಳ್ಳನ್ನಾಗಿ, **न चक्रे** = ಮಾಡಲಿಲ್ಲ.

ವಿವರಣೆ : ಕಲ್ಪವೃಕ್ಷವು ಬೇಡಿದ್ದನ್ನೆಲ್ಲಾ ಕೊಡುತ್ತದೆ. ಆದರೆ ನಳನು ಬೇಡದೇ ಇರುವುದನ್ನೂ ಕೊಡುತ್ತಿದ್ದನು. ಈ ಕಾರಣದಿಂದ ಕಲ್ಪವೃಕ್ಷಕ್ಕಿಂತಲೂ ನಳನೇ ದೊಡ್ಡವನಾದನು. ಕಲ್ಪವೃಕ್ಷವು ಚಿಕ್ಕದಾಯಿತು. ಬಡತನವು ಉಂಟಾಗುತ್ತದೆ ಎಂದು ಬ್ರಹ್ಮನು ಬರೆದಿರುತ್ತಾನೆ. ಆದರೆ ನಳನು ಕಲ್ಪವೃಕ್ಷಕ್ಕಿಂತಲೂ ಹೆಚ್ಚಾಗಿ ದಾನವನ್ನು ಮಾಡಿ, ಬ್ರಹ್ಮನು ಬರೆದಿರುವ ಬಡತನಕ್ಕೆ ಬಡತನವನ್ನು ಉಂಟುಮಾಡುತ್ತಾನೆ. ಹೀಗೆ ನಳನು ಉಂಟುಮಾಡಿದ ಬಡತನದಿಂದ ಬ್ರಹ್ಮನು ಬರೆದ ಬಡತನವೆಂಬ ಹಣೆಬರಹವು ಸುಳ್ಳಾಗಲಿಲ್ಲ. ಹಾಗೆಯೇ ಇಂತಹ ಜನರ ಬಡತನಕ್ಕೆ ಬಡತನವು ಉಂಟಾದುದರಿಂದ ಜನರಿಗೆ ಬಡತನವು ಉಂಟಾಗಲಿಲ್ಲ ಎಂದರ್ಥ.

*** दरिद्रः + भविता = दरिद्रो भविता । हशि च । उत्वसन्धिः ।**

*** भविता + इति = भवितेति । गुणसन्धिः । आद् गुणः ।**

*** कल्पः इति पादपः = कल्पपादपः । सम्भावनापूर्वपदकर्मधारयः समासः ।**

*** अल्पितः कल्पपादपः येन सः = अल्पितकल्पपादपः । बहुव्रीहिः समासः ।**

अनेकमन्यपदार्थे ।

विभज्य मेरुर्न यदर्थिसात्कृतो
न सिन्धुरुत्सर्गजलव्ययैर्मरुः ॥
अमानि तत्तेन निजायशोयुगम्
द्विफालबद्धाश्चिकुराः शिरःस्थितम् ॥१६॥

16. ಅನ್ವಯ : **मेरुः** = ಮೇರು ಪರ್ವತವು (ಚಿನ್ನ ಮತ್ತು ರತ್ನಗಳ ಆಕರವಾಗಿರುವ ಹಿಮಾಲಯವು), **विभज्य** = ತುಂಡು ತುಂಡಾಗಿ ವಿಭಾಗಿಸಲ್ಪಟ್ಟು, **अर्थिसात्** = ಭಿಕ್ಷುಕನಾಗಿ, **न कृतः** = ಮಾಡಲ್ಪಡಲಿಲ್ಲ. (**तथा** = ಹಾಗೆಯೇ), **सिन्धुः** = ಸಮುದ್ರವು, **उत्सर्गजलव्ययैः** = ದಾನ ಮಾಡುವಾಗ ಬಳಸುವ ನೀರುಗಳಿಂದ, **मरुः** = ಮರುಭೂಮಿಯಾಗಿ, **न कृतः** = ಮಾಡಲ್ಪಡಲಿಲ್ಲ, (ಎಂಬುದು) **यत्** = ಯಾವುದು ಇದೆಯೋ, **तत्** = ಅದು, **तेन** = ನಳನಿಂದ, **द्विफालबद्धाः** = ತಲೆಯ ಮೇಲೆ ಎರಡು ಬದಿಗಳಲ್ಲಿ ಕಟ್ಟಲ್ಪಟ್ಟ, **चिकुराः** = ಕೂದಲುಗಳು, **शिरःस्थितम्** = ತಲೆಯ ಮೇಲಿರುವ, **निजायशोयुगम्** = ತನ್ನ ಎರಡು ಅಪಕೀರ್ತಿಗಳ ಜೋಡಿ ಎಂದು, **अमानि** = ತಿಳಿಯಲ್ಪಟ್ಟಿತು.

ವಿವರಣೆ : ನಳ ಮಹಾರಾಜನು ಬಹಳವಾಗಿ ಸಂಪತ್ತನ್ನು, ಚಿನ್ನ-ರತ್ನಗಳನ್ನು ದಾನ ಮಾಡುತ್ತಿದ್ದನು. ಹೀಗೆ ಬಹಳವಾಗಿ ದಾನ ಮಾಡಿದರೂ, ಎಲ್ಲ ರತ್ನಗಳ ಆಕರವಾಗಿರುವ ಹಿಮಾಲಯವನ್ನು ಭಿಕ್ಷುಕನನ್ನಾಗಿ ಮಾಡಲಿಲ್ಲ. ಹಿಮಾಲಯವು ರತ್ನಗಳ ಆಕರವಾಗಿಯೇ ಇತ್ತು. ಹಾಗೆಯೇ ದಾನ ಮಾಡುವಾಗ, ಕೊಡಬೇಕಾಗಿರುವ ವಸ್ತುವಿನ ಮೇಲೆ ನೀರನ್ನು ಹಾಕಿ ಕೊಡುವುದು ಧಾರ್ಮಿಕ ಸಂಪ್ರದಾಯವಾಗಿದೆ. ಎಲ್ಲ ವಸ್ತುಗಳ ಮೇಲೆ ನಿರಂತರವಾಗಿ ನೀರನ್ನು ಸುರಿಯುತ್ತಾ, ಸಮುದ್ರವನ್ನು ಖಾಲಿ ಮಾಡಲಿಲ್ಲ. ಹೀಗೆ ಹಿಮಾಲಯವನ್ನು ಬರಿದು ಮಾಡಲಿಲ್ಲ ಮತ್ತು ಸಮುದ್ರವನ್ನು ಬರಿದು ಮಾಡಲಿಲ್ಲ ಎಂಬ ಎರಡು ಅಪಕೀರ್ತಿಗಳ ಜೋಡಿ ನಳ ಮಹಾರಾಜನ ತಲೆಯ ಮೇಲಿತ್ತು, ಎಂದರ್ಥ. ಪ್ರಾಚೀನ ಕಾಲದಲ್ಲಿ ವಿಲಾಸಿ ಪುರುಷರು ತಲೆಯ ಮೇಲೆ ಎರಡು ಬದಿಗಳಲ್ಲಿ ಕೂದಲುಗಳನ್ನು ಕಟ್ಟಿ ಜುಟ್ಟು ಹಾಕಿಕೊಳ್ಳುತ್ತಿದ್ದರು. ಮಹಾರಾಜನ ಈ ಎರಡು ಜುಟ್ಟುಗಳು ಎರಡು ಅಪಕೀರ್ತಿಗಳೋ ಎಂಬಂತೆ ಭಾಸವಾಗುತ್ತಿದ್ದವು.

* द्वयोः फालयोः समाहारः = द्विफालम् । समाहारद्विगुः समासः । सङ्ख्यापूर्वो द्विगुः । तद्धितार्थोत्तरपदसमाहारे च । पात्रादिगणपठितत्वात् पात्राद्यन्तस्य न इति न स्त्रीप्रत्ययः ।

ಫಾಲಶಬ್ದವು ಪಾತ್ರಾದಿಗಣದಲ್ಲಿ ಇರುವುದರಿಂದ ದ್ವಿಫಾಲೀ ಎಂಬ ರೂಪವು ಆಗುವುದಿಲ್ಲ. ದ್ವಿಫಾಲಮ್ ಎಂಬ ರೂಪವಾಗುತ್ತದೆ.

*** द्विफालेन बद्धाः = द्विफालबद्धाः । तृतीयातत्पुरुषः समासः । कर्तृकरणे कृता बहुलम् ।**

*** कृत्स्नः मेरुः अर्थी सम्पद्यते इति अर्थिसात् । विभाषा साति कार्त्स्न्ये ।**

अजस्रमभ्यासमुपेयुषा समम्
मुदैव देवः कविना बुधेन च ॥
दधौ पटीयान्समयं नयन्नयम्
दिनेश्वरश्रीरुदयं दिने दिने ॥१७॥

17. ಅನ್ವಯ : **अजस्रम्** = ನಿರಂತರವಾಗಿ, **अभ्यासम्** = ಕಾವ್ಯ-ಶಾಸ್ತ್ರಗಳ ಅಭ್ಯಾಸವನ್ನು, **उपेयुषा** = ಪಡೆದಿರುವಂತಹ, **कविना** = ಕವಿಯ, **च** = ಮತ್ತು, **बुधेन** = ಪಂಡಿತನ, **समम्** = ಜೊತೆಗೆ, **मुदा एव** = ಸಂತೋಷದಿಂದಲೇ, **समयम्** = ಸಮಯವನ್ನು, **नयन्** = ಕಳೆಯುತ್ತಾ, **पटीयान्** = ಬಹಳ ನಿಪುಣನಾಗಿ, **दिनेश्वरश्रीः** = ಸೂರ್ಯನಂತಹ ಕಾಂತಿಯುಳ್ಳವನಾಗಿ (ಕೀರ್ತಿಯುಳ್ಳವನಾಗಿ), **अयम् देवः** = ಈ ನಳ ಮಹಾರಾಜನು, **दिने दिने** = ಪ್ರತಿದಿನವೂ, **उदयम्** = ಏಳಿಗೆಯನ್ನು, **दधौ** = ಹೊಂದಿದನು. ದಧೌ = ಡುಧಾಞ್ - ಧಾರಣಪೋಷಣಯೋಃ, ಲಿಟ್ ಲಕಾರ.

*** मुदा + एव = मुदैव । वृद्धिसन्धिः । वृद्धिरेचि-६-१-८८.**

*** नयन् + अयम् = नयन्नयम् । ङमुडागमसन्धिः । ङमो ह्रस्वादचि ङमुण्नित्यम् ।**

अधो विधानात्कमलप्रवालयोः
शिरःसु दानादखिलक्षमाभुजाम् ॥
पुरेदमूर्ध्वं भवतीति वेधसा
पदं किमस्याङ्कितमूर्ध्वरेखया ॥१८॥

18. ಅನ್ವಯ : **कमलप्रवालयोः** = ತಾವರೆ ಮತ್ತು ಚಿಗುರುಗಳನ್ನು, **अधः विधानात्** = ಕೆಳಗೆ ಇಡುವುದರ ಮೂಲಕ, (ಹಾಗೆಯೇ) **अखिलक्षमाभुजाम्** = ಎಲ್ಲ ರಾಜರ, **शिरःसु** = ತಲೆಗಳಲ್ಲಿ (ತಲೆಗಳ ಮೇಲೆ), **दानात्** = ಇಡುವುದರ ಮೂಲಕ, **अस्य** = ಇವನ (ನಳನ), **इदम्** = ಈ, **पदम्** = ಪಾದವು (ಕಾಲು), **ऊर्ध्वम्** = ಮೇಲೆ (ಉತ್ಕೃಷ್ಟವಾದುದು), **पुरा भवति** = ಮುಂದೆ ಆಗಲಿದೆ,

इति = ಎಂದು, **वेधसा** = ಬ್ರಹ್ಮನಿಂದ, **ऊर्ध्वरेखया** = ಮೇಲ್ಮುಖವಾದ ಗೆರೆಯಿಂದ, **अङ्कितम् किम्** = ಚಿಹ್ನೆ ಮಾಡಲ್ಪಟ್ಟಿತೋ ಹೇಗೆ ? (ಏನು ?)

ವಿವರಣೆ : ಕಮಲ ಮತ್ತು ಚಿಗುರುಗಳು ತುಂಬ ಮೃದುವಾಗಿರುತ್ತವೆ. ಆದರೆ ಅವುಗಳನ್ನೇ ಕಡೆಗಣಿಸಲಾಯಿತು. ಅದಕ್ಕಿಂತಲೂ ನಳನ ಕಾಲುಗಳೇ ಶ್ರೇಷ್ಠವೆಂದು ಬಿಂಬಿಸಲಾಯಿತು. ಹಾಗೆಯೇ ರಾಜರೆಲ್ಲರೂ ನಳನ ಕಾಲಿಗೆ ಬಿದ್ದು ನಮಸ್ಕರಿಸುತ್ತಿದ್ದರು. ಆದ್ದರಿಂದ ರಾಜರ ತಲೆಯ ಮೇಲೆ ನಳನು ಕಾಲಿಟ್ಟಂತೆ ಆಯಿತು. ಇದೆಲ್ಲ ಜಗತ್ತಿನಲ್ಲಿ ನಡೆಯಬೇಕಾದರೆ, ಬಹುಶಃ ಬ್ರಹ್ಮನೇ ನಳನ ಕಾಲುಗಳಲ್ಲಿ ಊರ್ಧ್ವ ರೇಖೆಗಳನ್ನು ಬರೆದಿರಬಹುದು ಎಂಬುದು ಊಹೆ. ಯಾಕೆಂದರೆ - ಊರ್ಧ್ವರೇಖಾಂಕಿತಃ ಪಾದಃ ಸರ್ವೋತ್ಕರ್ಷಂ ಭಜೇತ್ ಸದಾ ಎಂದು ಅಂಗಲಕ್ಷಣಶಾಸ್ತ್ರದಲ್ಲಿ ತಿಳಿಸಿರುವುದರಿಂದ, ಇಂತಹ ಚಿಹ್ನೆ ನಳನ ಪಾದಗಳಲ್ಲಿ ಇದ್ದಿರಬಹುದೆಂದು ಊಹಿಸಲಾಗಿದೆ.

*** ऊर्ध्वा चासौ रेखा च = ऊर्ध्वरेखा । कर्मधारयः समासः । विशेषणं विशेष्येण बहुलम् ।**

*** कमलं च प्रवालश्च = कमलप्रवालौ । तयोः । कमलप्रवालयोः । द्वन्द्वसमासः । चार्थे द्वन्द्वः ।**

*** अधः विधानम् = अधोविधानम् । तस्मात् । अधोविधानात् । केवलसमासः । सह सुपा ।** ಕೇವಲಸಮಾಸವನ್ನು ಮಾಡಿ ಇದನ್ನು ಒಂದು ಪದವಾಗಿಯೂ ಬಳಸಬಹುದು. ಅಥವಾ **अधः विधानात्** ಎಂದು ಬಿಡಿಸಿಯೂ ಬರೆಯಬಹುದು.

जगज्जयं तेन च कोशमक्षयम्
प्रणीतवाञ्शैशवशेषवानयम् ॥
सखा रतीशस्य ऋतुर्यथा वनम्
वपुस्तथालिङ्गदथास्य यौवनम् ॥१९॥

19. ಅನ್ವಯ : **अयम्** = ಇವನು (ನಳನು), **शैशवशेषवान्** = ಶೈಶವ ಅವಸ್ಥೆಯನ್ನು ಸ್ವಲ್ಪ ಬಾಕಿ ಹೊಂದಿರುವವನಾಗಿ (ಹದಿನಾರು ವರ್ಷ ತುಂಬುವುದಕ್ಕಿಂತ ಮುಂಚೆಯೇ), **जगज्जयम्** = ಜಗತ್ತಿನ ವಿಜಯವನ್ನು, **च** = ಮತ್ತು, **तेन** = ಅದರಿಂದ, **अक्षयम्** = ನಾಶವಿಲ್ಲದಂತಹ, **कोशम्** = ಹಣದ ಖಜಾನೆಯನ್ನು, **प्रणीतवान्** = ಉಂಟುಮಾಡಿದನು. **अथ** = ಆಮೇಲೆ, **रतीशस्य** = ಮನ್ಮಥನ (ಕಾಮದೇವನ), **सखा** = ಗೆಳೆಯನಾದ, **ऋतुः** = ವಸಂತ ಋತುವು, **वनम्** =

ಅರಣ್ಯವನ್ನು (ಅರಣ್ಯದ ಸೌಂದರ್ಯವನ್ನು), **यथा** = ಹೇಗೆಯೋ, **तथा** = ಹಾಗೆ, **अस्य** = ಇವನ (ನಳನ), **वपुः** = ಶರೀರವನ್ನು, **यौवनम्** = ಯೌವನವು, **आलिङ्गत्** = ತಬ್ಬಿಕೊಂಡಿತು.

ವಿವರಣೆ : ದೇಹದಲ್ಲಿ ಯೌವನ ಇದ್ದಾಗ ದೇಹವು ಸೌಂದರ್ಯವನ್ನು ಹೊಂದಿರುತ್ತದೆ. ಆದ್ದರಿಂದ ಯೌವನ ಎಂಬ ಶಬ್ದವು ಸೌಂದರ್ಯವನ್ನು ಸೂಚಿಸುತ್ತದೆ. ಅಂತಹ ಆ ಸೌಂದರ್ಯವೆಂಬ ಯೌವನವೇ ನಳನನ್ನು ಆಲಿಂಗಿಸಿತು. ಇದರಿಂದ ನಳನು ಬಹಳ ಸುಂದರನಾಗಿದ್ದನು ಎಂಬುದು ತಿಳಿಯುತ್ತದೆ. ಸಂಪೂರ್ಣ ಜಗತ್ತನ್ನೇ ಗೆದ್ದಿರುವುದರಿಂದ, ಎಲ್ಲ ವಿಧವಾದ ಚಿನ್ನ ಮತ್ತು ವಜ್ರ-ವೈಡೂರ್ಯಾದಿ ರತ್ನಗಳಿಂದ ಮಾಡಿದ ಆಭರಣಗಳು ಇವನಲ್ಲಿದ್ದವು. ಇವು ನಳನ ಸೌಂದರ್ಯಕ್ಕೆ ಇನ್ನೂ ಹೆಚ್ಚಿನ ಮೆರಗನ್ನು ನೀಡಿದವು ಎಂದರ್ಥ.

*** प्रणीतवान् + शैशवम् = प्रणीतवाञ्शैशवम् । श्चुत्वसन्धिः । स्तोः श्चुना श्चुः ।**

*** जगत् + जयम् = जगद् जयम् । जश्त्वसन्धिः । झलां जशोऽन्ते ।**

*** जगद् + जयम् = जगज्जयम् । श्चुत्वसन्धिः । स्तोः श्चुना श्चुः ।**

*** रतीशस्य + ऋतुः = रतीशस्य ऋतुः । वा प्रकृतिभावः । ऋत्यकः ।**

अधारि पद्मेषु तदङ्घ्रिणा घृणा
क्व तच्छयच्छायलवोऽपि पल्लवे ॥
तदास्यदास्येऽपि गतोऽधिकारिताम्
न शारदः पार्विकशर्वरीश्वरः ॥२०॥

20. ಅನ್ವಯ : **तदङ्घ्रिणा** = ನಳನ ಕಾಲಿನಿಂದ (ಕಾಲುಗಳಿಂದ), **पद्मेषु** = ತಾವರೆಗಳಲ್ಲಿ, **घृणा** = ಅನುಕಂಪವು (ದಯೆಯು), **अधारि** = ಧರಿಸಲ್ಪಟ್ಟಿತು. **पल्लवे** = ಎಳತಾದ ಚಿಗುರುಗಳಲ್ಲಿ, **तच्छयच्छायलवः अपि** = ನಳನ ಕೈಬೆರಳುಗಳ ಸೌಂದರ್ಯದ ತುಣುಕಾದರೂ, **क्व** = ಎಲ್ಲಿ ? **शारदः** = ಶರತ್ಕಾಲದಲ್ಲಿ ಇರುವಂತಹ, **पार्विकशर्वरीश्वरः** = ಹುಣ್ಣಿಮೆಯ ಚಂದ್ರನು, **तदास्यदास्ये अपि** = ನಳ ಮಹಾರಾಜನ ಮುಖದ ದಾಸ್ಯದಲ್ಲಿಯೂ ಕೂಡ, **अधिकारिताम्** = ಅಧಿಕಾರವನ್ನು, **न गतः** = ಹೊಂದಲಿಲ್ಲ.

ವಿವರಣೆ : ಚಿಗುರುಗಳಲ್ಲಿರುವ ಮೃದುತ್ವ ಮತ್ತು ಸೌಂದರ್ಯಕ್ಕಿಂತಲೂ ನಳನ ಕೈಗಳ ಸೌಂದರ್ಯ ಹೆಚ್ಚಾಗಿ ಇದ್ದುದರಿಂದ, ಆ ಚಿಗುರುಗಳಲ್ಲಿ ನಳನ ಕೈಗಳ ಸೌಂದರ್ಯ ಕಾಣಿಸಲೇ ಇಲ್ಲ ಎಂಬುದು ಒಂದು ಅರ್ಥ. ಪದಃ ಲವಃ = ಪಲ್ಲವಃ ಎಂದು ಬಿಡಿಸಿದರೆ, ಪಲ್ಲವೇ = ಕಾಲಿನ

ತುಣುಕಿನಲ್ಲಿ, ಕೈಯ ಬೆರಳುಗಳ ಸೌಂದರ್ಯದ ತುಣುಕು ಹೇಗೆ ಕಾಣಲು ಸಾಧ್ಯ ? ಎಂಬುದು ಇನ್ನೊಂದು ಅರ್ಥ. ಹಾಗೆಯೇ ಸಾಮಾನ್ಯವಾಗಿ ಸುಂದರವಾಗಿರುವವರ ಮುಖವನ್ನು ಚಂದ್ರನಿಗೆ ಹೋಲಿಸುತ್ತಾರೆ. ಆದರೆ ಇಲ್ಲಿ ಹಾಗಿಲ್ಲ. ನಳನ ಮುಖದ ಸೌಂದರ್ಯ ಎಷ್ಟಿತ್ತೆಂದರೆ, ನಳನ ಮುಖಕ್ಕೆ ದಾಸನಾಗಿರಲೂ ಚಂದ್ರನಿಗೆ ಅರ್ಹತೆ ಇರಲಿಲ್ಲ ಎಂದು ವರ್ಣಿಸಲಾಗಿದೆ.

*** शर्वर्याः ईश्वरः = शर्वरीश्वरः । षष्ठीतत्पुरुषः । षष्ठी ।**

*** आस्यस्य दास्यम् = आस्यदास्यम् । तस्मिन् । आस्यदास्ये । षष्ठीतत्पुरुषः । षष्ठी ।**

किमस्य लोम्नां कपटेन कोटिभिः
विधिर्न लेखाभिरजीगणद्गुणान् ॥
न रोमकूपौघमिषाज्जगत्कृता
कृताश्च किं दूषणशून्यबिन्दवः ॥२१॥

21. ಅನ್ವಯ : **विधिः** = ಬ್ರಹನು, **लोम्नाम्** = ರೋಮಗಳ, **कपटेन** = ನೆಪದಿಂದ, **कोटिभिः** = ಕೋಟಿ ಸಂಖ್ಯೆಯ, **लेखाभिः** = ಗೆರೆಗಳಿಂದ, **अस्य** = ಇವನ (ನಳನ), **गुणान्** = ಗುಣಗಳನ್ನು, **किम्** = ಏನು **न अजीगणद्** = ಲೆಕ್ಕ ಮಾಡಲಿಲ್ಲವೇ ? **च** = ಮತ್ತು, **जगत्कृता** = ಬ್ರಹ್ಮನಿಂದ, **रोमकूपौघमिषात्** = ರೋಮ ರಂಧ್ರಗಳ ಸಮೂಹದ ನೆಪದಿಂದ, **दूषणशून्यबिन्दवः** = ದೋಷಗಳ ಅಭಾವವನ್ನು ಸೂಚಿಸುವ ಬಿಂದುಗಳು, **किम्** = ಏನು, **न कृताः** = ಮಾಡಲ್ಪಡಲಿಲ್ಲವೇ ?

ವಿವರಣೆ : ತಿಸ್ರಃ ಕೋಟ್ಯೋऽರ್ಧಕೋಟೀ ಚ ಯಾನಿ ರೋಮಾಣಿ ಮಾನುಷೇ - ಎಂದು ಹೇಳಿರುವುದರಿಂದ, ಮನುಷ್ಯನ ದೇಹದಲ್ಲಿ ಮೂರುವರೆ ಕೋಟಿ ರೋಮರಂಧ್ರಗಳಿವೆ ಎಂಬುದು ತಿಳಿಯುತ್ತದೆ. ಬ್ರಹ್ಮದೇವನು ಮನುಷ್ಯ ಶರೀರವನ್ನು ಸೃಷ್ಟಿ ಮಾಡುವಾಗ ಇಷ್ಟು (ಮೂರುವರೆಕೋಟಿ) ಲೆಕ್ಕವನ್ನು ಮಾಡಿಕೊಂಡು, ರೋಮಗಳನ್ನು (ಮೈಮೇಲಿನ ಕೂದಲು) ಮನುಷ್ಯನ ದೇಹದಲ್ಲಿ ಇಡುತ್ತಾನೆ. ಹೀಗಿರುವಾಗ ನಳ ಮಹಾರಾಜನ ಗುಣಗಳನ್ನು ಬ್ರಹ್ಮನು ಯಾಕೆ ಲೆಕ್ಕ ಮಾಡಲಿಲ್ಲ ? (ಅವನ ಗುಣಗಳು ಮೂರುವರೆ ಕೋಟಿಗಿಂತಲೂ ಹೆಚ್ಚು ಇವೆಯೇ ? ಎಂಬುದು ಭಾವಾರ್ಥ). ಹಾಗೆಯೇ ನಳನ ದೋಷಗಳ ಅಭಾವವನ್ನು ಲೆಕ್ಕ ಮಾಡುವಾಗ, ರೋಮಗಳ ಬುಡದಲ್ಲಿರುವ ರಂಧ್ರಗಳನ್ನೇ (ಹಳ್ಳ / ತಗ್ಗು) ಲೆಕ್ಕ ಮಾಡಲು ಬಳಸಬಹುದಿತ್ತಲ್ಲವೇ ? ನಳನ ದೋಷಗಳ ಅಭಾವವನ್ನೂ ಬ್ರಹ್ಮನಿಗೆ ಲೆಕ್ಕ ಮಾಡಲು

ಸಾಧ್ಯವಾಗಲಿಲ್ಲವೇ ? ಎಂಬುದು ಭಾವಾರ್ಥ. ಜ್ಯೋತಿಷ್ಯ ಪಂಡಿತರು ಅಷ್ಟಕವರ್ಗದಲ್ಲಿ ಗ್ರಹಗಳ ಪ್ರಭಾವವನ್ನು ಮನೆಗಳ (ರಾಶಿಗಳ) ಮೇಲೆ ಲೆಕ್ಕ ಮಾಡುವಾಗ, ವೃತ್ತಾಕಾರದ ಸಣ್ಣ ಸಣ್ಣ ಬಿಂದುಗಳನ್ನು ರಾಶಿಗಳಲ್ಲಿ ಬರೆದು ಲೆಕ್ಕ ಮಾಡುತ್ತಾರೆ. ಹಾಗೆಯೇ ಬ್ರಹ್ಮನೂ ಲೆಕ್ಕ ಮಾಡಬಹುದಿತ್ತಲ್ಲವೇ ? ಎಂಬುದು ಪ್ರಶ್ನೆ. ಬ್ರಹ್ಮನು ಹೀಗೆ ಲೆಕ್ಕ ಮಾಡದೇ ಇದ್ದುದರಿಂದ, ಲೆಕ್ಕ ಮಾಡಲು ಸಾಧ್ಯವಿಲ್ಲದಷ್ಟು ಗುಣಗಳು ಮತ್ತು ದೋಷಗಳ ಅಭಾವಗಳು ನಳ ಮಹಾರಾಜನಿಗೆ ಇದ್ದವು ಎಂದು ತಿಳಿಯಬೇಕು.

*** रोमकूप + ओघः = रोमकूपौघः । वृद्धिसन्धिः । वृद्धिरेचि ।**

अमुष्य दोर्भ्यामरिदुर्गलुण्ठने
ध्रुवं गृहीतार्गलदीर्घपीनता ॥
उरःश्रिया तत्र च गोपुरस्फुरत्-
कपाटदुर्धर्षतिरःप्रसारिता ॥२२॥

22. ಅನ್ವಯ : **अरिदुर्गलुण्ठने** = ಶತ್ರುಗಳ ಕೋಟೆಗಳನ್ನು ವಶಪಡಿಸಿಕೊಳ್ಳುವಾಗ, **अमुष्य** = ಇವನ (ನಳನ), **दोर्भ्याम्** = ಬಾಹುಗಳಿಂದ, **अर्गलदीर्घपीनता** = ಅಗಳಿಯ (ಚಿಲಕದ) ಉದ್ದ-ಅಗಲವು, **गृहीता** = ತೆಗೆದುಕೊಳ್ಳಲ್ಪಟ್ಟಿತು, **ध्रुवम्** = ಅಲ್ಲವೇ ? **च** = ಮತ್ತು, **तत्र** = ಅಲ್ಲಿ **अमुष्य** = ಇವನ, **उरःश्रिया** = ಅಗಲವಾದ ಎದೆಯ ಶೋಭೆಯಿಂದ, **गोपुरस्फुरत्-कपाटदुर्धर्षतिरःप्रसारिता** = ಪುರದ್ವಾರದಲ್ಲಿ (ಊರನ್ನು/ರಾಜ್ಯವನ್ನು ಪ್ರವೇಶಿಸುವ ಹೆಬ್ಬಾಗಿಲಿನಲ್ಲಿ) ಶೋಭಿಸುತ್ತಿರುವ ಬಾಗಿಲಿನ ಕಠಿನತೆ ಮತ್ತು ಅಗಲಗಳು, **गृहीता** = ತೆಗೆದುಕೊಳ್ಳಲ್ಪಟ್ಟವೋ ? (**किम्** = ಏನೋ ?)

ವಿವರಣೆ : ಸಾಮಾನ್ಯವಾಗಿ ಶತ್ರುಗಳನ್ನು ಸೋಲಿಸಿ, ಕಾರಾಗೃಹದಲ್ಲಿಡುವಾಗ ಕಾರಾಗೃಹದ ಬಾಗಿಲಿಗೆ ಭದ್ರವಾದ ಅಗಳಿ ಮತ್ತು ಬೀಗಗಳು ಬೇಕಾಗುತ್ತವೆ. ಆದರೆ ಇಲ್ಲಿ ನಳ ಮಹಾರಾಜನ ಬಾಹುಗಳೇ ಅಗಳಿಯಂತೆ ಇದ್ದವು. ಹಾಗೆಯೇ ಗೋಪುರದ್ವಾರಗಳಲ್ಲಿ ಬಹಳ ಗಟ್ಟಿಯಾದ ಮತ್ತು ದೊಡ್ಡದಾದ ಹೆಬ್ಬಾಗಿಲುಗಳು ಇರುತ್ತವೆ. ಆದರೆ ನಳನ ಎದೆಯೇ ಹೆಬ್ಬಾಗಿಲಿನಂತೆ ಗಟ್ಟಿಯಾಗಿಯೂ, ಅಗಲವಾಗಿಯೂ ಇತ್ತು ಎಂಬುದು ತಾತ್ಪರ್ಯ.

*** तिरः + प्रसारिता = तिरःप्रसारिता । उपध्मानीयसन्धिः । कुप्वोः ०:कःपौ च ।**

स्वकेलिलेशस्मितनिन्दितेन्दुनो

निजांशदृक्तर्जितपद्मसम्पदः ॥

अतद्वयीजित्वरसुन्दरान्तरे

न तन्मुखस्य प्रतिमा चराचरे ॥२३॥

23. ಅನ್ವಯ : **स्वकेलिलेशस्मितनिन्दितेन्दुनः** = ತನ್ನ ಆಟದ (ಸಂತೋಷದ) ತುಣುಕಿನ ನಗುವಿನಿಂದ ಚಂದ್ರನನ್ನೂ ನಿಂದಿಸಿರುವಂತಹ, **निजांशदृक्तर्जितपद्मसम्पदः** = ತನ್ನ ದೇಹದ ಅವಯವವಾಗಿರುವ ಕಣ್ಣುಗಳಿಂದಲೇ ತಾವರೆಯ ಕಾಂತಿಯನ್ನೂ ಸೋಲಿಸಿರುವಂತಹ, **तन्मुखस्य** = ಆ ನಳ ಮಹಾರಾಜನ ಮುಖದ, **प्रतिमा** = ಹೋಲಿಕೆಯು (ಪ್ರತಿಮೆ, ಪ್ರತಿಕೃತಿ ಅಥವಾ ಪ್ರತಿರೂಪವು), **अतद्वयीजित्वरसुन्दरान्तरे** = ಚಂದ್ರ ಮತ್ತು ಕಮಲಗಳನ್ನು ಗೆಲ್ಲುವ ಸ್ವಭಾವವಿರುವ (ಸಾಮರ್ಥ್ಯವಿರುವ) ಇನ್ನೊಂದು ಸುಂದರವಾದ ವಸ್ತು ಇಲ್ಲದಿರುವ, **चराचरे** = ಈ ಜಗತ್ತಿನಲ್ಲಿ, **न** = ಇಲ್ಲ.

ವಿವರಣೆ : ಸೌಂದರ್ಯವನ್ನು ವರ್ಣಿಸುವಾಗ ಎಲ್ಲ ಕವಿಗಳೂ ಚಂದ್ರನನ್ನು ಅಥವಾ ಕಮಲವನ್ನು ಉಪಮೆಯಾಗಿ ಬಳಸುತ್ತಾರೆ. ಚಂದ್ರ ಮತ್ತು ಕಮಲಗಳನ್ನು ಸೋಲಿಸುವಂತಹ ಸುಂದರವಾದ ವಸ್ತು ಈ ಜಗತ್ತಿನಲ್ಲಿಯೇ ಇಲ್ಲ. ಆದರೆ ನಳನ ನಗುಮುಖವು ಚಂದ್ರನನ್ನು ಮತ್ತು ಅವನ ಕಣ್ಣುಗಳು ಕಮಲಗಳನ್ನು ಸೋಲಿಸಿರುವುದರಿಂದ, ನಳನ ಮುಖವನ್ನು ಮತ್ತು ಕಣ್ಣುಗಳನ್ನು ಸೋಲಿಸುವ ಸುಂದರವಾದ ಇನ್ನೊಂದು ಹೋಲಿಕೆ ಅಥವಾ ವಸ್ತು ಈ ಜಗತ್ತಿನಲ್ಲಿ ಇರಲು ಹೇಗೆ ಸಾಧ್ಯ ? ನಿಶ್ಚಯವಾಗಿಯೂ ಇಲ್ಲ ಎಂದರ್ಥ.

*** तत् + मुखस्य = तन्मुखस्य । अनुनासिकसन्धिः । यरोऽनुनासिकेऽनुनासिको वा ।**

सरोरुहं तस्य दृशैव निर्जितम्

जिताः स्मितेनैव विधोरपि श्रियः ॥

कुतः परं भव्यमहो महीयसी

तदाननस्योपमितौ दरिद्रता ॥२४॥

24. ಅನ್ವಯ : **तस्य** = ಅವನ (ನಳನ), **दृशा एव** = ಕಣ್ಣಿನಿಂದಲೇ, **सरोरुहम्** = ತಾವರೆಯು, **निर्जितम्** = ಸೋಲಿಸಲ್ಪಟ್ಟಿತು. **स्मितेन एव** = ನಗುವಿನಿಂದಲೇ, **विधोः** = ಚಂದ್ರನ, **श्रियः अपि** = ಶೋಭೆಗಳು ಕೂಡ (ಕಿರಣಗಳು ಕೂಡ), **जिताः** = ಸೋಲಿಸಲ್ಪಟ್ಟವು. **परम्** = ಚಂದ್ರ

ಮತ್ತು ಕಮಲಗಳಿಗಿಂತ ಬೇರೆಯಾದ ಇನ್ನೊಂದು, **भव्यम्** = ಸುಂದರವಾದದ್ದು (ವಸ್ತು), **कुतः** = ಎಲ್ಲಿ ? (ಹೇಗೆ ಇರಲು ಸಾಧ್ಯ ?). **अहो** = ಆಹಾ ! **तदाननस्य** = ಅವನ ಮುಖದ, **उपमितौ** = ಹೋಲಿಕೆಯಲ್ಲಿ (ಹೋಲಿಕೆಯನ್ನು ಮಾಡಲು), **महीयसी** = ಬಹಳ ದೊಡ್ಡದಾದ, **दरिद्रता** = ಬಡತನ.

ವಿವರಣೆ : ರಾಜ ಅಥವಾ ರಾಣಿಯರ ಮುಖವನ್ನು ವರ್ಣಿಸುವಾಗ ಕವಿಗಳು ಚಂದ್ರ ಅಥವಾ ಕಮಲಗಳಿಗೆ ಹೋಲಿಸುತ್ತಾರೆ. ಆದರೆ ನಳನ ಮುಖವು ಚಂದ್ರ ಮತ್ತು ಕಮಲಗಳಿಗಿಂತಲೂ ಸುಂದರವಾಗಿ ಇದ್ದುದರಿಂದ, ನಳನ ಮುಖವನ್ನು ಹೋಲಿಸಲು ಪ್ರಪಂಚದಲ್ಲಿ ವಸ್ತುವೇ ಸಿಗುತ್ತಿಲ್ಲ. ಇದೇ ಬಹಳ ದೊಡ್ಡ ಬಡತನ ಎಂದರ್ಥ. ಕಾವ್ಯಲಿಂಗ ಅಲಂಕಾರ.

*** दृशा + एव = दृशैव । वृद्धिसन्धिः । वृद्धिरेचि-६-१-८८.**

*** स्मितेन + एव = स्मितेनैव । वृद्धिसन्धिः । वृद्धिरेचि-६-१-८८.**

स्ववालभारस्य तदुत्तमाङ्गजैः
समं चमर्येव तुलाभिलाषिणः ॥
अनागसे शंसति बालचापलम्
पुनः पुनः पुच्छविलोलनच्छलात् ॥२५॥

25. ಅನ್ವಯ : **चमरी एव** = ಚಮರೀಮೃಗವೇ (ಒಂದು ಜಾತಿಯ ಜಿಂಕೆ), **पुनः पुनः** = ಮತ್ತೆ ಮತ್ತೆ, **पुच्छविलोलनच्छलात्** = ತನ್ನ ಬಾಲವನ್ನು ಅಲ್ಲಾಡಿಸುವ (ಬೀಸುವ) ನೆಪದಿಂದ, **तदुत्तमाङ्गजैः** = ಅವನ (ನಳನ) ತಲೆ ಕೂದಲುಗಳ, **समम्** = ಜೊತೆಗೆ, **तुलाभिलाषिणः** = ಸಾದೃಶ್ಯವನ್ನು ಬಯಸುತ್ತಾ ಇರುವಂತಹ, **स्ववालभारस्य** = ತನ್ನ ಬಾಲದ ಭಾರವೆಂಬ, **अनागसे** = ಅಪರಾಧಕ್ಕೆ (ಪಾಪಕ್ಕೆ), **बालचापलम्** = ಬಾಲಕರ ಚಪಲತೆಯೋ ಎಂಬಂತೆ (ಬಾಲದ ಚಪಲತೆಯೋ ಎಂಬಂತೆ), **शंसति** = ಹೇಳುತ್ತಿದೆ.

ವಿವರಣೆ : ಈ ಶ್ಲೋಕದಲ್ಲಿ ಕೆಲವೆಡೆ ಬಾಲಚಾಪಲಮ್ ಎಂದೂ, ಇನ್ನೂ ಕೆಲವೆಡೆ ವಾಲಚಾಪಲಮ್ ಎಂದೂ ವಿವರಿಸಿದ್ದಾರೆ. ನಳನ ತಲೆಯಲ್ಲಿ ತುಂಬ ಕೂದಲುಗಳಿವೆ. ನಳನು ತನ್ನ ತಲೆಯನ್ನು ಪದೇ ಪದೇ ಅಲುಗಾಡಿಸುವುದಿಲ್ಲ. ಆದರೆ ನಳನ ತಲೆಗಿಂತಲೂ ಹೆಚ್ಚು ಕೂದಲುಗಳನ್ನು ಹೊಂದಿರುವ ಬಾಲವನ್ನು ಚಮರೀಮೃಗವು ನಿರಂತರವಾಗಿ ಬೀಸುತ್ತಾ ಇರುತ್ತದೆ. ಬಾಲಕ್ಕೆ ತುಂಬ ಕೂದಲುಗಳು ಇರುವುದು ಅಪರಾಧ. ಏಕೆಂದರೆ ಅದರ ಭಾರದಿಂದ ಸದಾಕಾಲ

ಬಾಲವನ್ನು ಬೀಸಲು ಆಗುವುದಿಲ್ಲ. ಆದರೆ ಇಷ್ಟು ಕೂದಲುಗಳಿದ್ದರೂ ಚಮರೀಮೃಗವು ತನ್ನ ಬಾಲವನ್ನು ಬೀಸುತ್ತಾ, ಕೂದಲಿನ ಭಾರವು ದೊಡ್ಡ ವಿಷಯವಲ್ಲವೆಂದು ಸಾರಿ ಹೇಳುತ್ತಿದೆ. ಈ ಮೂಲಕ ನಳನ ತಲೆಕೂದಲುಗಳ ಜೊತೆ ಸ್ಪರ್ಧೆಗೆ ಇಳಿದವರಂತೆ ತನ್ನ (ಬಾಲಕರಂತೆ) ಸಣ್ಣತನವನ್ನು ಅಥವಾ ಚಪಲತೆಯನ್ನು ತೋರಿಸುತ್ತಿದೆ ಎಂಬುದು ಒಂದು ಅರ್ಥ. ಅಥವಾ ಸದಾ ಬೀಸುತ್ತಾ ಇರುವುದೇ ಬಾಲದ ಸ್ವಭಾವ. ಅದೇ ಚಪಲತೆ. ಆದ್ದರಿಂದ ತನ್ನ ಚಪಲತೆಯನ್ನು ತೋರಿಸಲು, ಭಾರವಾಗಿದ್ದರೂ ತನ್ನ ಬಾಲವನ್ನು ಚಮರೀಮೃಗವು ನಿರಂತರವಾಗಿ ಬೀಸುತ್ತಾ ಇದೆ ಎಂಬುದು ಇನ್ನೊಂದು ಅರ್ಥ.

*** चमरी + एव = चमर्येव । यणसन्धिः । इको यणचि ।**

*** विलोलन + छलात् = विलोलनच्छलात् । तुगागमसन्धिः । छे च ।**

महीभृतस्तस्य च मन्मथश्रिया
निजस्य चित्तस्य च तं प्रतीच्छया ॥
द्विधा नृपे तत्र जगत्रयीभुवाम्
नतभ्रुवां मन्मथविभ्रमोऽभवत् ॥२६॥

26. ಅನ್ವಯ : **च** = ಮತ್ತು, **तस्य** = ಆ, **महीभृतः** = ರಾಜನ (ನಳನ), **मन्मथश्रिया** = ಮನ್ಮಥನಂತಹ ಸೌಂದರ್ಯದಿಂದ, **च** = ಮತ್ತು, **निजस्य** = ತನ್ನ, **चित्तस्य** = ಮನಸ್ಸಿಗೆ, **तम्** = ನಳನನ್ನು, **प्रति** = ಕುರಿತು (ನಳನ ಬಗ್ಗೆ), **इच्छया** = ಅನುರಾಗ (ಪ್ರೀತಿ) ಇರುವುದರಿಂದ, **तत्र नृपे** = ಆ ನಳನಲ್ಲಿ, **जगत्त्रयीभुवाम्** = ಮೂರು ಲೋಕಗಳಲ್ಲಿ ಹುಟ್ಟಿರುವಂತಹ, **नतभ्रुवाम्** = ಸುಂದರಿಯರಿಗೆ, **मन्मथविभ्रमः** = ಮನ್ಮಥನೆಂಬ ಭ್ರಮೆಯು, **द्विधा** = ಎರಡು ವಿಧವಾಗಿ, **अभवत्** = ಆಯಿತು.

ವಿವರಣೆ : ಸುಂದರನಾಗಿರುವ ನಳನನ್ನು ನೋಡಿ, ಇವನೇ ಮನ್ಮಥನಿರಬೇಕು ಎಂಬುದು ಒಂದು ಭ್ರಮೆ. ಮನ್ಮಥನಷ್ಟೇ ಸುಂದರನಾಗಿರುವುದರಿಂದ, ಇವನಲ್ಲಿ ಅನುರಾಗವುಂಟಾಗಿ, ಇವನೇ ನಮಗೆ ಬೇಕು ಎಂಬ ಇನ್ನೊಂದು ಭ್ರಮೆ. ಹೀಗೆ ತ್ರಿಲೋಕ ಸುಂದರಿಯರಿಗೆ ಎರಡು ವಿಧವಾದ ಭ್ರಮೆಯು ಉಂಟಾಯಿತು.

*** विभ्रमः + अभवत् = विभ्रमो अभवत् । उत्वसन्धिः । अतो रोरप्लुतादप्लुते ।**

*** विभ्रमो + भवत् = विभ्रमोऽभवत् । पूर्वरूपसन्धिः । एङः पदान्तादति-६-१-१०९.**

निमीलनभ्रंशजुषा दृशा भृशम्
निपीय तं यस्त्रिदशीभिरर्जितः ॥
अमूस्तमभ्यासभरं विवृण्वते
निमेषनिःस्वैरधुनापि लोचनैः ॥२७॥

27. ಅನ್ವಯ : **निमीलनभ्रंशजुषा** = ಮುಚ್ಚದೇ ಇರುವುದನ್ನು ಪ್ರೀತಿಸುವಂತಹ, **दृशा** = ಕಣ್ಣಿನ ಮೂಲಕ, **तम्** = ಅವನನ್ನು (ನಳನನ್ನು), **भृशम्** = ಚೆನ್ನಾಗಿ, **निपीय** = ಕಣ್ತುಂಬ ನೋಡಿ, **त्रिदशीभिः** = ದೇವತಾಸ್ತ್ರೀಯರಿಂದ, **यः** = ಯಾವ, **अर्जितः** = ಅಭ್ಯಾಸವು ಮಾಡಲ್ಪಟ್ಟಿತೋ, **तम् अभ्यासभरम्** = ಆ ವಿಶೇಷವಾದ ಅಭ್ಯಾಸವನ್ನು, **अमूः** = ಇವರು (ದೇವತಾಸ್ತ್ರೀಯರು), **निमेषनिःस्वैः** = ಮುಚ್ಚದೇ ಇರುವಂತಹ, **लोचनैः** = ಕಣ್ಣುಗಳಿಂದ, **अधुना अपि** = ಈಗಲೂ ಕೂಡ, **विवृण्वते** = ವಿವರಿಸುತ್ತಾ ಇದ್ದಾರೆ.

ವಿವರಣೆ : ಕೃತಯುಗದಲ್ಲಿ ಬಹಳ ಸುಂದರನಾದ ನಳ ಮಹಾರಾಜನನ್ನು ನೋಡಬೇಕೆಂಬ ಆಸೆಯಿಂದ ದೇವತಾಸ್ತ್ರೀಯರು ಕಣ್ಣನ್ನು ಮುಚ್ಚದೆ, ನಿರಂತರವಾಗಿ ನಳನನ್ನೇ ನೋಡುತ್ತಾ ಇರುವ ಅಭ್ಯಾಸವನ್ನು ಮಾಡಿಕೊಂಡಿದ್ದರು. ಈಗ ನಳ ಮಹಾರಾಜನು ಇಲ್ಲದಿದ್ದರೂ ಆ ಅಭ್ಯಾಸವು ಬಿಟ್ಟುಹೋಗಿಲ್ಲ. ಈಗಲೂ ದೇವತಾಸ್ತ್ರೀಯರು ಕಣ್ಣು ಬಿಟ್ಟುಕೊಂಡೇ ಇದ್ದಾರೆ.

ವಿವೃಣ್ವತೇ = ವಿ-ಉಪಸರ್ಗ+ವೃಞ್-ವರಣೇ, ಸ್ವಾದಿಗಣ, ಲಟ್-ಲಕಾರ,

ವೃಣುತೇ-ವೃಣ್ವಾತೇ-ವೃಣ್ವತೇ.

अदस्तदाकर्णि फलाढ्यजीवितम्
दृशोर्द्वयं नस्तदवीक्षि चाफलम् ॥
इति स्म चक्षुःश्रवसां प्रिया नले
स्तुवन्ति निन्दन्ति हृदा तदात्मनः ॥२८॥

28. ಅನ್ವಯ : **चक्षुःश्रवसाम्** = ನಾಗಗಳ, **प्रियाः** = ಪ್ರಿಯತಮೆಯರು (ನಾಗಕನ್ನಿಕೆಯರು), **नः** = ನಮ್ಮ, **अदः** = ಈ, **दृशोः द्वयम्** = ಕಣ್ಣುಗಳೆರಡು, **तदाकर्णि** = ನಳನನ್ನೇ ನಿರಂತರವಾಗಿ ಕೇಳಿಸಿಕೊಳ್ಳುತ್ತಿದ್ದು, **फलाढ्यजीवितम्** = ಸಫಲವಾದ ಜೀವನವು, **तदवीक्षि** = ನಳನನ್ನು ನೋಡದೇ ಇದ್ದು, **अफलम्** = ಫಲವಿಲ್ಲದ್ದಾಯಿತು, **इति** = ಎಂದು, **नले** = ನಳನಲ್ಲಿ,

आत्मनः = ತಮ್ಮ, **हृदा** = ಮನಸ್ಸಿನಿಂದಲೇ, **स्तुवन्ति स्म** = ಹೊಗಳುತ್ತಿದ್ದರು, **च** = ಮತ್ತು, **निन्दन्ति स्म** = ನಿಂದಿಸುತ್ತಿದ್ದರು.

ವಿವರಣೆ : ಚಕ್ಷುಃಶ್ರವಾಃ ಅಂದರೆ ಕಣ್ಣುಗಳೇ ಕಿವಿಗಳಾಗಿ ಇರುವವರು. ಹಾವುಗಳಿಗೆ ಕಿವಿ ಇಲ್ಲ. ಅವುಗಳು ನೋಡುವುದನ್ನು ಮತ್ತು ಕೇಳುವುದನ್ನು ಕಣ್ಣುಗಳಿಂದಲೇ ಮಾಡುತ್ತವೆ. ಇಲ್ಲಿ ನಳನ ಬಗ್ಗೆಯೇ ಕಣ್ಣುಗಳಿಂದ ಕೇಳಿಸಿಕೊಳ್ಳುತ್ತಾ ಇದ್ದ ಕಾರಣದಿಂದ, ನಳನನ್ನು ನೋಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಒಂದು ಇಂದ್ರಿಯವು ಒಮ್ಮೆ ಒಂದು ಕೆಲಸವನ್ನು ಮಾತ್ರ ಮಾಡುತ್ತದೆ ಎಂಬುದು ಒಂದು ಅಭಿಪ್ರಾಯ. ನಾಗಕನ್ನಿಕೆಯರು ಪಾತಾಳಲೋಕದಲ್ಲಿ ಇದ್ದುದರಿಂದ ಭೂಲೋಕದಲ್ಲಿರುವ ನಳನನ್ನು ನೋಡಲು ಸಾಧ್ಯವಾಗಲಿಲ್ಲ. ಆದರೆ ಕಣ್ಣುಗಳಿಂದಲೇ ನಳನ ಸದ್ಗುಣಗಳನ್ನು ಪಾತಾಳಲೋಕದಲ್ಲಿ ಕೇಳಿಸಿಕೊಳ್ಳುತ್ತಾ ಇದ್ದರು ಎಂಬುದು ಇನ್ನೊಂದು ಅಭಿಪ್ರಾಯ. ನಳನ ಸದ್ಗುಣಗಳನ್ನು ಕೇಳಿಸಿಕೊಳ್ಳಲು ಅವಕಾಶ ಸಿಕ್ಕಿದ್ದರಿಂದ ನಳನನ್ನು ನಾಗಕನ್ನಿಕೆಯರು ಹೊಗಳುತ್ತಿದ್ದರು. ಆದರೆ ನೋಡಲು ಸಾಧ್ಯವಾಗಲಿಲ್ಲ ಎಂಬ ಬೇಸರದಿಂದ ನಳನನ್ನು ನಿಂದಿಸುತ್ತಿದ್ದರು ಎಂಬುದು ಅಂತರಾರ್ಥ.

*** फलेन आढ्यम् = फलाढ्यम् । तृतीयातत्पुरुषः समासः । तृतीया तत्कृतार्थेन गुणवचनेन ।**

विलोकयन्तीभिरजस्रभावना-
बलादमुं नेत्रनिमीलनेष्वपि ॥
अलम्भि मर्त्याभिरमुष्य दर्शने
न विघ्नलेशोऽपि निमेषनिर्मितः ॥२९॥

29. ಅನ್ವಯ : **अजस्रभावनाबलात्** = ನಿರಂತರವಾಗಿ ಧ್ಯಾನಿಸಿದ ಪ್ರಭಾವದಿಂದ, **अमुम्** = ಇವನನ್ನು (ನಳನನ್ನು), **नेत्रनिमीलनेषु अपि** = ಕಣ್ಣು ಮುಚ್ಚಿದಾಗಲೂ ಕೂಡ, **विलोकयन्तीभिः** = ನೋಡುತ್ತಾ ಇರುವಂತಹ, **मर्त्याभिः** = ಮಹಿಳೆಯರಿಂದ, **अमुष्य** = ಇವನ, **दर्शने** = ದರ್ಶನದಲ್ಲಿ (ಇವನನ್ನು ನೋಡುವಾಗ), **निमेषनिर्मितः** = ಕಣ್ಣು ಮುಚ್ಚುವುದರಿಂದ ಉಂಟಾಗುವ, **विघ्नलेशः अपि** = ವಿಘ್ನದ ತುಣುಕು ಕೂಡ, **न अलम्भि** = ತೆಗೆದುಕೊಳ್ಳಲ್ಪಡಲಿಲ್ಲ.

ವಿವರಣೆ : ನಳನನ್ನು ನಿರಂತರವಾಗಿ ನೋಡಬೇಕು ಎಂಬ ಆಸೆ ಇದ್ದಾಗ, ಕಣ್ಣನ್ನು ಮುಚ್ಚುವುದು ಕೂಡ ನೋಡುವ ಕ್ರಿಯೆಗೆ ವಿಘ್ನವೇ ಆಗುತ್ತದೆ. ಆದರೆ ಮಹಿಳೆಯರು ನಳನನ್ನು ಕಣ್ಣು ಮುಚ್ಚಿಕೊಂಡೇ ನೋಡುತ್ತಾ ಇದ್ದುದರಿಂದ, ಕಣ್ಣು ಮುಚ್ಚುವುದು ಎಂಬ ವಿಘ್ನವು ಅವರಿಗೆ ಉಂಟಾಗಲಿಲ್ಲ ಎಂಬುದು ತಾತ್ಪರ್ಯ. ಅತಿಶಯೋಕ್ತಿ ಅಲಂಕಾರ.

*** निमीलनेषु + अपि = निमीलनेष्वपि । यणसन्धिः । इको यणचि ।**

न का निशि स्वप्नगतं ददर्श तम्
जगाद गोत्रस्खलिते च का न तम् ॥
तदात्मताध्यातधवा रते च का
चकार वा न स्वमनोभवोद्भवम् ॥३०॥

30. ಅನ್ವಯ : **का** = ಯಾರು (ಯಾವ ಮಹಿಳೆಯು), **निशि** = ರಾತ್ರಿಯಲ್ಲಿ, **स्वप्नगतम्** = ಕನಸಿನಲ್ಲಿ ಬಂದಿರುವ, **तम्** = ಅವನನ್ನು (ನಳನನ್ನು), **न ददर्श** = ನೋಡಲಿಲ್ಲ ? **च** = ಮತ್ತು, **का** = ಯಾರು, **गोत्रस्खलिते** = ಹೆಸರಿನಲ್ಲಿ ಬಾಯಿತಪ್ಪಿ, **तम्** = ಅವನನ್ನು, **न जगाद** = ಹೇಳಲಿಲ್ಲ ? **च** = ಮತ್ತು, **रते** = ಸರಸ-ಸಲ್ಲಾಪಗಳಲ್ಲಿ ತೊಡಗಿರುವಾಗ, **तदात्मताध्यातधवा** = ನಳನ ಸ್ವರೂಪದಲ್ಲಿರುವ ಗಂಡನನ್ನೇ ಧ್ಯಾನಿಸುತ್ತಾ, **का वा** = ಯಾರು ತಾನೆ, **स्वमनोभवोद्भवम्** = ತಮ್ಮ ಕಾಮಚೇಷ್ಟೆಗಳನ್ನು, **न चकार** = ಮಾಡಲಿಲ್ಲ ?

ವಿವರಣೆ : ಪರಪುರುಷನನ್ನು ನೋಡಬಾರದು ಎಂಬ ಧರ್ಮಶಾಸ್ತ್ರ ನಿಯಮವಿರುವುದರಿಂದ, ಮಹಿಳೆಯರು ನೇರವಾಗಿ ನಳನನ್ನು ನೋಡುತ್ತಿರಲಿಲ್ಲ. ಆದರೆ ಕನಸಿನಲ್ಲಿ ನೋಡುತ್ತಿದ್ದರು. ಸದಾ ಕಾಲ ನಳನ ಬಗ್ಗೆಯೇ ಚಿಂತೆ ಮಾಡುತ್ತಾ ಇದ್ದುದರಿಂದ, ನಿಮ್ಮ ಗಂಡನ ಹೆಸರೇನು ? ಎಂದು ಕೇಳಿದಾಗ, ಬಾಯಿ ತಪ್ಪಿ, ಗಂಡನ ಹೆಸರಿನ ಬದಲಿಗೆ ನಳನ ಹೆಸರನ್ನು ಹೇಳುತ್ತಿದ್ದರು. ಆದರೆ ನಳನ ಜೊತೆಗೆ ಸರಸ-ಸಲ್ಲಾಪಗಳಲ್ಲಿ ತೊಡಗಿದಾಗ, ಇವರು ಯಾರು ? ಎಂದು ಕೇಳಿದರೆ, ತಮ್ಮ ಗಂಡನ ಹೆಸರನ್ನೇ ಹೇಳುತ್ತಿದ್ದರು. ಇದರಿಂದ ಪರ ಪುರುಷರೊಂದಿಗೆ ಸರಸ-ಸಲ್ಲಾಪಗಳಲ್ಲಿ ತೊಡಗಿದ್ದಾರೆ ಎಂಬ ಅಪಖ್ಯಾತಿ ದೂರವಾಗುತ್ತಿತ್ತು.

श्रियास्य योग्याहमिति स्वमीक्षितुम्
करे तमालोक्य सुरूपया धृतः ॥
विहाय भैमीमपदर्पया कया

न दर्पणः श्वासमलीमसः कृतः ॥३१॥

31. ಅನ್ವಯ : तम् = ಅವನನ್ನು (ನಳನನ್ನು), आलोक्य = ನೋಡಿ, श्रिया = ಸೌಂದರ್ಯದಿಂದ, अहम् = ನಾನು, अस्य = ಇವನಿಗೆ (ನಳನಿಗೆ), योग्या = ಯೋಗ್ಯವಾದವಳು, इति = ಎಂದು, स्वम् = ತನ್ನನ್ನು, ईक्षितुम् = ನೋಡಲು, करे = ಕೈಯಲ್ಲಿ, धृतः = ಹಿಡಿದಿರುವ, दर्पणः = ಕನ್ನಡಿಯು, भैमीम् = ದಮಯಂತಿಯನ್ನು, विहाय = ಹೊರತುಪಡಿಸಿ, कया = ಯಾವ, अपदर्पया = ನಾನೇ ಸುಂದರಿ ಎಂಬ ದರ್ಪವಿಲ್ಲದಿರುವ, सुरूपया = ಸುಂದರಿಯಿಂದ, श्वासमलीमसः = ಶ್ವಾಸದ ಗಾಳಿಯಿಂದ ಕೊಳೆಯುಳ್ಳದ್ದಾಗಿ, न कृतः = ಮಾಡಲ್ಪಡಲಿಲ್ಲ ?

ವಿವರಣೆ : ಸುಂದರನಾದ ನಳ ಮಹಾರಾಜನನ್ನು ನೋಡಿ, ಇವನ ಸೌಂದರ್ಯಕ್ಕೆ ಅನುರೂಪವಾದ ಸೌಂದರ್ಯವನ್ನು ಹೊಂದಿದವಳು ನಾನೇ ಎಂದು ಭಾವಿಸುತ್ತಾ ಮಹಿಳೆಯರು ಕನ್ನಡಿಯಲ್ಲಿ ತಮ್ಮ ಮುಖಗಳನ್ನು ನೋಡಿಕೊಳ್ಳುತ್ತಿದ್ದರು. ಆಗ ದಮಯಂತಿಯನ್ನು ಹೊರತುಪಡಿಸಿ, ಬೇರೆ ಯಾರೂ ಅಷ್ಟು ಸುಂದರಿಯರಿಲ್ಲ ಎಂಬುದು ಅವರಿಗೆ ತಿಳಿಯುತ್ತಿತ್ತು. ಆಗ ನಾನೇ ಸುಂದರಿ ಎಂಬ ಅವರ ಅಹಂಕಾರವು ದೂರವಾಗುತ್ತಿತ್ತು. ಹಾಗೆಯೇ ದುಃಖವೂ ಉಂಟಾಗುತ್ತಿತ್ತು. ಅಂತಹ ದುಃಖದಿಂದ ಕನ್ನಡಿಯ ಎದುರು ನಿಟ್ಟುಸಿರು ಬಿಟ್ಟಾಗ, ಕನ್ನಡಿಯು ಮಬ್ಬಾಗಿ ಕಾಣುತ್ತಿತ್ತು. ದಮಯಂತಿಯನ್ನು ಬಿಟ್ಟು ಉಳಿದವರೆಲ್ಲರೂ ಹೀಗೆಯೇ ಕನ್ನಡಿಯನ್ನು ಮಬ್ಬಾಗಿ ಮಾಡುತ್ತಿದ್ದರು.

* अपगतः दर्पः यस्याः सा = अपदर्पा । तया । अपदर्पया । प्रादिबहुव्रीहिः ।

अनेकमन्यपदार्थे । प्रादिभ्यो धातुजस्य वाच्यो वा चोत्तरपदलोपः - इति वार्तिकम् ।

यथोह्यमानः खलु भोगभोजिना
प्रसह्य वैरोचनिजस्य पत्तनम् ॥
विदर्भजाया मदनस्तथा मनो
नलावरुद्धं वयसैव वेशितः ॥३२॥

32. ಅನ್ವಯ : भोगभोजिना = ಹಾವುಗಳನ್ನು ತಿನ್ನುವಂತಹ, वयसा एव = ಗರುಡನಿಂದಲೇ, उह्यमानः = ಒಯ್ಯಲ್ಪಡುವಂತಹ (ಹೊತ್ತೊಯ್ಯಲ್ಪಡುವಂತಹ), मदनः = ಪ್ರದ್ಯುಮ್ನನು,

अनलावरुद्धम् = ಬೆಂಕಿಯಿಂದ ಆವರಿಸಲ್ಪಟ್ಟಂತಹ, **वैरोचनिजस्य** = ಬಲಿಯ ಮಗ ಬಾಣಾಸುರನ, **पत्तनम्** = ಶೋಣಿತಪುರ ಎಂಬ ಪಟ್ಟಣವನ್ನು, **प्रसह्य** = ಕೂಡಲೇ (ಬಲಾತ್ಕಾರದಿಂದ), **यथा** = ಹೇಗೆ, **वेशितः** = ಪ್ರವೇಶಿಸಲ್ಪಟ್ಟನೋ, **तथा** = ಹಾಗೆ, **नलावरुद्धम्** = ನಳನಿಂದ ಆಕ್ರಮಿಸಲ್ಪಟ್ಟಂತಹ, **विदर्भजायाः** = ದಮಯಂತಿಯ, **मनः** = ಮನಸ್ಸನ್ನು, **भोगभोजिना** = ಸುಖಭೋಗಗಳನ್ನು ಅನುಭವಿಸುವಂತಹ, **वयसा** = ತಾರುಣ್ಯದಿಂದಲೇ, **उह्यमानः** = ಹೊತ್ತು ಒಯ್ಯಲ್ಪಡುತ್ತಿರುವಂತಹ, **मदनः** = ಕಾಮದೇವನು, **वेशितः** = ಪ್ರವೇಶಿಸಲ್ಪಟ್ಟನು. **खलु** = ಅಲ್ಲವೇ ?

ವಿವರಣೆ : ವಿರೋಚನನ ಮಗ (ವೈರೋಚನ) ಬಲಿ. ಬಲಿಯ ಮಗ (ವೈರೋಚನಿಜ) ಬಾಣಾಸುರ. ಬಾಣಾಸುರನ ಮಗಳ ಮದುವೆಯಲ್ಲಿ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನು ತಡೆಯಲ್ಪಟ್ಟಿದ್ದನು. ಅಂದರೆ ಸುತ್ತಲೂ ಉರಿಯುತ್ತಿರುವ ಬೆಂಕಿಯಲ್ಲಿ ಅನಿರುದ್ಧನು ಸಿಲುಕಿಕೊಂಡಿದ್ದನು. ಆಗ ನಾರದ ಮಹರ್ಷಿಗಳ ಸಲಹೆಯಂತೆ, ಬಲರಾಮ ಮತ್ತು ಪ್ರದ್ಯುಮ್ನರ ಜೊತೆಗೆ ಶ್ರೀಕೃಷ್ಣನು ಗರುಡನ ಮೇಲೆ ಕುಳಿತು, ಬಾಣಾಸುರನ ಪಟ್ಟಣವಾದ ಶೋಣಿತಪುರಕ್ಕೆ ಬಂದಿದ್ದನು. ಹೀಗೆ ಶ್ರೀಕೃಷ್ಣನು ಗರುಡನ ಮೂಲಕ ಶೋಣಿತಪುರಕ್ಕೆ ಪ್ರವೇಶಿಸಲ್ಪಟ್ಟನು. ಇದೇ ರೀತಿಯಲ್ಲಿ ನಳನ ವಿಷಯದಲ್ಲಿ ತಡೆಹಿಡಿಯಲ್ಪಟ್ಟಿರುವ ದಮಯಂತಿಯ ಮನಸ್ಸನ್ನು ಕಾಮದೇವನು ತಾರುಣ್ಯದ ಮೂಲಕ ಬಂದು ಪ್ರವೇಶಿಸಿದನು ಎಂದರ್ಥ. ಶ್ಲೇಷಾಲಂಕಾರ ಮತ್ತು ಅತಿಶಯೋಕ್ತಿ ಅಲಂಕಾರ.

नृपेऽनुरूपे निजरूपसम्पदाम्
दिदेश तस्मिन्बहुशः श्रुतिं गते ॥
विशिष्य सा भीमनरेन्द्रनन्दना
मनोभवाज्ञैकवशंवदं मनः ॥३३॥

33. ಅನ್ವಯ : **सा** = ಆ, **भीमनरेन्द्रनन्दना** = ಭೀಮ ಮಹಾರಾಜನ ಮಗಳಾದ ದಮಯಂತಿಯು, **निजरूपसम्पदाम्** = ತನ್ನ ಲಾವಣ್ಯವೆಂಬ ಸಂಪತ್ತುಗಳಿಗೆ, **अनुरूपे** = ಅನುರೂಪವಾಗಿರುವ, **बहुशः** = ಅನೇಕ ಬಾರಿ (ಬಹಳವಾಗಿ), **श्रुतिम्** = ಕಿವಿಗೆ, **गते** = ಬಂದು ತಲುಪಿರುವ, **तस्मिन्** = ಆ, **नृपे** = ನಳ ಮಹಾರಾಜನಲ್ಲಿ, **विशिष्य** = ವಿಶೇಷವಾಗಿ (ಬೇರೆ ಮಹಾರಾಜರಲ್ಲಿ ಆಕರ್ಷಣೆಗೆ ಒಳಗಾಗದೆ), **मनोभवाज्ञैकवशंवदम्** = ಮನಸ್ಸಿನಲ್ಲಿ

ಉಂಟಾಗಿರುವ ಒತ್ತಡಕ್ಕೆ ಅನುಗುಣವಾದ (ಮನ್ಮಥನ ಆಜ್ಞೆಗೆ ವಿನಮ್ರವಾದ), **मनः =** ಮನಸ್ಸನ್ನು, **दिदेश =** ಇಟ್ಟಳು (ಕೊಟ್ಟಳು).

ವಿವರಣೆ : - ನಳ ಮಹಾರಾಜನ ಕೀರ್ತಿ-ಸೌಂದರ್ಯ-ಯಶಸ್ಸುಗಳು ಅನೇಕ ಬಾರಿ ದಮಯಂತಿಯ ಕಿವಿಗೆ ಬಿದ್ದಿದ್ದವು. ಈ ಕಾರಣದಿಂದ ಬೇರೆ ಮಹಾರಾಜರ ಕೀರ್ತಿಯನ್ನು ಕೇಳಿ ದಮಯಂತಿಯು ಆಕರ್ಷಣೆಗೆ ಒಳಗಾಗಲಿಲ್ಲ. ತನ್ನ ಲಾವಣ್ಯಕ್ಕೆ ಯೋಗ್ಯವಾದವನು ನಳನೇ ಆಗಿದ್ದಾನೆಂಬ ಆಜ್ಞೆಯನ್ನು ಕಾಮದೇವನೂ ಮಾಡಿದ್ದನು. ಈ ಕಾರಣದಿಂದ ಕಾಮದೇವನ ಆಜ್ಞೆಗೆ ಅನುಸಾರವಾಗಿ, ವಿನಮ್ರವಾದ ತನ್ನ ಮನಸ್ಸನ್ನು ನಳ ಮಹಾರಾಜನಿಗೆ ಕೊಟ್ಟಳು.

उपासनामेत्य पितुः स्म रज्यते
दिने दिने सावसरेषु बन्दिनाम् ॥
पठत्सु तेषु प्रतिभूपतीनलम्
विनिद्ररोमाजनि शृण्वती नलम् ॥३४॥

34. ಅನ್ವಯ : **सा =** ಅವಳು (ದಮಯಂತಿಯು), **दिने दिने =** ಪ್ರತಿದಿನವೂ, **बन्दिनाम् =** ಹೊಗಳುಭಟ್ಟರ, **अवसरेषु =** ಪರಿಸರದಲ್ಲಿ, **पितुः =** ತಂದೆಯ, **उपासनाम् =** ಸೇವೆಯನ್ನು, **एत्य =** ಪಡೆದವಳಾಗಿ, **तेषु =** ಅವರು (ಹೊಗಳುಭಟ್ಟರು), **भूपतीन् =** ಮಹಾರಾಜರನ್ನು, **प्रति =** ಕುರಿತು, **पठत्सु =** ಹಾಡಿ ಹೊಗಳುತ್ತಿರುವಾಗ, **नलम् =** ನಳನನ್ನೇ, **शृण्वती =** ಕೇಳಿಸಿಕೊಳ್ಳುತ್ತಿರುವವಳಾಗಿ, **अलम् =** ಬಹಳವಾಗಿ, **रज्यते स्म =** ಅನುರಾಗವನ್ನು ಹೊಂದಲ್ಪಡುತ್ತಿದ್ದಳು (ಹೊಂದುತ್ತಿದ್ದಳು). **विनिद्ररोमा =** ರೋಮಾಂಚನಗೊಂಡವಳು, **अजनि =** ಉಂಟಾದಳು (ಆದಳು).

ವಿವರಣೆ : ದಮಯಂತಿಯು ತನ್ನ ತಂದೆಯ ಸೇವೆಯನ್ನು ಮಾಡುತ್ತಿರುವಾಗ, ತಂದೆಯ ಆಜ್ಞೆಯಂತೆ ಹೊಗಳುಭಟ್ಟರು ಬೇರೆ ಬೇರೆ ರಾಜಕುಮಾರರ ಯಶಸ್ಸು-ಕೀರ್ತಿಗಳನ್ನು ಹಾಡಿ ಹೊಗಳುತ್ತಿದ್ದರು. ಅವರು ಬೇರೆ ಬೇರೆ ರಾಜಕುಮಾರರನ್ನು ಹೊಗಳಿದರೂ ದಮಯಂತಿಯು ನಳನನ್ನೇ ಕೇಳಿಸಿಕೊಳ್ಳುತ್ತಾ ಇರುವವಳಾಗಿ, ನಳನಲ್ಲಿಯೇ ಅನುರಾಗವನ್ನು ಹೊಂದುತ್ತಿದ್ದಳು. ಇಲ್ಲಿ ತಂದೆಯ ಸೇವೆಯನ್ನು ದಮಯಂತಿಯು ಮಾಡುತ್ತಿರುವಾಗ - ಎಂಬುದು ಒಂದು ಅರ್ಥ. ತನ್ನ ಮಗಳ ಲಾವಣ್ಯಕ್ಕೆ ಸ್ವಲ್ಪವೂ ಕೊರತೆಯಾಗಬಾರದೆಂದು, ಹೊಗಳುಭಟ್ಟರನ್ನು ಮತ್ತು ಸೇವಕರನ್ನು ದಮಯಂತಿಯ ಸೇವೆಗೆ ನೇಮಿಸುವುದರ ಮೂಲಕ, ತಂದೆಯೇ ದಮಯಂತಿಯ

ಸೇವೆಯನ್ನು ಮಾಡುತ್ತಿದ್ದನು ಎಂಬುದು ಇನ್ನೊಂದು ಅರ್ಥ. ಆದ್ದರಿಂದ - ತಂದೆಯ ಸೇವೆಯನ್ನು ಪಡೆದವಳಾಗಿ - ಎಂಬ ಅರ್ಥವನ್ನು ಮೇಲೆ ಬರೆಯಲಾಗಿದೆ.

ರಾಜ-ಮಹಾರಾಜರನ್ನು ಅಥವಾ ರಾಜಕುಮಾರರನ್ನು ಹಾಡಿ ಹೊಗಳುವಾಗ, ಮೊದಲು ಅವರ ಹೆಸರನ್ನು ಹೇಳುವ ಕ್ರಮವಿಲ್ಲ. ಮೊದಲು ಎಲ್ಲ ವಿಶೇಷಣಗಳನ್ನು ವರ್ಣಿಸಿ, ಕೊನೆಗೆ ವಿಶೇಷ್ಯವನ್ನು ಹೇಳುವುದು ಸರಿಯಾದ ಕ್ರಮ. ಆದ್ದರಿಂದ ಹೊಗಳುಭಟ್ಟರು ಪ್ರತಿಯೊಬ್ಬ ರಾಜಕುಮಾರನ ಕೀರ್ತಿಯನ್ನು ಹೊಗಳಲು ಪ್ರಾರಂಭಿಸಿದಾಗ, ಪ್ರತಿಬಾರಿಯೂ - ಇವನು ನಳಮಹಾರಾಜನೇ ಇರಬೇಕು ಎಂದು ದಮಯಂತಿಯು ಭಾವಿಸುತ್ತಿದ್ದಳು. ಹೀಗೆ ಪ್ರತಿ ರಾಜಕುಮಾರನ ಕೀರ್ತಿಯನ್ನು ಕೇಳುವಾಗಲೂ ದಮಯಂತಿಯ ಮನಸ್ಸಿನಲ್ಲಿ ನಳ ಮಹಾರಾಜನೇ ನೆನಪಾಗುತ್ತಿದ್ದನು.

कथाप्रसङ्गेषु मिथः सखीमुखात्
तृणेऽपि तन्व्या नलनामनि श्रुते ॥
द्रुतं विधूयान्यदभूयतानया
मुदा तदाकर्णनसज्जकर्णया ॥३५॥

35. ಅನ್ವಯ : **मिथः** = ಪರಸ್ಪರವಾಗಿ (ಅನ್ಯೋನ್ಯವಾಗಿ), **कथाप्रसङ्गेषु** = ಮಾತನಾಡುತ್ತಿರುವಾಗ, **सखीमुखात्** = ಗೆಳತಿಯ ಬಾಯಿಯಿಂದ, **नलनामनि** = ನಳನ ಹೆಸರಿರುವ, **तृणे** = ಹುಲ್ಲು, **श्रुते अपि** = ಕೇಳಲ್ಪಟ್ಟರೂ ಕೂಡ, **अनया** = ಈ, **तन्व्या** = ಸುಂದರಿಯಿಂದ (ದಮಯಂತಿಯಿಂದ), **द्रुतम्** = ಬೇಗನೆ, **अन्यत्** = ಬೇರೆಯದ್ದನ್ನು, **विधूय** = ಬಿಟ್ಟು (ಕೊಡವಿಹಾಕಿ), **मुदा** = ಸಂತೋಷದಿಂದ, **तदाकर्णनसज्जकर्णया** = ಅವನ (ನಳನ) ಬಗ್ಗೆ ಕೇಳಿಸಿಕೊಳ್ಳಲು ಸಿದ್ಧವಾಗಿರುವ ಕಿವಿಯುಳ್ಳವಳಾಗಿ, **अभूयत** = ಆಗಿರುತ್ತಿದ್ದಳು.

ವಿವರಣೆ : ಅಭೂಯತ - ಇದು ಭಾವೇಪ್ರಯೋಗ. ಕಿವಿಯುಳ್ಳವಳಿಂದ ಇರೋಣವಾಗುತ್ತಿತ್ತು ಎಂಬ ಕನ್ನಡದ ಭಾವೇಪ್ರಯೋಗವೇ ಸರಿಯಾದ ಅನುವಾದ. ಈಗ ಕನ್ನಡದ ಭಾವೇಪ್ರಯೋಗವನ್ನು ಬಳಸುವವರು ಮತ್ತು ತಿಳಿಯುವವರ ಸಂಖ್ಯೆ ಬಹಳ ಕಡಿಮೆಯಾಗಿರುವುದರಿಂದ - ಕಿವಿಯುಳ್ಳವಳಾಗಿ ಆಗಿರುತ್ತಿದ್ದಳು ಎಂಬ ಕರ್ತರಿಪ್ರಯೋಗದ ಅರ್ಥವನ್ನು ಬರೆಯಲಾಗಿದೆ. ನಳ ಎಂಬ ಹುಲ್ಲಿನ ಹೆಸರನ್ನು ಹೇಳಿದರೂ ದಮಯಂತಿಗೆ ನಳ ಮಹಾರಾಜನ ನೆನಪಾಗುತ್ತಿತ್ತು.

स्मरात्परासोरनिमेषलोचनाद्
बिभेमि तद्भिन्नमुदाहरेति सा ॥
जनेन यूनः स्तुवता तदास्पदे
निदर्शनं नैषधमभ्यषेचयत् ॥३६॥

36. ಅನ್ವಯ : **परासोः** = ಪ್ರಾಣಗಳನ್ನು ಬಿಟ್ಟಿರುವ, **अनिमेषलोचनाद्** = (ಆದ್ದರಿಂದಲೇ) ಮುಚ್ಚದೇ ಇರುವ ಕಣ್ಣಿರುವಂತಹ, **स्मरात्** = ಮನ್ಮಥನಿಂದ, **बिभेमि** = ಹೆದರಿಕೊಳ್ಳುತ್ತಿದ್ದೇನೆ, **तद्भिन्नम्** = ಅವನಿಗಿಂತ ಬೇರೆಯಾದವನನ್ನು, **उदाहर** = ಹೇಳು, **इति** = ಎಂಬುದಾಗಿ, **सा** = ಅವಳು (ದಮಯಂತಿ), **यूनः** = ಯುವಕರನ್ನು, **स्तुवता** = ಹೊಗಳುತ್ತಿರುವ, **जनेन** = ಜನರ ಮೂಲಕ (ಗೆಳತಿಯರ ಮೂಲಕ), **नैषधम्** = ನಳನನ್ನು, **तदास्पदे** = ಪ್ರಿಯತಮನ ಸ್ಥಾನದಲ್ಲಿ, **निदर्शनम्** = ಉದಾಹರಣೆಯಾಗಿ, **अभ्यषेचयत्** = ಪಟ್ಟಾಭಿಷೇಕವನ್ನು ಮಾಡಿಸಿದಳು.

ವಿವರಣೆ : ಮನ್ಮಥನೇ ಬಹಳ ಸುಂದರ, ಅವನಷ್ಟು ಸುಂದರರಾಗಿರುವವರು ಯಾರೂ ಇಲ್ಲವೆಂದು ಗೆಳತಿಯರು ಹೇಳುತ್ತಿದ್ದರು. ಆಗ ದಮಯಂತಿಯು, ಹೇಗೆ ಸತ್ತವರು ಕಣ್ಣು ಬಿಟ್ಟುಕೊಂಡೇ ಇರುವರೋ ಹಾಗೆ ಮನ್ಮಥನು ಇದ್ದಾನೆ. ಅವನನ್ನು ಬಿಟ್ಟು ಬೇರೆ ಸುಂದರನಾದ ವ್ಯಕ್ತಿಯನ್ನು ತಿಳಿಸಿರಿ ಎಂದು ಹೇಳುತ್ತಾ ತನ್ನ ಮನಸ್ಸಿನ ಸಾಮ್ರಾಜ್ಯಕ್ಕೆ ನಳನನ್ನೇ ರಾಜನನ್ನಾಗಿ ಪಟ್ಟಾಭಿಷೇಕವನ್ನು ಮಾಡಿಸುತ್ತಿದ್ದಳು. ಅಂದರೆ - ಅವನು ಬೇಡ, ಇನ್ನೊಬ್ಬನನ್ನು ಹೇಳು ಎಂದು ದಮಯಂತಿಯು ಪದೇ ಪದೇ ಹೇಳಿದಾಗ, ಬೇರೆ ದಾರಿ ಕಾಣದೆ ಗೆಳತಿಯರು ನಳನ ಹೆಸರನ್ನು ಹೇಳುತ್ತಿದ್ದರು. ಹೀಗೆ ದಮಯಂತಿಯು ಗೆಳತಿಯರ ಮೂಲಕ ನಳನ ಹೆಸರನ್ನು ಹೇಳಿಸುತ್ತಿದ್ದಳು. ಅಭ್ಯಷೇಚಯತ್ - ಅಭಿ - ಉಪಸರ್ಗ + ಷಿಚ -ಕ್ಷರಣೇ, ಣಿಜಂತ, ಲಙ್ - ಲಕಾರ.

नलस्य पृष्टा निषधागता गुणान्
मिषेण दूतद्विजबन्दिचारणाः ॥
निपीय तत्कीर्तिकथामथानया
चिराय तस्थे विमनायमानया ॥३७॥

37. ಅನ್ವಯ : **निषधागताः** = ನಿಷಧ ದೇಶದಿಂದ ಬಂದಿರುವಂತಹ, **दूतद्विजबन्दिचारणाः** = ಸಂದೇಶವನ್ನು ರವಾನೆ ಮಾಡುವ ದೂತರು, ಬ್ರಾಹ್ಮಣರು, ಹೊಗಳುಭಟ್ಟರು ಮತ್ತು ದೇಶವನ್ನು

ಸುತ್ತಾ್ಡುತ್ತಾ ಜೀವಿಸುವವರು, **मिषेण** = ಯಾವುದೋ ನೆಪದಿಂದ, **नलस्य** = ನಳನ, **गुणान्** = ಗುಣಗಳನ್ನು, **पृष्टाः** = ಕೇಳಲ್ಪಟ್ಟರು. **अथ** = ಆಮೇಲೆ, **अनया** = ಇವಳಿಂದ (ದಮಯಂತಿಯಿಂದ), **तत्कीर्तिकथाम्** = ಅವನ (ನಳನ) ಕೀರ್ತಿಯ ಕಥಾಮೃತವನ್ನು, **निपीय** = ಆದರದಿಂದ ಕೇಳಿಸಿಕೊಂಡು (ಕುಡಿದು), **चिराय** = ಬಹಳ ಸಮಯದವರೆಗೆ, **विमनायमानया** = ಉದ್ವೇಗಗೊಂಡವಳಾಗಿ, **तस्थे** = ಇದ್ದಳು.

ವಿವರಣೆ : ತಸ್ಥೇ ಎಂಬುದು ಭಾವೇಪ್ರಯೋಗ. ಆದ್ದರಿಂದ - ಉದ್ವೇಗಗೊಂಡವಳಿಂದ ಇರೋಣವಾಯಿತು ಎಂಬ ಕನ್ನಡದ ಭಾವೇಪ್ರಯೋಗ ಸರಿಯಾದ ಅನುವಾದ. ವಿದರ್ಭ ದೇಶವೆಂದರೆ ದಮಯಂತಿಯ ದೇಶ. ಅಲ್ಲಿಂದ ಬಂದವರನ್ನು ಯಾವುದೋ ನೆಪವೊಡ್ಡಿ, ನಳನ ಬಗ್ಗೆ ಕೇಳಿದಾಗ, ನಳನ ಚರಿತ್ರೆಯನ್ನು ಅವರು ಹಾಡಿ ಹೊಗಳುತ್ತಿದ್ದರು. ಇದರಿಂದ ಮತ್ತೆ ನಳನ ಬಗ್ಗೆಯೇ ಚಿಂತೆಯನ್ನು ಮಾಡುತ್ತಾ ಸಂತೋಷಪಡುತ್ತಿದ್ದಳು ಅಥವಾ ಉದ್ವೇಗಗೊಳ್ಳುತ್ತಿದ್ದಳು. ವಿಶಿಷ್ಟಂ ಮನಃ ಯಸ್ಯಾಃ ಸಾ = ವಿಮನಾಃ ಎಂದಿಟ್ಟುಕೊಂಡರೆ ಸಂತೋಷಗೊಂಡವಳು ಎಂದರ್ಥ. ವಿಗತಂ ಮನಃ ಯಸ್ಯಾಃ ಸಾ = ವಿಮನಾಃ ಎಂದಿಟ್ಟುಕೊಂಡರೆ, ಮನಸ್ಸಿಲ್ಲದವಳು / ಉದ್ವೇಗಗೊಂಡವಳು ಎಂಬ ಅರ್ಥ ಸಿಗುತ್ತದೆ. ವಿಮನಾಃ ಇವ ಆಚರತಿ = ವಿಮನಾಯತೇ, ನಾಮಧಾತುವಿನ ರೂಪ. ಇದಕ್ಕೆ ಶಾನಚ್-ಪ್ರತ್ಯಯ = ವಿಮನಾಯಮಾನಾ. ತಸ್ಥೇ - ಎಂಬುದು ತಿಷ್ಠತಿ ಎಂಬುದರ ಭಾವೇಪ್ರಯೋಗ. ಷ್ಠಾ- ಗತಿನಿವೃತ್ತೌ.

*** पृष् + ता = पृष्टा । ष्टुत्वसन्धिः । ष्टुना ष्टुः-८-४-४१.**

*** निषधात् आगताः = निषधागताः । पञ्चमीतत्पुरुषः समासः ।**

प्रियं प्रिया च त्रिजगज्जयिश्रियौ
लिखाधिलीलागृहभित्ति कावपि ॥
इति स्म सा कारुवरेण लेखितम्
नलस्य च स्वस्य च सख्यमीक्षते ॥३८॥

38. ಅನ್ವಯ : **सा** = ಅವಳು (ದಮಯಂತಿ), **त्रिजगज्जयिश्रियौ** = ಮೂರು ಲೋಕಗಳನ್ನು ಗೆಲ್ಲುವಂತಹ ಶೋಭೆಯುಳ್ಳ, **प्रियम्** = ಪ್ರಿಯ, **च** = ಮತ್ತು, **प्रियाम्** = ಪ್ರಿಯೆ ಆಗಿರುವ, **कौ अपि** = ಯಾರನ್ನಾದರೂ (ಇಬ್ಬರನ್ನು), **अधिलीलागृहभित्ति** = ಚಿತ್ರಶಾಲೆಯ ಗೋಡೆಯಲ್ಲಿ, **लिख** = ಬರೆ, **इति** = ಎಂದಾಗ, **कारुवरेण** = ಚಿತ್ರಕಾರನಿಂದ (ಅಥವಾ ಕೆತ್ತನೆ ಮಾಡುವ

ಶಿಲ್ಪಿಯಿಂದ), **लेखितम्** = ಬರೆಯಲ್ಪಟ್ಟಿರುವ, **नलस्य** = ನಳನ, **च** = ಮತ್ತು, **स्वस्य** = ತನ್ನ (ದಮಯಂತಿಯ), (**च** = ಮತ್ತು), **सख्यम्** = ಅನುರೂಪತೆಯನ್ನು (ಸಾಮ್ಯವನ್ನು), **ईक्षते स्म** = ನೋಡುತ್ತಿದ್ದಳು.

ವಿವರಣೆ : ರಾಜನ ಅರಮನೆಗಳಲ್ಲಿ ಚಿತ್ರಶಾಲೆಗಳು ಇರುತ್ತಿದ್ದವು. ಅಲ್ಲಿ ಚಿತ್ರಗಾರರು ಬೇರೆ ಬೇರೆ ಚಿತ್ರಗಳನ್ನು ಬರೆಯುತ್ತಿದ್ದರು ಮತ್ತು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಒಮ್ಮೆ ದಮಯಂತಿಯು ಅಲ್ಲಿಗೆ ಬಂದು, ಮೂರು ಲೋಕಗಳನ್ನು ಗೆಲ್ಲುವ ಕೀರ್ತಿಯುಳ್ಳ ಒಂದು ಜೋಡಿಯ ಚಿತ್ರವನ್ನು ಬರೆಯಲು ಚಿತ್ರಕಾರನಿಗೆ ಹೇಳುತ್ತಾಳೆ. ಅವನು ಬರೆದ ಚಿತ್ರದಲ್ಲಿ ದಮಯಂತಿಗೆ - ತನ್ನ ಮತ್ತು ನಳನ ರೂಪಗಳೇ ಕಾಣಿಸುತ್ತವೆ.

*** लीलागृहभित्तौ इति = अधिलीलागृहभित्ति । अव्ययीभावः समासः । विभक्त्यर्थे अव्ययीभावः । अव्ययं विभक्तिसमीपेति सूत्रम् ।**

मनोरथेन स्वपतीकृतं नलम्
निशि क्व सा न स्वपती स्म पश्यति ॥
अदृष्टमप्यर्थमदृष्टवैभवात्
करोति सुप्तिर्जनदर्शनातिथिम् ॥३९॥

39. ಅನ್ವಯ : **मनोरथेन** = ಮನಸ್ಸಿನ ಸಂಕಲ್ಪದ ಮೂಲಕ (ಆಸೆಯ ಮೂಲಕ), **स्वपतीकृतम्** = ತನ್ನ ಗಂಡನನ್ನಾಗಿ ಮಾಡಿಕೊಂಡಿರುವ, **नलम्** = ನಳನನ್ನು, **स्वपती** = ಮಲಗಿರುವಂತಹ, **सा** = ಅವಳು (ದಮಯಂತಿ), **क्व निशि** = ಯಾವ ರಾತ್ರಿಯಲ್ಲಿ, **न पश्यति स्म** = ನೋಡುತ್ತಿರಲಿಲ್ಲ ? **सुप्तिः** = ನಿದ್ದೆಯು, **अदृष्टम् अपि** = ಕಾಣದೇ ಇರುವ, **अर्थम्** = ವಸ್ತುವನ್ನು, **अदृष्टवैभवात्** = ಅದೃಷ್ಟವೆಂಬ ಸೌಭಾಗ್ಯದಿಂದ, **जनदर्शनातिथिम्** = ಜನರ ಕಣ್ಣಿಗೆ ಆದರದಿಂದ ಕಾಣುವಂತಹುದನ್ನಾಗಿ, **करोति** = ಮಾಡುತ್ತದೆ.

*** दृष् + तम् = दृष्टम् । ष्टुत्वसन्धिः । ष्टुना ष्टुः-८-४-४१.**

निमीलितादक्षियुगाच्च निद्रया
हृदोऽपि बाह्येन्द्रियमौनमुद्रितात् ॥
अदर्शि सङ्गोप्य कदाप्यवीक्षितो
रहस्यमस्याः स महन्महीपतिः ॥४०॥

40. ಅನ್ವಯ : **निद्रया** = ನಿದ್ದೆಯಿಂದ, **निमीलितात्** = ಮುಚ್ಚಿರುವ, **अक्षियुगात्** = ಎರಡು ಕಣ್ಣುಗಳಿಂದ, **च** = ಮತ್ತು, **बाह्येन्द्रियमौनमुद्रितात्** = ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ನಾಲ್ಕು ಬಾಹ್ಯೇಂದ್ರಿಯಗಳ ಮೌನವೆಂಬ ಅಶಕ್ತತೆಯಿಂದ, **हृदः अपि** = ಮನಸ್ಸನ್ನು ಕೂಡ, **सङ्गोप्य** = ಮುಚ್ಚಿಟ್ಟು, **कदापि** = ಯಾವಾಗಲೂ, **अवीक्षितः** = ನೋಡಲ್ಪಡದೇ ಇರುವ, **सः** = ಆ, **महीपतिः** = ನಳ ಮಹಾರಾಜನು, **अस्याः** = ಇವಳಿಗೆ (ದಮಯಂತಿಗೆ), **महत् रहस्यम्** = ದೊಡ್ಡ ರಹಸ್ಯವಾಗಿ, **अदर्शि** = ತೋರಿಸಲ್ಪಟ್ಟನು.

ವಿವರಣೆ : ನಿದ್ದೆ ಮಾಡುವಾಗ ಕಣ್ಣು ಮುಚ್ಚಿರುತ್ತದೆ. ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಈ ನಾಲ್ಕು ಇಂದ್ರಿಯಗಳೂ ಕೂಡ ಯಾವ ಕೆಲಸವನ್ನೂ ಮಾಡದೆ ಮೌನಕ್ಕೆ ಜಾರುತ್ತವೆ. ಇಂದ್ರಿಯಗಳೇ ಕೆಲಸ ಮಾಡದೇ ಇದ್ದಾಗ, ಅವುಗಳ ಜೊತೆಗೆ ವ್ಯವಹಾರವನ್ನು ಮಾಡುವ ಮನಸ್ಸು ಕೂಡ ಮೌನವಾಗಿಯೇ ಇರುತ್ತದೆ. ಈ ಕಾರಣದಿಂದ ನಿದ್ದೆಯಲ್ಲಿ ಯಾವುದನ್ನೂ ಕಾಣಲು ಸಾಧ್ಯವಿಲ್ಲ. ಹೀಗಿದ್ದರೂ ಎಲ್ಲ ರಹಸ್ಯಗಳ ಸಹಿತವಾಗಿ ನಳನು ಇವಳಿಗೆ ನಿದ್ದೆಯಲ್ಲೇ ಕಾಣಿಸಿದನು.

*** हृदः + अपि = हृदो अपि । उत्वसन्धिः । अतो रोरप्लुतादप्लुते-६-१-११३.**

*** हृदो + अपि = हृदोऽपि । पूर्वरूपसन्धिः । एङः पदान्तादति-६-१-१०९.**

अहो अहोभिर्महिमा हिमागमेऽ-
प्यभिप्रपेदे प्रति तां स्मरार्दिताम् ॥
तपर्तुपूर्तावपि मेदसां भरा
विभावरीभिर्बिभराम्बभूविरे ॥४१॥

41. ಅನ್ವಯ : **अहो** = ಆಹಾ !, **हिमागमे अपि** = ಹೇಮಂತ ಋತುವಿನಲ್ಲಿಯೂ ಕೂಡ, **स्मरार्दिताम्** = ಕಾಮಪೀಡಿತೆಯಾಗಿರುವ, **ताम्** = ಅವಳನ್ನು (ದಮಯಂತಿಯನ್ನು), **प्रति** = ಕುರಿತು, **अहोभिः** = ಹಗಲುಗಳಿಂದ, **महिमा** = ದೊಡ್ಡತನವು (ಬೆಳವಣಿಗೆಯು), **अभिप्रपेदे** = ಉಂಟಾಯಿತು. **तपर्तुपूर्तौ अपि** = ಗ್ರೀಷ್ಮ ಋತುವಿನಲ್ಲಿಯೂ ಕೂಡ, **विभावरीभिः** = ರಾತ್ರಿಗಳಿಂದ, **मेदसाम् भराः** = ಕೊಬ್ಬಿನ ಹೆಚ್ಚಳವು (ದಪ್ಪವಾಗುವಿಕೆಗಳು), **बिभराम्बभूविरे** = ಧರಿಸಲ್ಪಟ್ಟವು.

ವಿವರಣೆ : ಹೇಮಂತ ಋತುವಿನಲ್ಲಿ ಹಗಲು ಚಿಕ್ಕದಾಗಿರುತ್ತದೆ. ರಾತ್ರಿ ದೊಡ್ಡದಾಗಿರುತ್ತದೆ. ಆದರೆ ನಿರಂತರವಾಗಿ ನಳನನ್ನೇ ಚಿಂತೆ ಮಾಡುತ್ತಾ ಇದ್ದಂತಹ ದಮಯಂತಿಗೆ ಹಗಲನ್ನು ಕಳೆಯುವುದೇ ತುಂಬ ಕಷ್ಟವಾಗುತ್ತಿತ್ತು. ರಾತ್ರಿಗೋಸ್ಕರ ಬಹಳ ಸಮಯ ಕಾಯಬೇಕು ಎಂದು ಅನಿಸುತ್ತಿತ್ತು. ಆದ್ದರಿಂದ ಹಗಲುಗಳು ದೊಡ್ಡವಾದವು ಎಂದು ವರ್ಣಿಸಲಾಗಿದೆ. ಗ್ರೀಷ್ಮ ಋತುವಿನಲ್ಲಿ ಹಗಲು ದೊಡ್ಡದಾಗಿರುತ್ತದೆ. ರಾತ್ರಿಯು ಚಿಕ್ಕದಾಗಿರುತ್ತದೆ. ಪ್ರೇಮಿಗಳಿಗೆ ಗ್ರೀಷ್ಮಕಾಲದ ಹಗಲು ತುಂಬ ಇಷ್ಟವಾದದ್ದು. ಅದನ್ನು ಪಡೆಯುವುದಕ್ಕೋಸ್ಕರ ನಿರಂತರವಾಗಿ ಪ್ರೇಮಿಗಳು ಹಾತೊರೆಯುತ್ತಾರೆ. ಆದ್ದರಿಂದ ರಾತ್ರಿಗಳು ಚಿಕ್ಕದಾಗಿದ್ದರೂ, ತುಂಬ ದೊಡ್ಡದಾಗಿವೆ ಎಂದು ಅನಿಸುತ್ತದೆ. ಯಾಕೆಂದರೆ ಹಗಲು ಯಾವಾಗ ಆಗುತ್ತದೆ ಎಂಬುದನ್ನೇ ಕಾಯುತ್ತಾ ಇರಬೇಕಾಗುತ್ತದೆ. ಆದ್ದರಿಂದ ನಳನ ಚಿಂತೆಯಲ್ಲಿಯೇ ಮುಳುಗಿರುವ ದಮಯಂತಿಗೂ ಚಳಿಗಾಲದ ಹಗಲುಗಳು ದೊಡ್ಡದಾಗಿಯೂ, ಬೇಸಿಗೆಗಾಲದ ರಾತ್ರಿಗಳು ದೊಡ್ಡದಾಗಿಯೂ ಅನಿಸುತ್ತಿದ್ದವು.

*** बिभराम्बभूविरे - डुभृञ्- धारणे । कर्मणि प्रयोगः । लिट्-लकारः ।**

*** अहो + अहोभिः = अहो अहोभिः । ओत् । प्रकृतिभावः । प्लुतप्रगृह्या अचि नित्यम् ।**

स्वकान्तिकीर्तिव्रजमौक्तिकस्रजः
श्रयन्तमन्तर्घटनागुणश्रियम् ॥
कदाचिदस्या युवधैर्यलोपिनम्
नलोऽपि लोकादशृणोद्गुणोत्करम् ॥४२॥

42. ಅನ್ವಯ : **नलः अपि** = ನಳನೂ ಕೂಡ, **कदाचित्** = ಒಮ್ಮೆ (ಯಾವಾಗಲಾದರೂ), **स्वकान्तिकीर्तिव्रजमौक्तिकस्रजः** = ತನ್ನ ಸೌಂದರ್ಯ ಮತ್ತು ಕೀರ್ತಿಗಳ ಗೊಂಚಲುಗಳೆಂಬ ಮುತ್ತಿನ ಹಾರದ (ಹಾರದಲ್ಲಿ), **अन्तर्घटनागुणश्रियम्** = ಒಳಗೆ ಪೋಣಿಸಲು ಬಳಸುವ ದಾರದ ಶೋಭೆಯನ್ನು, **श्रयन्तम्** = ಧರಿಸಿರುವಂತಹ, **युवधैर्यलोपिनम्** = (ನಾನೇ ಸುಂದರ ಎಂಬ) ತರುಣರ ಧೈರ್ಯವನ್ನೂ ನಾಚಿ ನೀರಾಗಿಸುವ, **अस्याः** = ಇವಳ (ದಮಯಂತಿಯ), **गुणोत्करम्** = ಸೌಂದರ್ಯಾದಿ ಗುಣರಾಶಿಯನ್ನು, **लोकात्** = (ತನ್ನ ರಾಜ್ಯಕ್ಕೆ ಅಥವಾ ಅರಮನೆಗೆ ಬಂದ) ಜನರಿಂದ, **अशृणोत्** = ಆಲಿಸಿದನು.

ವಿವರಣೆ : ಹೂವಿನ ಹಾರವನ್ನು ಕಟ್ಟಲು ಯಾವುದಾದರೂ ದಾರವಿದ್ದರೆ ಸಾಕು. ಆದರೆ ಅತ್ಯಮೂಲ್ಯವಾದ ಮುತ್ತಿನ ಮಣಿಗಳನ್ನು ಪೋಣಿಸಲು ಚಿನ್ನದ ದಾರವೇ ಬೇಕು. ತನ್ನ (ನಳನ) ಮುತ್ತಿನಂತಹ ಸದ್ಗುಣಗಳನ್ನು ಪೋಣಿಸಲು, ದಮಯಂತಿಯೆಂಬ ಅತ್ಯಮೂಲ್ಯವಾದ ದಾರವೇ ಬೇಕು ಎಂಬುದಾಗಿ ನಿಷಧ ಸಾಮ್ರಾಜ್ಯಕ್ಕೆ ಬಂದ ಜನರು ಮಾತನಾಡಿಕೊಳ್ಳುತ್ತಿದ್ದರು. ಇದನ್ನು ನಳ ಮಹಾರಾಜನು ಕೇಳಿಸಿಕೊಂಡನು. ಹೀಗೆ ತನ್ನ ಸೌಂದರ್ಯಕ್ಕೆ ಅನುರೂಪವಾದವಳು ದಮಯಂತಿ ಎಂಬ ವಾರ್ತೆಯು ಜನರ ಮೂಲಕ ನಳನಿಗೂ ತಲುಪಿತ್ತು.

*** युवधैर्यं लोपयति इति युवधैर्यलोपी । तम् । युवधैर्यलोपिनम् । सुप्यजातौ णिनिस्ताच्छील्ये । णिनि-प्रत्ययः । उपपदसमासः । उपपदमतिङ् ।**

तमेव लब्ध्वावसरं ततः स्मरः
शरीरशोभाजयजातमत्सरः ॥
अमोघशक्त्या निजयेव मूर्तया
तया विनिर्जेतुमियेष नैषधम् ॥४३॥

43. ಅನ್ವಯ : ततः = ಅನಂತರ (ದಮಯಂತಿಯ ಸೌಂದರ್ಯಾದಿ ಗುಣಗಳನ್ನು ಕೇಳಿಸಿಕೊಂಡ ಮೇಲೆ), **शरीरशोभाजयजातमत्सरः** = ತನ್ನ (ನಳನ) ಶರೀರದ ಸೌಂದರ್ಯವೆಂಬ ವಿಜಯದಿಂದ ಮತ್ಸರವನ್ನು (ಹೊಟ್ಟೆಕಿಚ್ಚನ್ನು) ಹೊಂದಿದವನಾಗಿ, **स्मरः** = ಕಾಮದೇವನು, **तम्** = ಆ, **अवसरम् एव** = ಅವಕಾಶವನ್ನೇ, **लब्ध्वा** = ಪಡೆದು, **निजया** = ತನ್ನ (ಸ್ವಂತದ), **मूर्तया इव** = ಇಂದ್ರಿಯಗೋಚರವೋ ಎಂಬಂತಿರುವ (ಭೌತಿಕವಾದ), **अमोघशक्त्या** = ವ್ಯರ್ಥವಲ್ಲದ ಅಥವಾ ನಾಶವಿಲ್ಲದ ಸೌಂದರ್ಯವೆಂಬ ಶಕ್ತಿ ಇರುವ, **तया** = ದಮಯಂತಿಯ ಮೂಲಕ, **नैषधम्** = ನಳ ಮಹಾರಾಜನನ್ನು, **विनिर्जेतुम्** = ಗೆಲ್ಲಲು, **इयेष** = ಬಯಸಿದನು.

ವಿವರಣೆ : ಜಗತ್ತಿನಲ್ಲಿ ಎಲ್ಲರೂ ನಳನ ಸೌಂದರ್ಯವನ್ನೇ ಹೊಗಳುತ್ತಾ ಇರುವುದನ್ನು ಕಾಮದೇವನು ಕೇಳಿಸಿಕೊಂಡನು. ಸೌಂದರ್ಯವೇ ಕಾಮದೇವ. ಹೀಗಿರುವಾಗ ಆ ಕಾಮದೇವನನ್ನೂ ಸೋಲಿಸುವ ನಳನ ಸೌಂದರ್ಯದ ಬಗ್ಗೆ ಕೇಳಿ, ಕಾಮದೇವನಿಗೆ ಬಹಳವಾದ ಮತ್ಸರವು ಉಂಟಾಯಿತು. ನಳನನ್ನು ಸೋಲಿಸಬೇಕೆಂಬ ಉದ್ದೇಶದಿಂದ, ತನ್ನ ನಿಜವಾದ ಭೌತಿಕ ಶರೀರವನ್ನು ದಮಯಂತಿಯ ಶರೀರವನ್ನಾಗಿ ಮಾಡಿಕೊಂಡು (ದಮಯಂತಿಯ ಶರೀರದಲ್ಲಿ ಕಾಮದೇವನು

ಹೊಕ್ಕವನಾಗಿ), ನಳನನ್ನು ಗೆಲ್ಲಲು ಬಯಸಿದನು. ಇಯೇಷ = ಇಷು - ಇಚ್ಛಾಯಾಮ್, ಲಿಟ್-ಲಕಾರ.

अकारि तेन श्रवणातिथिर्गुणः
क्षमाभुजा भीमनृपात्मजाश्रियः ॥
तदुच्चधैर्यव्ययसंहितेषुणा
स्मरेण च स्वात्मशरासनाश्रयः ॥४४॥

44. ಅನ್ವಯ : **तेन** = ಆ, **क्षमाभुजा** = (ನಳ) ಮಹಾರಾಜನಿಂದ, **भीमनृपात्मजाश्रियः** = ಭೀಮ ಮಹಾರಾಜನ ಮಗಳಾದ ದಮಯಂತಿಯ ಸೌಂದರ್ಯದ (ಸೌಂದರ್ಯವೆಂಬ), **गुणः** = ಗುಣವು, **श्रवणातिथिः** = ಕಿವಿಗೆ ಅತಿಥಿಯಾಗಿ (ಕೇಳಲು ಇಂಪಾಗಿ), **अकारि** = ಮಾಡಲ್ಪಟ್ಟಿತು. **च** = ಮತ್ತು, **तदुच्चधैर्यव्ययसंहितेषुणा** = ಅವನ (ನಳನ) ಶ್ರೇಷ್ಠವಾದ ಧೈರ್ಯದ (ಸೌಂದರ್ಯದ) ನಾಶಕ್ಕೋಸ್ಕರ ಬಾಣವನ್ನು ಬಿಲ್ಲಿಗೆ ಜೋಡಿಸಿದಂತಹ, **स्मरेण** = ಕಾಮದೇವನಿಂದ, **स्वात्मशरासनाश्रयः** = ತನ್ನ ಬಿಲ್ಲಿಗೆ ಆಧಾರವಾಗಿರುವಂತಹ, **गुणः** = ಹೆದೆಯು (ಹಗ್ಗವು), **श्रवणातिथिः** = ಕಿವಿಗೆ ಅತಿಥಿಯಾದ ಠೇಂಕಾರವೆಂಬ ಧ್ವನಿಯಾಗಿ, **अकारि** = ಮಾಡಲ್ಪಟ್ಟಿತು.

ವಿವರಣೆ : ಈ ಕಾವ್ಯದಲ್ಲಿ ಅಲ್ಲಲ್ಲಿ ಅತಿಥಿ ಎಂಬ ಶಬ್ದವನ್ನು ಬೇರೆ ಶಬ್ದಗಳೊಂದಿಗೆ ಸಮಾಸ ಮಾಡಿ ಬಳಸಲಾಗಿದೆ. ಅತಿಥಿ ಅಂದರೆ ಸತ್ಕಾರಕ್ಕೆ ಅಥವಾ ಆದರಕ್ಕೆ ಯೋಗ್ಯವಾದವನು ಎಂದರ್ಥ. ಶ್ರವಣಾತಿಥಿಃ ಅಂದರೆ ಕಿವಿಗೆ ಅತ್ಯಂತ ಆದರದಿಂದ ಅಥವಾ ಗೌರವದಿಂದ ಕೇಳಲು ಯೋಗ್ಯವಾದದ್ದು ಎಂದರ್ಥ. ಕಾಮದೇವನ ಪಕ್ಷದಲ್ಲಿ ಆವೃತ್ತಿ ಮಾಡಿರುವ ಶ್ರವಣಾತಿಥಿ ಎಂಬ ಪದಕ್ಕೆ ಎರಡು ಅರ್ಥಗಳಿವೆ. ಕಿವಿಗೆ ಇಂಪಾದ ನಾದವು ಹೊರಹೊಮ್ಮುವಂತೆ ಬಿಲ್ಲಿನ ಹೆದೆಯನ್ನು ಕಾಮದೇವನು ಎಳೆದು ಬಿಗಿಯಾಗಿ ಕಟ್ಟಿದನು ಎಂಬುದು ಒಂದು ಅರ್ಥ. ಬಾಣವನ್ನು ರಭಸವಾಗಿ ಮತ್ತು ಬಹಳ ದೂರಕ್ಕೆ ಬಿಡಬೇಕಾದರೆ, ಬಾಣವನ್ನು ಬಿಲ್ಲಿಗೆ ಜೋಡಿಸಿ, ಅದನ್ನು ಕಿವಿಯವರೆಗೂ ಎಳೆದು ಬಿಡಬೇಕಾಗುತ್ತದೆ. ಆದ್ದರಿಂದ ಆ ಹಗ್ಗವು ಕಿವಿಯವರೆಗೆ ಹೋಗುತ್ತದೆ ಎಂಬ ಕಾರಣದಿಂದ ಕಿವಿಗೆ ಅತಿಥಿಯಾಯಿತು (ಆದರ ಪಾತ್ರವಾಯಿತು) ಎಂಬುದು ಇನ್ನೊಂದು ಅರ್ಥ. ನಳನನ್ನು ಸೋಲಿಸುವುದಕ್ಕೋಸ್ಕರ ಕಾಮದೇವನು ತನ್ನ ಬಿಲ್ಲಿಗೆ ಬಿಗಿಯಾಗಿ ಹಗ್ಗವನ್ನು ಕಟ್ಟಿದನು

ಎಂಬುದು ಶ್ಲೋಕದ ತಾತ್ಪರ್ಯ. ಕೆಲವು ಪುಸ್ತಕಗಳಲ್ಲಿ - ಭೀಮನೃಪಾತ್ಮಜಾಲಯಃ ಎಂಬ ಪಾಠಭೇದವೂ ಇದೆ.

*** अकारि । डुकृञ्-करणे । कर्मणि लुङ्-लकारः ।**

*** क्षमां भुनक्ति इति क्षमाभुक् । तेन । क्षमाभुजा । उपपदसमासः । उपपदमतिङ् ।**

अमुष्य धीरस्य जयाय साहसी

शरासनज्यां विशिखैः सनाथयन् ॥

निमज्जयामास यशांसि संशये

स्मरस्त्रिलोकीविजयार्जितान्यपि ॥४५॥

45. ಅನ್ವಯ : **साहसी** = ಸಾಹಸವನ್ನು ಮಾಡುವ (ವಿಚಾರ ಮಾಡದೆ ಕೆಲಸವನ್ನು ಮಾಡುವ), **स्मरः** = ಕಾಮದೇವನು, **अमुष्य** = ಈ, **धीरस्य** = ಧೀರನಾದ ನಳನ (ನಳನನ್ನು), **जयाय** = ಗೆಲ್ಲುವುದಕ್ಕೋಸ್ಕರ, **शरासनज्याम्** = ಬಿಲ್ಲಿನ ಹೆದೆಯನ್ನು, **विशिखैः** = ಬಾಣಗಳೊಂದಿಗೆ, **सनाथयन्** = ಜೋಡಿಸುತ್ತಾ, **त्रिलोकीविजयार्जितानि अपि** = ಮೂರು ಲೋಕಗಳನ್ನು ಕೂಡ ಗೆದ್ದು ಸಂಪಾದಿಸಿರುವ, **यशांसि** = ಯಶಸ್ಸುಗಳನ್ನು, **संशये** = ಸಂಶಯದಲ್ಲಿ, **निमज्जयामास** = ಮುಳುಗಿಸಿದನು.

ವಿವರಣೆ : ತದಾ ಖಲು ಜ್ಯಾಮ್ - ಎಂಬುದರ ಬದಲು, ಶರಾಸನಜ್ಯಾಮ್ ಎಂಬ ಪಾಠಭೇದವಿದೆ. ಶರಾಸನಜ್ಯಾಮ್ ಎಂಬುದು ಉತ್ತಮವಾದ ಪ್ರಯೋಗ. ಯುದ್ಧದಲ್ಲಿ ಎದೆಗುಂದದೆ ಧೈರ್ಯದಿಂದ ಯುದ್ಧ ಮಾಡುವವನು ಧೀರ. ಒಳಿತು-ಕೆಡುಕುಗಳನ್ನು ವಿಚಾರ ಮಾಡದೆ, ಅವಿವೇಕತನದಿಂದ ಮಾಡುವ ಕೆಲಸಕ್ಕೆ ಸಂಸ್ಕೃತದಲ್ಲಿ ಸಾಹಸ ಎನ್ನುತ್ತಾರೆ. ಮನ್ಮಥನು ಮೂರು ಲೋಕಗಳನ್ನೂ ಗೆದ್ದು ಬಹಳವಾದ ಯಶಸ್ಸನ್ನು ಗಳಿಸಿದ್ದನು. ಆದರೆ ನಳನೊಂದಿಗೆ ಯುದ್ಧವನ್ನು ಮಾಡಲು ಸಿದ್ಧತೆಗಳನ್ನು ಮಾಡುತ್ತಿರುವಾಗಲೇ, ಮೊದಲು ಗಳಿಸಿದ ಮನ್ಮಥನ ಯಶಸ್ಸುಗಳು ಸಂಶಯದಲ್ಲಿ ಮುಳುಗಿಹೋದವು. ನಿಮಜ್ಜಯಾಮಾಸ = ಟುಮಸ್ಜೋ - ಶುದ್ಧೌ, ನಿ - ಉಪಸರ್ಗ + ಣಿಜಂತ, ಲಿಟ್-ಲಕಾರ.

*** त्रिलोकी । त्रयाणां लोकानां समाहारः । समाहारद्विगुः समासः । सङ्ख्यापूर्वो द्विगुः । तद्धितार्थोत्तरपदसमाहारे च ।**

अनेन भैमीं घटयिष्यतस्तथा

विधेरवन्ध्येच्छतया व्यलासि तत् ॥

अभेदि तत्तादृगनङ्गमार्गणैः

यदस्य पौष्पैरपि धैर्यकञ्चुकम् ॥४६॥

46. ಅನ್ವಯ : **अनेन** = ಇವನೊಂದಿಗೆ (ನಳನೊಂದಿಗೆ), **भैमीम्** = ದಮಯಂತಿಯನ್ನು, **घटयिष्यतः** = ಒಂದುಗೂಡಿಸುತ್ತಿರುವ, **विधेः** = ಬ್ರಹ್ಮನ, **अवन्ध्येच्छतया** = ವ್ಯರ್ಥವಿಲ್ಲದ ಇಚ್ಛೆಯಿಂದಾಗಿ, **तत्** = ಅದು, **तथा** = ಹಾಗೆ, **व्यलासि** = ಶೋಭಿಸಿತು. **यत्** = ಯಾವುದೆಂದರೆ, **अस्य** = ಇವನ (ನಳನ), **तादृक्** = ಅಂತಹ, **तत्** = ಆ, **धैर्यकञ्चुकम्** = ಧೈರ್ಯವೆಂಬ ಕವಚವು, **पौष्पैः** = ಪುಷ್ಪಮಯವಾದ, **अनङ्गमार्गणैः अपि** = ಮನ್ಮಥನ ಬಾಣಗಳಿಂದಲೂ ಕೂಡ, **अभेदि** = ಭೇದಿಸಲ್ಪಟ್ಟಿತು.

ವಿವರಣೆ : ರಾಜ-ಮಹಾರಾಜರು ಬಹುಶಃ ಯಾವಾಗಲೂ ಕಠಿಣವಾದ ರಕ್ಷಾಕವಚವನ್ನು ಧರಿಸಿರುತ್ತಾರೆ. ಆಕಸ್ಮಿಕವಾಗಿ ಶತ್ರುಗಳು ಖಡ್ಗವನ್ನು ಹಿಡಿದು ಮೇಲೆರಗಿದರೂ, ಪ್ರಾಣಾಪಾಯ ಉಂಟಾಗಬಾರದು ಎಂಬುದು ಇದರ ಉದ್ದೇಶ. ಅಂತಹ ಕವಚಧಾರಿಯಾದ ರಾಜನ ಕವಚವನ್ನು ಒಡೆದು ತೆಗೆಯಬೇಕಾದರೆ, ತೀಕ್ಷ್ಣವಾದ ಬಾಣ ಅಥವಾ ಖಡ್ಗಗಳಿಂದ ಮಾತ್ರ ಸಾಧ್ಯ. ಆದರೆ ದಮಯಂತಿಯ ಪ್ರೇಮಬಾಣದಿಂದಲೇ ನಳನು ಕವಚವನ್ನು ತೆಗೆದಿಟ್ಟನು ಎಂದರ್ಥ. ವ್ಯಲಾಸಿ = ಲಸ - ಶ್ಲೇಷಣಕ್ರೀಡನಯೋಃ, ವಿ-ಉಪಸರ್ಗ + ಭಾವೇಪ್ರಯೋಗ, ಲುಙ್-ಲಕಾರ. ಅಭೇದಿ = ಭಿದಿರ್ - ವಿದಾರಣೇ, ಕರ್ಮಣಿಪ್ರಯೋಗ, ಲುಙ್-ಲಕಾರ.

किमन्यदद्यापि यदस्त्रतापितः

पितामहो वारिजमाश्रयत्यहो ॥

स्मरं तनुच्छायतया तमात्मनः

शशाक शङ्के स न लङ्घितुं नलः ॥४७॥

47. ಅನ್ವಯ : **किम्** = ಬೇರೆ, **अन्यत्** = ಏನು ? **पितामहः** = ಬ್ರಹ್ಮನು, **यत्** = ಯಾವ, **अस्त्रतापितः** = (ಕಾಮದೇವನ) ಅಸ್ತ್ರದಿಂದ ಸುಟ್ಟವನಾಗಿ, **अद्य अपि** = ಇಂದೂ ಕೂಡ, **वारिजम्** = ಕಮಲವನ್ನೇ, **आश्रयति** = ಆಶ್ರಯಿಸುತ್ತಾನೆ. **अहो** = ಆಹಾ !, **तम्** = ಆ, **स्मरम्** = ಮನ್ಮಥನನ್ನು, **सः** = ಆ, **नलः** = ನಳನು, **आत्मनः** = ತನ್ನ, **तनुच्छायतया** = ಶರೀರದ

ಸೌಂದರ್ಯದಿಂದ, **लङ्घितुम्** = ಮೀರಲು, **न शशाक** = ಸಮರ್ಥನಾಗಲಿಲ್ಲ. (ಎಂಬುದಾಗಿ ನಾನು), **शङ्के** = ಭಾವಿಸುತ್ತೇನೆ.

ವಿವರಣೆ : ಮನ್ಮಥನ ಪುಷ್ಪಬಾಣದ ಹೊಡೆತದಿಂದ ಸುಟ್ಟುಕೊಂಡಿರುವ ಬ್ರಹ್ಮನು ಈಗಲೂ ಕಮಲದ ಮೇಲೆಯೇ ಕುಳಿತುಕೊಳ್ಳುತ್ತಾನೆ. ಏಕೆಂದರೆ ಸರೋವರದಲ್ಲಿ ಬೆಳೆದಿರುವ ಕಮಲವು ತಂಪಾಗಿರುತ್ತದೆ. ಹೀಗೆ ಬ್ರಹ್ಮನೇ ಸೋತಿರುವುದರಿಂದ, ಮನ್ಮಥನ ಮುಂದೆ ನಳನೂ ಸೋಲುತ್ತಾನೆ ಎಂದು ಕವಿಯು ಸಂಶಯವನ್ನು ವ್ಯಕ್ತಪಡಿಸುತ್ತಾನೆ.

ಶಂಕೇ = ಶಕಿ - ಶಂಕಾಯಾಮ್, ಲಟ್-ಲಕಾರ. ಆಶ್ರಯತಿ = ಆ - ಉಪಸರ್ಗ + ಶ್ರಿಞ್ - ಸೇವಾಯಾಮ್, ಲಟ್-ಲಕಾರ.

*** पितामहः + वारिजम् = पितामहो वारिजम् । उत्वसन्धिः । हशि च ।**

उरोभुवा कुम्भयुगेन जृम्भितम्
नवोपहारेण वयस्कृतेन किम् ॥
त्रपासरिद्दुर्गमपि प्रतीर्य सा
नलस्य तन्वी हृदयं विवेश यत् ॥४८॥

48. ಅನ್ವಯ : **सा** = ಆ, **तन्वी** = ತೆಳ್ಳಗಿರುವವಳು (ದಮಯಂತಿಯು), **जृम्भितम्** = ವಿಶಾಲವಾಗಿರುವ, **त्रपासरिद्दुर्गम् अपि** = (ನಳನ ಕುರಿತಾದ) ನಾಚಿಕೆಯೆಂಬ ನದಿಯಿಂದ ನಿರ್ಮಿತವಾದ ಕೋಟೆಯನ್ನು (ಜಲದುರ್ಗವನ್ನು) ಕೂಡ, **प्रतीर्य** = ದಾಟಿ, **नलस्य** = ನಳನ, **हृदयम्** = ಹೃದಯವನ್ನು, **विवेश** = ಪ್ರವೇಶಿಸಿದಳು, **यत्** = (ಎಂಬುದು) ಯಾವುದೋ, (ತತ್=ಅದು), **वयस्कृतेन** = ಯೌವನದಿಂದ ಮಾಡಿರುವ, **नवोपहारेण** = ಹೊಸದಾದ ಉಡುಗೊರೆಯಾದ, **उरोभुवा** = ಎದೆಯಲ್ಲಿ ಹುಟ್ಟಿರುವ, **कुम्भयुगेन किम्** = ಎರಡು ಕಲಶಗಳಿಂದಲೋ (ಸ್ತನಗಳಿಂದಲೋ) ಹೇಗೆ ?

ವಿವರಣೆ : ದುರ್ಗವೆಂದರೆ ಕೋಟೆ. ಆದರೆ ಕೆಲವು ರಾಜರು ಪ್ರಾಚೀನಕಾಲದಲ್ಲಿ ಅರಮನೆ ಅಥವಾ ರಾಜಧಾನಿಯ ಸುತ್ತಲೂ ಆಳವಾದ ಹೊಂಡವನ್ನು ನಿರ್ಮಿಸಿ, ಅದರಲ್ಲಿ ನೀರನ್ನು ತುಂಬಿಸುತ್ತಿದ್ದರು. ಇದರಲ್ಲಿ ಕೆಲವರು ಮೊಸಳೆಗಳನ್ನೂ ಸಾಕುತ್ತಿದ್ದರು. ಇದನ್ನು ಜಲದುರ್ಗ ಎನ್ನುತ್ತಾರೆ. ಶತ್ರುಗಳು ಆಕ್ರಮಣವನ್ನು ಮಾಡಬಾರದು ಎಂಬ ಉದ್ದೇಶದಿಂದ ಇಂತಹ ಜಲದುರ್ಗಗಳನ್ನು ನಿರ್ಮಿಸುತ್ತಿದ್ದರು. ಇಲ್ಲಿ ನಾಚಿಕೆಯೆಂಬ ನದಿಯೇ ಜಲದುರ್ಗ. ಆಳವಾದ

ನದಿಯನ್ನು ಈಜಲು ಸಾಧ್ಯವಾಗುವುದಿಲ್ಲವೆಂದಾದರೆ, ದೊಡ್ಡದಾದ ಎರಡು ಕೊಡಗಳನ್ನು (ಕೊಡಪಾನ) ಎದೆಗೆ ಕಟ್ಟಿಕೊಂಡು ಈಜುವ ಕ್ರಮ ಪ್ರಾಚೀನಕಾಲದಲ್ಲಿ ರೂಢಿಯಲ್ಲಿತ್ತು. ಎದೆಯ ಎರಡು ಪಾರ್ಶ್ವಗಳಲ್ಲಿ ಕೊಡಗಳು ತೇಲುತ್ತಿರುತ್ತವೆ. ಹೀಗೆ ಮಾಡುವುದರಿಂದ ದೇಹವು ನೀರಿನಲ್ಲಿ ಮುಳುಗುವುದಿಲ್ಲ. ಇಲ್ಲಿ ದಮಯಂತಿಯ ಸ್ತನಗಳೇ ಕೊಡಪಾನಗಳು. ಇವು ಇರುವುದರಿಂದ ನದಿಯಲ್ಲಿ ನಿರಾಯಾಸವಾಗಿ ಈಜಿ, ದಡ ಸೇರಿ, ನಳನ ಹೃದಯವನ್ನು ಪ್ರವೇಶಿಸಿದಳು ಎಂದರ್ಥ. ವಿವೇಶ = ವಿಶ - ಪ್ರವೇಶನೇ, ಲಿಟ್-ಲಕಾರ.

अपह्लुवानस्य जनाय यन्निजाम्
अधीरतामस्य कृतं मनोभुवा ॥
अबोधि तज्जागरदुःखसाक्षिणी
निशा च शय्या च शशाङ्ककोमला ॥४९॥

49. ಅನ್ವಯ : **निजाम्** = ತನ್ನ, **अधीरताम्** = ಅಂಜುಬುರುಕತನವನ್ನು (ಹೆದರುವ ಸ್ವಭಾವವನ್ನು), **जनाय** = ಜನರಿಗೋಸ್ಕರ, **अपह्नुवानस्य** = ಮುಚ್ಚಿಡುತ್ತಿದ್ದಂತಹ, **अस्य** = ಇವನ (ನಳನ), **मनोभुवा** = ಮೋಹದಿಂದ, **यत्** = ಯಾವುದು, **कृतम्** = ಮಾಡಲ್ಪಟ್ಟಿತೋ, **तत्** = ಅದು, **जागरदुःखसाक्षिणी** = (ರಾತ್ರಿ) ಎಚ್ಚರವಾಗಿರುವುದರಿಂದ ಉಂಟಾಗಿರುವ ದುಃಖವನ್ನು ಪ್ರತ್ಯಕ್ಷವಾಗಿ ನೋಡಿರುವ, **शशाङ्ककोमला** = ಚಂದ್ರನಂತೆ ಕೋಮಲವಾದ, **निशा** = ರಾತ್ರಿಯು, **च** = ಮತ್ತು, **शय्या** = ಹಾಸಿಗೆಯು, (**च** = ಮತ್ತು), **अबोधि** = ತಿಳಿಯಿತು.

ವಿವರಣೆ : ನಿರಂತರವಾದ ದಮಯಂತಿಯ ಕುರಿತಾದ ಚಿಂತೆಯಿಂದ ನಳನಿಗೆ ರಾತ್ರಿ ನಿದ್ದೆಯು ಬರುತ್ತಿರಲಿಲ್ಲ. ಆದರೆ ಅದು ಯಾರಿಗೂ ತಿಳಿಯಬಾರದೆಂದು ಮತ್ತು ಜನರಿಗೆ ತನ್ನ ಬಗ್ಗೆ ಗೌರವ ಇರಬೇಕೆಂದು ಮುಚ್ಚಿಡುತ್ತಿದ್ದನು. ಆದರೆ ರಾತ್ರಿ ಮತ್ತು ಹಾಸಿಗೆ ಇವೆರಡೂ ಕೂಡ ರಾತ್ರಿಯೂ ಎಚ್ಚರವಾಗಿರುತ್ತಿದ್ದವು. ಈ ಕಾರಣದಿಂದ ರಾತ್ರಿ ಮತ್ತು ಹಾಸಿಗೆ ಇವೆರಡೂ ಇದನ್ನು ತಿಳಿದಿದ್ದವು. ಅಬೋಧಿ = ಬುಧ-ಅವಗಮನೇ, ಕರ್ತರಿಪ್ರಯೋಗ, ಲುಙ್-ಲಕಾರ.

स्मरोपतप्तोऽपि भृशं न स प्रभुः
विदर्भराजं तनयामयाचत ॥
त्यजन्त्यसूञ्शर्म च मानिनो वरम्
त्यजन्ति न त्वेकमयाचितव्रतम् ॥५०॥

50. ಅನ್ವಯ : **भृशम्** = ಬಹಳವಾಗಿ, **स्मरोपतप्तः अपि** = ಕಾಮಪೀಡಿತನಾಗಿದ್ದರೂ ಕೂಡ, **सः** = ಆ, **प्रभुः** = ರಾಜನು (ನಳನು), **विदर्भराजम्** = ವಿದರ್ಭರಾಜನನ್ನು ಕುರಿತು (ಭೀಮನನ್ನು ಕುರಿತು), **तनयाम्** = ಮಗಳನ್ನು (ದಮಯಂತಿಯನ್ನು), **न अयाचत** = ಬೇಡಲಿಲ್ಲ. **मानिनः** = ಮಾನವಿರುವವರು, **असून्** = ಪ್ರಾಣಗಳನ್ನು, **च** = ಮತ್ತು, **शर्म** = ಸುಖವನ್ನು, **त्यजन्ति** = ಬಿಡುತ್ತಾರೆ. **तु** = ಆದರೆ, **एकम्** = ಒಂದು, **वरम्** = ಶ್ರೇಷ್ಠವಾಗಿರುವ, **अयाचितव्रतम्** = ಬೇಡದೇ ಇರುವುದು ಎಂಬ ವ್ರತ-ನಿಯಮವನ್ನು, **न त्यजन्ति** = ಬಿಡುವುದಿಲ್ಲ. (ಪಾಲಿಸುತ್ತಾರೆ).

ವಿವರಣೆ : ಮಾನವುಳ್ಳವರು ಅಥವಾ ಆತ್ಮಗೌರವ ಇರುವವರು ಇನ್ನೊಬ್ಬರ ಮುಂದೆ ಕೈಚಾಚುವುದಿಲ್ಲ. ನಳನೂ ಕೂಡ ಭೀಮ ಮಹಾರಾಜನಲ್ಲಿ, ನಿಮ್ಮ ಮಗಳಾದ ದಮಯಂತಿಯನ್ನು ನನಗೆ ಕೊಡಿ ಎಂದು ಕೇಳಲಿಲ್ಲ. ಯಾಕೆಂದರೆ ಬೇಡದೇ ಇರುವುದೇ ಇವರಿಗೆ ಶ್ರೇಷ್ಠವಾದ ವ್ರತವಾಗಿರುತ್ತದೆ. ಬಯಸದೆ ಬಂದ ಭಾಗ್ಯವನ್ನು ಮಾತ್ರ ಸ್ವೀಕರಿಸುತ್ತಾರೆ ಮತ್ತು ಅದರ ಮೂಲಕ ಜೀವನವನ್ನು ಆನಂದಿಸುತ್ತಾರೆ.

*** विदर्भस्य राजा = विदर्भराजः । तम् । विदर्भराजम् । षष्ठीतत्पुरुषः ।**

राजाहस्सखिभ्यष्टच् । टच्-प्रत्ययः ।

मृषाविषादाभिनयादयं क्वचिद्
जुगोप निःश्वासततिं वियोगजाम् ॥
विलेपनस्याधिकचन्द्रभागता
विभावनाच्चापललाप पाण्डुताम् ॥५१॥

51. ಅನ್ವಯ : **अयम्** = ಇವನು (ನಳನು), **वियोगजाम्** = ವಿರಹ ವೇದನೆಯಿಂದ ಉಂಟಾದ, **निःश्वासततिम्** = ನಿಟ್ಟುಸಿರುಗಳ ಗುಂಪನ್ನು, **क्वचित्** = ಕೆಲವು ಸಂದರ್ಭಗಳಲ್ಲಿ (ಯಾವುದಾದರೂ ವಸ್ತು ಅಥವಾ ವಿಷಯದಲ್ಲಿ), **मृषाविषादाभिनयात्** = ಸುಳ್ಳಾದ (ತೋರಿಕೆಯ) ದುಃಖದ ನಟನೆಯಿಂದ, **जुगोप** = ಮುಚ್ಚಿಟ್ಟನು. **च** = ಮತ್ತು, **वियोगजाम्** = ವಿರಹ ವೇದನೆಯಿಂದ ಉಂಟಾದ, **पाण्डुताम्** = (ಮುಖದ) ಬಿಳುಪನ್ನು, **विलेपनस्य** = (ಮುಖಕ್ಕೆ) ಲೇಪಿಸಿದ, (ಚಂದನದಲ್ಲಿ), **अधिकचन्द्रभागताविभावनात्** = ಹೆಚ್ಚಾಗಿರುವ ಕರ್ಪೂರವೇ ಕಾರಣವೆಂದು ಆರೋಪ ಮಾಡುವುದರ ಮೂಲಕ, **अपललाप** = ಮುಚ್ಚಿಡುತ್ತಿದ್ದನು.

ವಿವರಣೆ : ಎಷ್ಟೋ ಬಾರಿ ತಡೆಯಲಾಗದಷ್ಟು ವಿರಹದುಃಖವು ನಳನಿಗೆ ಉಂಟಾಗುತ್ತಿತ್ತು. ಆದರೆ ಕೆಲವೊಮ್ಮೆ ಬೇರೆ ಯಾವುದೋ ವಿಷಯದ ಬಗ್ಗೆ ತೋರಿಕೆಯ ದುಃಖವನ್ನು ವ್ಯಕ್ತಪಡಿಸುತ್ತಾ, ವಿರಹವೇದನೆಯನ್ನು ಮುಚ್ಚಿಡುತ್ತಿದ್ದನು. ವಿರಹವೇದನೆಯಿಂದ ಮುಖವು ಬೆಳ್ಳಗಾದ ಸಂದರ್ಭದಲ್ಲಿ, ಮುಖಕ್ಕೆ ಹಚ್ಚಿರುವ ಚಂದನದಲ್ಲಿ ಕರ್ಪೂರದ ಅಂಶ ಹೆಚ್ಚಾಗಿದೆ, ಆದ್ದರಿಂದ ಮುಖವು ಬೆಳ್ಳಗಾಗಿದೆ ಎಂದು ಹೇಳುತ್ತಾ, ನಳನು ತನ್ನ ವಿರಹವೇದನೆಯ ನೋವನ್ನು ಮುಚ್ಚಿಡುತ್ತಿದ್ದನು. ಜುಗೋಪ = ಗುಪೂ - ರಕ್ಷಣೇ, ಲಿಟ್-ಲಕಾರ. ಅಪಲಲಾಪ = ಅಪ-ಉಪಸರ್ಗ + ಲಪ - ವ್ಯಕ್ತಾಯಾಂ ವಾಚಿ, ಲಿಟ್-ಲಕಾರ.

*** मृषा विषादः = मृषाविषादः । केवलसमासः । सह सुपा ।**

शशाक निह्नोतुमये न तत्प्रियाम्
अयं बभाषे यदलीकवीक्षिताम् ॥
समाज एवालपितासु वैणिकैः
मुमूर्छ यत्पञ्चममूर्छनासु च ॥५२॥

52. ಅನ್ವಯ : **अयम्** = ಇವನು (ನಳನು), **अलीकवीक्षिताम्** = ಸುಳ್ಳಿನಿಂದ ನೋಡಿರುವ (ತನ್ನ ಕಲ್ಪನೆಯಿಂದ ಕಂಡಿರುವ), **प्रियाम्** = ದಮಯಂತಿಯನ್ನು ಕುರಿತು, **समाजे एव** = ಸಭೆಯಲ್ಲಿಯೇ, **यत्** = ಯಾವುದನ್ನು, **बभाषे** = ಹೇಳಿದನೋ, **च** = ಮತ್ತು, **वैणिकैः** = ವೀಣೆ ನುಡಿಸುವುದರಲ್ಲಿ ಪ್ರವೀಣರಾದವರಿಂದ, **आलपितासु** = ಹಾಡಲ್ಪಟ್ಟ, **पञ्चममूर्छनासु** = ಪಂಚಮ ಧ್ವನಿಯ ರಾಗಗಳಲ್ಲಿ, **यत्** = ಯಾವುದು, **मुमूर्छ** = ಹೊರಹೊಮ್ಮಿತೋ (ಪ್ರತಿಧ್ವನಿಸಿತೋ), **तत्** = ಅದನ್ನು (ಅವೆರಡನ್ನು), **अये** = ದುಃಖದಲ್ಲಿ, **निह्नोतुम्** = ಮುಚ್ಚಿಡಲು, **न शशाक** = ಸಮರ್ಥನಾಗಲಿಲ್ಲ.

ವಿವರಣೆ : ಈ ಶ್ಲೋಕದಲ್ಲಿ - ನಿಹ್ನೋತುಮಯೇನ (ನಿಹ್ನೋತುಮ್+ಅಯೇನ), ನಿಹ್ನೋತುಮಯೇ ನ (ನಿಹ್ನೋತುಮ್+ಅಯೇ+ನ), ನಿಹ್ನೋತುಮನೇನ (ನಿಹ್ನೋತುಮ್+ಅನೇನ) ಎಂಬ ಪಾಠಭೇದಗಳಿವೆ. ಅಯೇನ =ದೈವದಿಂದ, ಅಯೇ = ದುಃಖದಲ್ಲಿ, ಅನೇನ = ಇವನಿಂದ - ಈ ಮೂರು ರೀತಿಯ ಪದಗಳನ್ನು ಬಳಸಿಯೂ ಅನ್ವಯವನ್ನು ಮಾಡಿದ್ದಾರೆ. ಇಲ್ಲಿ - ಅಯೇ ಎಂಬ ಪಾಠವನ್ನು ತೆಗೆದುಕೊಳ್ಳಲಾಗಿದೆ.

ಕೆಲವೊಮ್ಮೆ ದುಃಖವು ಒತ್ತರಿಸಿ ಬಂದಾಗ, ಏನು ಮಾತನಾಡಬೇಕು ಎಂಬುದರ ಅರಿವಿಲ್ಲದೆ, ಬಾಯಿಯಿಂದ ಮಾತು ಹೊರಹೊಮ್ಮುತ್ತದೆ. ಹಾಗೆ ದಮಯಂತಿಯ ಬಗ್ಗೆ ಸಭೆಯಲ್ಲಿ ನಳನು ಮಾತನಾಡಿರುವುದರಿಂದ, ಅದು ಎಲ್ಲರಿಗೂ ತಿಳಿದಿತ್ತು. ಆದ್ದರಿಂದ ಮುಚ್ಚಿಡಲು ಸಾಧ್ಯವಾಗಲಿಲ್ಲ. ಕೇವಲ ವೀಣಾವಾದಕರಲ್ಲದೆ, ಕೋಗಿಲೆಯೂ ಕೂಡ ಪಂಚಮರಾಗದಲ್ಲಿಯೇ ಹಾಡುತ್ತದೆ. ಆದ್ದರಿಂದ ವೀಣೆಯ ಮೂಲಕ ಮತ್ತು ಕೋಗಿಲೆಯ ಮೂಲಕ ವಿರಹವೇದನೆಯು ವ್ಯಕ್ತವಾಗುತ್ತಿತ್ತು. ಅದನ್ನು ಮುಚ್ಚಿಡಲು ನಳನಿಗೆ ಸಾಧ್ಯವಾಗಲಿಲ್ಲ ಎಂದರ್ಥ. ಶಶಾಕ = ಶಕ್ಲೃ - ಶಕ್ತೌ, ಲಿಟ್-ಲಕಾರ. ಬಭಾಷೇ = ಭಾಷ - ವ್ಯಕ್ತಾಯಾಂ ವಾಚಿ, ಲಿಟ್-ಲಕಾರ. ಮುಮೂರ್ಚ್ಛ = ಮುಚ್ಛಾರ್ - ಸ್ನೇಹಸಮುಚ್ಛ್ರಾಯಯೋಃ, ಲಿಟ್-ಲಕಾರ. ಅಯೇ ಕ್ರೋಧೇ ವಿಷಾದೇ ಚ ಸಂಭ್ರಮೇ ಸ್ಮರಣೇSಪಿ ಚ - ವಿಶ್ವಕೋಶ.

*** समाजे + एव = समाजय् + एव । यान्तवान्तादेशसन्धिः । एचोऽयवायावः ।**

*** समाजय् + एव = समाज एव । यलोपसन्धिः । लोपः शाकल्यस्य ।**

अवाप सापत्रपतां स भूपतिः
जितेन्द्रियाणां धुरि कीर्तितस्थितिः ॥
असंवरे शम्बरवैरिविक्रमे
क्रमेण तत्र स्फुटतामुपेयुषि ॥५३॥

53. ಅನ್ವಯ : **जितेन्द्रियाणाम्** = ಇಂದ್ರಿಯನಿಗ್ರಹವುಳ್ಳವರ, **धुरि** = ಮುಂಭಾಗದಲ್ಲಿ (ಮುಂದಾಳುವಾಗಿ), **कीर्तितस्थितिः** = ಹೊಗಳಲ್ಪಟ್ಟಿರುವವನಾಗಿ, **सः** = ಆ, **भूपतिः** = ರಾಜನು (ನಳನು), **तत्र** = ಸಭೆಯಲ್ಲಿ, **असंवरे** = ಗೌಪ್ಯವಲ್ಲದ, **शम्बरवैरिविक्रमे** = (ನಳನ) ಕಾಮವಿಕಾರದಲ್ಲಿ, **क्रमेण** = ಕ್ರಮವಾಗಿ, **स्फुटताम्** = ಸ್ಪಷ್ಟತೆಯನ್ನು, **उपेयुषि** = ಪಡೆದಾಗ (ನಳನು ಮೋಹಗೊಂಡಿರುವುದು ಎಲ್ಲರಿಗೂ ತಿಳಿದಾಗ), **सापत्रपताम्** = ನಾಚಿಕೆಯನ್ನು, **अवाप** = ಹೊಂದಿದನು.

ವಿವರಣೆ : ಅವಾಪ = ಅವ - ಉಪಸರ್ಗ + ಆಪ್ಲೃ -ವ್ಯಾಪ್ತೌ, ಲಿಟ್-ಲಕಾರ.

अलं नलं रोद्धुममी किलाभवन्
गुणा विवेकप्रभवा न चापलम् ॥

स्मरः स रत्यामनिरुद्धमेव यत्

सृजत्ययं सर्गनिसर्ग ईदृशः ॥५४॥

54. ಅನ್ವಯ : **विवेकप्रभवाः** = ಸರಿ-ತಪ್ಪುಗಳ ಬಗೆಗಿನ ವಿವೇಕದಿಂದ ಹುಟ್ಟಿರುವ, **अमी** = ಈ, **गुणाः** = ಸದ್ಗುಣಗಳು, **नलम्** = ನಳನನ್ನು (ನಳನಿಗೆ), **चापलम्** = ಚಪಲತೆಯನ್ನು, **रोद्धुम्** = ತಡೆಯಲು, **अलम्** = ಸಮರ್ಥವಾದವುಗಳು, **न अभवन्** = ಆಗಲಿಲ್ಲ, (**अलम् न अभवन्** = ಸಾಕಾಗಲಿಲ್ಲ) **किल** = ಅಲ್ಲವೇ ? **सः** = ಆ, **स्मरः** = ಕಾಮದೇವನು, **रत्याम्** = (ತನ್ನ ಪತ್ನಿಯಾದ) ರತಿದೇವಿಯಲ್ಲಿ, **अनिरुद्धम्** = ಅನಿರುದ್ಧನನ್ನು (ತಡೆ ಇಲ್ಲದವನನ್ನು / ಚಪಲತೆಯಿಂದ ಕೂಡಿದವನನ್ನು), **सृजति** = ಸೃಷ್ಟಿ ಮಾಡುತ್ತಾನೆ (ಹುಟ್ಟಿಸುತ್ತಾನೆ), **यत्** = ಏಕೆಂದರೆ, **अयम्** = ಇದು, **सर्गनिसर्गः** = ಸೃಷ್ಟಿಯ ನಿಯಮ, **ईदृशः एव** = ಇಂತಹುದೇ (ಆಗಿದೆ).

ವಿವರಣೆ : ವಿವೇಕಪ್ರಭವಾಃ ಎಂಬುದರ ಬದಲು ವಿವೇಕಪ್ರಮುಖಾಃ ಎಂಬ ಪಾಠವೂ ಇದೆ.

* सर्गनिसर्गः + ईदृशः = सर्गनिसर्ग ईदृशः । यादेशसन्धिः ।

भोभगो अघो अपूर्वस्य योऽशि । यलोपसन्धिः । लोपः शाकल्यस्य ।

अनङ्गचिह्नं स विना शशाक नो

यदासितुं संसदि यत्नवानपि ॥

क्षणं तदारामविहारकैतवात्

निषेवितुं देशमियेष निर्जनम् ॥५५॥

55. ಅನ್ವಯ : **सः** = ಅವನು (ನಳನು), **यत्नवान् अपि** = ಪ್ರಯತ್ನದಿಂದ ಕೂಡಿದ್ದರೂ, **अनङ्गचिह्नम् विना** = ವಿಲಾಪ-ಚಿಂತೆ-ಗೋಳಾಟ ಮೊದಲಾದ ಕಾಮವಿಕಾರವಿಲ್ಲದೆ, **संसदि** = ಸಭೆಯಲ್ಲಿ, **क्षणम्** = ಒಂದು ಕ್ಷಣವೂ, **आसितुम्** = ಕುಳಿತುಕೊಳ್ಳಲು, **यदा** = ಯಾವಾಗ, **नो शशाक** = ಸಮರ್ಥನಾಗಲಿಲ್ಲವೋ, **तदा** = ಆಗ, **आरामविहारकैतवात्** = ಉದ್ಯಾನವನದಲ್ಲಿ ಸುತ್ತಾಡುವ ನೆಪದಿಂದ, **निर्जनम्** = ನಿರ್ಜನವಾದ, **देशम्** = ಸ್ಥಳವನ್ನು, **निषेवितुम्** = ಆಶ್ರಯಿಸಲು, **इयेष** = ಬಯಸಿದನು.

ವಿವರಣೆ : ಇಯೇಷ = ಇಷು-ಇಚ್ಛಾಯಾಮ್, ಲಿಟ್-ಲಕಾರ.

अथ श्रिया भर्त्सितमत्स्यलाञ्छनः

समं वयस्यैः स्वरहस्यवेदिभिः ॥

पुरोपकण्ठोपवनं किलेक्षिता

दिदेश यानाय निदेशकारिणः ॥५६॥

56. ಅನ್ವಯ : **अथ** = ಆಮೇಲೆ, **श्रिया** = ಸೌಂದರ್ಯದಿಂದ, **भर्त्सितमत्स्यलाञ्छनः** = ಮೀನನ್ನು ಧ್ವಜದಲ್ಲಿ ಧರಿಸಿರುವ ಕಾಮದೇವನನ್ನು ಸೋಲಿಸಿದವನಾಗಿ (ನಳನು), **स्वरहस्यवेदिभिः** = ತನ್ನ (ದಮಯಂತಿಯ ಬಗೆಗಿನ) ಅನುರಾಗವೆಂಬ ರಹಸ್ಯವನ್ನು ತಿಳಿದಿರುವ, **वयस्यैः समम्** = ಗೆಳೆಯರ ಜೊತೆಗೆ, **पुरोपकण्ठोपवनम्** = ನಗರದ ಹತ್ತಿರದಲ್ಲಿರುವ ಉದ್ಯಾನವನ್ನು, **ईक्षिता** = ನೋಡುವ ಸ್ವಭಾವವುಳ್ಳವನಾಗಿ, **यानाय** = ಹೋಗುವುದಕ್ಕೋಸ್ಕರ (ಕುದುರೆಯನ್ನು ತರಲು), **निदेशकारिणः** = ಅಧಿಕಾರಿಗಳನ್ನು, **दिदेश** = ಆದೇಶಿಸಿದನು, **किल** = ಅಲ್ಲವೇ ?

ವಿವರಣೆ : ಮೀನಲಾಂಛನಃ ಎಂಬುದರ ಬದಲು ಮೀನಕೇತನಃ ಎಂಬ ಪಾಠವೂ ಇದೆ. ಅರ್ಥವು ಒಂದೇ ಆಗಿದೆ. ಈಕ್ಷಿತಾ ಎಂಬಲ್ಲಿ ತೃನ್ - ಎಂಬ ಸೂತ್ರದಿಂದ ತೃನ್-ಪ್ರತ್ಯಯ. ಋಕಾರಾಂತ ಪುಲ್ಲಿಂಗ. ತೃನ್-ಎಂಬ ಪ್ರತ್ಯಯವು ತಾಚ್ಛೀಲ್ಯ ಅಥವಾ ಸ್ವಭಾವ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ದಿದೇಶ = ದಿಶ - ಅತಿಸರ್ಜನೇ, ಲಿಟ್-ಲಕಾರ.

*** कण्ठस्य समीपे = उपकण्ठम् । अव्ययीभावः समासः । अव्ययं विभक्तीति सूत्रम् ।**

अमी ततस्तस्य विभूषितं सितम्

जवेऽपि मानेऽपि च पौरुषाधिकम् ॥

उपाहरन्नश्वमजस्रचञ्चलैः

खुराञ्चलैः क्षोदितमन्दुरोदरम् ॥५७॥

57. ಅನ್ವಯ : **ततः** = ಆಮೇಲೆ, **अमी** = ಇವರು (ಅಧಿಕಾರಿಗಳು), **तस्य** = ಅವನ (ನಳನ), **विभूषितम्** = ಅಲಂಕರಿಸಲ್ಪಟ್ಟಿರುವ, **जवे अपि** = ವೇಗದಲ್ಲಿಯೂ, **च** = ಮತ್ತು, **माने अपि** = ಅಳತೆ ಅಥವಾ ಆಕಾರದಲ್ಲಿಯೂ, **पौरुषाधिकम्** = ಸೈನ್ಯಕ್ಕಿಂತಲೂ ಹೆಚ್ಚಾಗಿರುವ, **अजस्रचञ्चलैः** = ನಿರಂತರವಾಗಿ ಕಂಪಿಸುತ್ತಿರುವ, **खुराञ्चलैः** = ಗೊರಸುಗಳಿಂದ (ಕಾಲಿನ ಬುಡದ ತುದಿಗಳಿಂದ), **क्षोदितमन्दुरोदरम्** = ಅಶ್ವಶಾಲೆಯ ಮಧ್ಯಭಾಗವನ್ನು ಪುಡಿ ಮಾಡಿರುವಂತಹ, **सितम्** = ಬಿಳಿಯದಾದ, **अश्वम्** = ಕುದುರೆಯನ್ನು, **उपाहरन्** = ತಂದರು.

ವಿವರಣೆ : ಮಾನೇ ಎಂಬಲ್ಲಿ ಪೌರುಷಾಧಿಕಮ್ ಎಂಬುದಕ್ಕೆ ಮನುಷ್ಯನಿಗಿಂತಲೂ ದೊಡ್ಡದಾದ ಎಂಬ ಅರ್ಥವನ್ನು ಸರಿಹೊಂದಿಸಬಹುದು. ಮನುಷ್ಯನಿಗಿಂತಲೂ ಕುದುರೆಯ ಬೆನ್ನು ಎತ್ತರವಾಗಿದೆ ಎಂದರ್ಥ. ಆದರೆ ವೇಗೇ ಎಂಬಲ್ಲಿ ಮನುಷ್ಯನಿಗಿಂತಲೂ ಹೆಚ್ಚಿನ ವೇಗವಿರುವ ಎಂಬ ಅರ್ಥವು ಸರಿಹೊಂದುವುದಿಲ್ಲ. ವೇಗದ ವಿಷಯದಲ್ಲಿ ಕುದುರೆಗೂ ಮನುಷ್ಯನಿಗೂ ಹೋಲಿಕೆ ಮಾಡುವುದು ಸರಿಯಲ್ಲ. ಈ ಕಾರಣದಿಂದ, ಪೌರುಷಮ್ ಎಂಬುದಕ್ಕೆ ಬಲಮ್ ಎಂಬ ಅರ್ಥವನ್ನಿಟ್ಟುಕೊಂಡು ವಿವರಿಸಲಾಗಿದೆ. ಬಲ ಎಂಬುದಕ್ಕೆ ಸೈನ್ಯ ಎಂಬ ಅರ್ಥವಿದೆ. ಉಪಾಹರನ್ = ಉಪ - ಉಪಸರ್ಗ + ಹೃಞ್ - ಹರಣೇ, ಲಙ್-ಲಕಾರ.

*** खुराञ्चलैः + क्षोदितम् = खुराञ्चलैः क्षोदितम् । विसर्गसन्धिः । शर्परे विसर्जनीयः ।**

अथान्तरेणावटुगामिनाध्वना
निशीथिनीनाथमहः सहोदरैः ॥
निगालगाद्देवमणेरिवोत्थितैः
विराजितं केसरकेशरश्मिभिः ॥५८॥

58. ಅನ್ವಯ : **अथ** = ಆಮೇಲೆ (ಕುದುರೆಯನ್ನು ತಂದ ಮೇಲೆ), **अन्तरेण** = ಮಧ್ಯದಲ್ಲಿರುವ, **अवटुगामिना** = ಕೊರಳಿನ ಮುಂಭಾಗದಲ್ಲಿ ಉಬ್ಬಾಗಿರುವ ಗಂಟಿನ ಮೂಲಕ ಹಾದು ಹೋಗುವ, **अध्वना** = ಮಾರ್ಗದ ಮೂಲಕ, **निगालगात्** = ಕುತ್ತಿಗೆಯ ಸ್ಥಳದಲ್ಲಿರುವ, **देवमणेः** = ಸುಳಿಯಿಂದ, **उत्थितैः इव** = ಮೇಲಕ್ಕೆ ಎದ್ದಿರುವಂತೆ ತೋರುವ, **निशीथिनीनाथमहःसहोदरैः** = ಚಂದ್ರನ ಕಿರಣಗಳ ಸೋದರರರೋ ಎಂಬಂತೆ ಇರುವ, **केसरकेशरश्मिभिः** = ಕೇಸರವೆಂಬ ಹೆಸರಿನ ಕೂದಲುಗಳೆಂಬ ಕಿರಣಗಳಿಂದ, **विराजितम्** = ಶೋಭಿಸುತ್ತಿರುವ, (ಕುದುರೆಯನ್ನು ನಳನು, ಆರುರೋಹ=ಏರಿದನು).

ವಿವರಣೆ : 64ನೇ ಶ್ಲೋಕದಲ್ಲಿ ಕೊಟ್ಟಿರುವ ಆರುರೋಹ ಎಂಬ ಕ್ರಿಯಾಪದವನ್ನು 58ನೇ ಶ್ಲೋಕದಿಂದ 64ನೇ ಶ್ಲೋಕದವರೆಗೆ ಸೇರಿಸಿಕೊಂಡು ವಾಕ್ಯವನ್ನು ಪೂರ್ಣಗೊಳಿಸಬೇಕು. ಈ ಶ್ಲೋಕದಲ್ಲಿ - ಕುದುರೆಯ ಕುತ್ತಿಗೆಯ ಭಾಗದಲ್ಲಿರುವ ಕೂದಲುಗಳನ್ನು ಕವಿಯು ವರ್ಣಿಸಿದ್ದಾನೆ. ಕುದುರೆಯ ಕುತ್ತಿಗೆಯ ಮುಂಭಾಗದಲ್ಲಿ ಸ್ವಲ್ಪ ಉಬ್ಬು ಇರುತ್ತದೆ. ಅಲ್ಲಿ ಒಂದು ಸುಳಿಯೂ ಇರುತ್ತದೆ. ಅಲ್ಲಿಂದ ಕಿರಣಗಳಂತೆ ಕಂಗೊಳಿಸುವ ಕೂದಲುಗಳು ಹುಟ್ಟಿದ್ದವು. ಅಂತಹ ಕುದುರೆಯನ್ನು ನಳನು ಏರಿ ಕುಳಿತನು.

* उत् + स्थितैः = उत्थितैः । पूर्वसवर्णसन्धिः । उदः स्थास्तम्भोः पूर्वस्य -८-४-६१.
* सह उदरं येषां ते सहोदराः । तैः । सहोदरैः । सहपूर्वपदः बहुव्रीहिः । तेन सहेति तुल्ययोगे । वोपसर्जनस्य । सोदरः ।

अजस्रभूमीतटकुट्टनोत्थितैः
उपास्यमानं चरणेषु रेणुभिः ॥
रयप्रकर्षाध्ययनार्थमागतैः
जनस्य चेतोभिरिवाणिमाङ्कितैः ॥५९॥

59. ಅನ್ವಯ : **अजस्रभूमीतटकुट्टनोत्थितैः** = ನಿರಂತರವಾಗಿ ಭೂಮಿಯನ್ನು ಕುಟ್ಟುವುದರಿಂದ (ಗುದ್ದುವುದರಿಂದ) ಮೇಲೆದ್ದಿರುವ, **रेणुभिः** = ಧೂಳಿನ ಕಣಗಳಿಂದ, **रयप्रकर्षाध्ययनार्थम्** = ವೇಗದ ಹೆಚ್ಚಳವನ್ನು ಕಲಿಯುವುದಕ್ಕೋಸ್ಕರವಾಗಿ, **आगतैः** = ಬಂದಿರುವ, **अणिमाङ्कितैः** = ಅಣುವಿನಂತೆ ಚಿಕ್ಕದಾದ ಗುರುತುಗಳಿಂದ ಕೂಡಿರುವ, **जनस्य** = ಜನರ, **चेतोभिः इव** = ಮನಸ್ಸುಗಳಿಂದಲೋ ಎಂಬಂತೆ, **चरणेषु** = ಪಾದಗಳಲ್ಲಿ, **उपास्यमानम्** = ಸೇವಿಸಲ್ಪಡುತ್ತಿರುವ, (ಕುದುರೆಯನ್ನು ನಳನು, ಆರುರೋಹ=ಏರಿದನು).

ವಿವರಣೆ : ಓಡುವಾಗ ನಳನ ಕುದುರೆಯ ಗೊರಸುಗಳು ಚೆನ್ನಾಗಿ ನೆಲವನ್ನು ಬಡಿಯುತ್ತಿದ್ದವು. ಇದರಿಂದ ಬಹಳ ಚಿಕ್ಕದಾದ ಧೂಳಿನ ಕಣಗಳು ಮೇಲಕ್ಕೆ ಹಾರಿ, ಕುದುರೆಯ ಕಾಲಿಗೆ ಬಿದ್ದು ಅಂಟಿಕೊಳ್ಳುತ್ತಿದ್ದವು. ಮನಸ್ಸಿನ ಗಾತ್ರವು ಅಣುವಿನಂತೆ ಬಹಳ ಚಿಕ್ಕದಾಗಿರುತ್ತದೆ. ಕುದುರೆಯ ಕಾಲಿಗೆ ಬಿದ್ದು ಅಂಟಿಕೊಂಡಿರುವ ಧೂಳಿನ ಕಣಗಳನ್ನು ನೋಡಿದಾಗ, ಕುದುರೆಯ ವೇಗವನ್ನು ನೋಡಲು ಪ್ರಜೆಗಳ ಮನಸ್ಸುಗಳೆಂಬ ಧೂಳಿನ ಕಣಗಳು ಕುದುರೆಯ ಕಾಲಿನ ಮೇಲೆ ಬಂದು ಕುಳಿತಿವೆ ಎಂದು ಭಾಸವಾಗುತ್ತಿತ್ತು.

* भूमि + ङीष् = भूमि + ई = भूमी । कृदिकारादक्तिनः । यस्येति च । इकारलोपः ।
* प्रकृष्टः कर्षः = प्रकर्षः । प्रादिसमासः ।
* अध्ययनाय इति अध्ययनार्थम् । चतुर्थीतत्पुरुषः । चतुर्थी तदर्थार्थबलिहितसुखरक्षितैः । अर्थेन नित्यसमासो विशेष्यलिङ्गता च । नित्यसमासः ।

चलाचलप्रोथतया महीभृते
स्ववेगदर्पानिव वक्तुमुत्सुकम् ॥

अलं गिरा वेद किलायमाशयम्

स्वयं हयस्येति च मौनमास्थितम् ॥६०॥

60. ಅನ್ವಯ : **चलाचलप्रोथतया** = ಬಹಳವಾಗಿ ಅಥವಾ ನಿರಂತರವಾಗಿ ಕಂಪಿಸುತ್ತಿರುವ ತುಟಿಯ ತುದಿಯನ್ನು (ಮೂಗಿನ ತುದಿಯನ್ನು) ಹೊಂದಿರುವುದರಿಂದ, **महीभृते** = ರಾಜನಿಗೆ (ನಳನಿಗೆ), **स्ववेगदर्पान्** = ತನ್ನ ವೇಗದ ಅಹಂಕಾರಗಳನ್ನು, **वक्तुम्** = ಹೇಳಲು, **उत्सुकम् इव** = ಉತ್ಸಾಹವನ್ನು ಹೊಂದಿದೆಯೋ ಎಂಬಂತಿರುವ, (ಕುದುರೆಯನ್ನು ನಳನು, ಆರುರೋಹ = ಏರಿದನು). **च** = ಮತ್ತು, **अयम्** = ಇವನು (ನಳನು), **स्वयम्** = ತಾನೇ, **हयस्य** = ಕುದುರೆಯ, **आशयम्** = ಅಭಿಪ್ರಾಯವನ್ನು, **वेद** = ತಿಳಿದಿದ್ದಾನೆ, **किल** = ಅಲ್ಲವೇ ?, (ಆದ್ದರಿಂದ) **गिरा अलम्** = ಮಾತು ಸಾಕು, **इति** = ಎಂದು, **मौनम्** = ಮೌನವನ್ನು, **आस्थितम्** = ಆಶ್ರಯಿಸಿರುವ, (ಕುದುರೆಯನ್ನು ನಳನು, ಆರುರೋಹ=ಏರಿದನು).

ವಿವರಣೆ : ಕಂಪಿಸುತ್ತಿರುವ ಕುದುರೆಯ ತುಟಿ ಅಥವಾ ಮೂಗನ್ನು ನೋಡಿದಾಗ, ತನ್ನ ಶಕ್ತಿ-ಸಾಮರ್ಥ್ಯ-ವೇಗಗಳನ್ನು ನಳನಿಗೆ ಹೇಳಲು ಆ ಕುದುರೆಯು ಮುಂದಾಗುತ್ತಿದೆ ಎಂದು ಅನಿಸುತ್ತಿತ್ತು. ಆದರೆ ಕುದುರೆಯು ಸದಾ ಮೌನವಾಗಿಯೇ ಇದ್ದುದರಿಂದ, ನಳನಿಗೆ ಎಲ್ಲವೂ ತಿಳಿದಿರುವಾಗ ನಾನು ಯಾಕೆ ಹೇಳಲಿ ಎಂದು ಅದು ಸುಮ್ಮನಾಗಿದೆ ಎಂದು ಅನಿಸುತ್ತಿತ್ತು. ಅಂತಹ ಕುದುರೆಯನ್ನು ನಳನು ಏರಿ ಉದ್ಯಾನವನದ ಕಡೆಗೆ ಸಂಚಾರಕ್ಕೆ ಹೊರಟನು. ಗಿರಾ ಅಲಮ್ - ಎಂಬಲ್ಲಿ ಗಮ್ಯಮಾನಾಪಿ ಕ್ರಿಯಾ ಕಾರಕವಿಭಕ್ತೌ ಪ್ರಯೋಜಿಕಾ ಎಂಬ ವಾರ್ತಿಕದಿಂದ ಗಿರಾ ಎಂಬಲ್ಲಿ ತೃತೀಯಾವಿಭಕ್ತಿಯು ಬಳಕೆಯಾಗಿದೆ.

महारथस्याध्वनि चक्रवर्तिनः

परानपेक्षोद्वहनाद्यशःसितम् ॥

रदावदातांशुमिषादनीदृशाम्

हसन्तमन्तर्बलमर्वतां रवेः ॥६१॥

61. ಅನ್ವಯ : **महारथस्य** = ಮಹಾರಥನಾದ, **चक्रवर्तिनः** = ಚಕ್ರವರ್ತಿಯ (ನಳನ), **अध्वनि** = ಮಾರ್ಗದಲ್ಲಿ (ಉದ್ಯಾನಕ್ಕೆ ಹೊರಟಿರುವ ಮಾರ್ಗದಲ್ಲಿ), **परानपेक्षोद्वहनात्** = ಬೇರೆ ಕುದುರೆಗಳ ಸಹಾಯವಿಲ್ಲದೆ (ತಾನು ಮಾತ್ರ) ಹೊತ್ತುಕೊಂಡಿದ್ದರಿಂದ, (ಗಳಿಸಿದ) **यशःसितम्** = ಯಶಸ್ಸಿನಿಂದ ಬಿಳಿಯಾಗಿರುವಂತಹ, (ಮತ್ತು) **अनीदृशाम्** = ಇಂತಹ ಯಶಸ್ಸು ಇಲ್ಲದಿರುವ,

रवेः = ಸೂರ್ಯನ, **अर्वताम्** = ಕುದುರೆಗಳ, **अन्तर्बलम्** = ಅಂತಃಸತ್ತ್ವವನ್ನು, **रदावदातांशुमिषात्** = ಹಲ್ಲುಗಳ ಬಿಳುಪಾದ ಕಾಂತಿಯ ನೆಪದಿಂದ, **हसन्तम्** = ನಗುತ್ತಿರುವಂತಹ, (ನಕ್ಕು ತಮಾಷೆ ಮಾಡುತ್ತಿರುವಂತಹ), (ಕುದುರೆಯನ್ನು ನಳನು, ಆರುರೋಹ = ಏರಿದನು).

ವಿವರಣೆ : ಮಹಾರಾಜರ ಅಥವಾ ಚಕ್ರವರ್ತಿಗಳ ರಥಗಳಿಗೆ ಎರಡು ಅಥವಾ ನಾಲ್ಕು ಕುದುರೆಗಳಿರುತ್ತಿದ್ದವು. ಆದರೆ ಇಲ್ಲಿ ಬೇರೆ ಕುದುರೆಗಳ ಸಹಾಯವಿಲ್ಲದೆ, ಇದೊಂದೇ ಕುದುರೆಯು ನಳನ ರಥವನ್ನು ಎಳೆದೊಯ್ಯುತ್ತಿತ್ತು. ನಳನು ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದನು ಎಂಬ ಕಲ್ಪನೆ ಇರುವುದರಿಂದ, ಸೂರ್ಯನೂ ಏಳು ಕುದುರೆಗಳ ರಥದಲ್ಲಿ ಆಕಾಶಮಾರ್ಗದಲ್ಲಿಯೇ ಸಂಚರಿಸುವುದರಿಂದ, ನಳನ ಕುದುರೆಯು ತನ್ನ ಮಂದಹಾಸದ ಮೂಲಕ ಸೂರ್ಯನ ಕುದುರೆಗಳನ್ನು ಗೇಲಿ ಮಾಡಿದಂತೆ ಭಾಸವಾಗುತ್ತಿತ್ತು ಎಂದರ್ಥ. ಅಂತಹ ಕುದುರೆಯನ್ನೇರಿ ನಳನು ಹೊರಟನು ಎಂದರ್ಥ.

ಆತ್ಮಾನಂ ಸಾರಥಿಂ ಚಾಶ್ವಂ ರಕ್ಷನ್ ಯುದ್ಧ್ಯೇತ ಯೋ ನರಃ |
ಸ ಮಹಾರಥಸಂಜ್ಞಃ ಸ್ಯಾದಿತ್ಯಾಹುರ್ನೀತಿಕೋವಿದಾಃ ||

ಅಂದರೆ ತನ್ನ ಕುದುರೆಯನ್ನು ಮತ್ತು ಸಾರಥಿಯನ್ನು ರಕ್ಷಣೆ ಮಾಡುತ್ತಾ ಶತ್ರುಗಳೊಂದಿಗೆ ಕಾದಾಡುವವನು ಮಹಾರಥ ಎನಿಸಿಕೊಳ್ಳುತ್ತಾನೆ. ಇನ್ನು ಕೆಲವರ ಪ್ರಕಾರ -

ಏಕೋ ದಶಸಹಸ್ರಾಣಿ ಯೋಧಯೆದ್ಯಸ್ತು ಧನ್ವಿನಾಮ್ |
ಶಸ್ತ್ರಶಾಸ್ತ್ರಪ್ರವೀಣಶ್ಚ ಸ ವೈ ಪ್ರೋಕ್ತೋ ಮಹಾರಥಃ ||

ಅಂದರೆ ಏಕಕಾಲದಲ್ಲಿ ಯಾವ ಮಹಾರಾಜನು ಹತ್ತುಸಾವಿರ ಸೈನಿಕರನ್ನು ತನ್ನ ಕೈಕೆಳಗಿಟ್ಟುಕೊಂಡು ಯುದ್ಧ ಮಾಡಿಸುತ್ತಾನೋ ಮತ್ತು ಶಸ್ತ್ರವಿದ್ಯೆ-ಶಾಸ್ತ್ರವಿದ್ಯೆಗಳಲ್ಲಿ ಪ್ರವೀಣನಾಗಿರುತ್ತಾನೋ ಅವನನ್ನು ಮಹಾರಥ ಎನ್ನುವರು. ಯೋಧಯೇತ್ - ಣಿಜಂತ. ಯುದ್ಧ ಮಾಡಿಸಲು ಸಮರ್ಥ ಎಂದರ್ಥ. ಹರಿಶ್ಚಂದ್ರೋ ನಲೋ ರಾಜಾ ಪುರುಃ ಕುತ್ಸಃ ಪುರೂರವಾಃ | ಸಗರಃ ಕಾರ್ತವೀರ್ಯಶ್ಚ ಷಡೇತೇ ಚಕ್ರವರ್ತಿನಃ || ಅಂದರೆ ಹರಿಶ್ಚಂದ್ರ, ನಳ, ಪುರು, ಕುತ್ಸವಂಶದ ಪುರೂರವ, ಸಗರ ಮತ್ತು ಕಾರ್ತವೀರ್ಯ - ಈ ಆರು ಮಹಾರಾಜರನ್ನು ಚಕ್ರವರ್ತಿಗಳು ಎನ್ನುತ್ತಾರೆ.

सितत्विषश्चञ्चलतामुपेयुषो

मिषेण पुच्छस्य च केसरस्य च ॥
स्फुटं चलच्चामरयुग्मचिह्नकैः
अनिह्नुवानं निजवाजिराजताम् ॥६२॥

62. ಅನ್ವಯ : **सितत्विषः** = ಬಿಳುಪಾದ ಕಾಂತಿಯನ್ನು ಹೊಂದಿರುವ, **च** = ಮತ್ತು, **चञ्चलताम्** = ಚಂಚಲತೆಯನ್ನು, **उपेयुषः** = ಹೊಂದಿರುವ, **पुच्छस्य** = ಬಾಲದ, **च** = ಮತ್ತು, **केसरस्य** = ಕುತ್ತಿಗೆಯಲ್ಲಿರುವ ಕೂದಲುಗಳ, **मिषेण** = ನೆಪದಿಂದ, **चलच्चामरयुग्मचिह्नकैः** = ಬೀಸುತ್ತಿರುವ ಎರಡು ಚಾಮರಗಳೋ ಎಂಬಂತೆ ಚಿಹ್ನೆಯನ್ನು ಹೊಂದಿರುವ, **निजवाजिराजताम्** = ತನ್ನ ಕುದುರೆಯ ರಾಜಲಕ್ಷಣವನ್ನು (ಕುದುರೆಗಳ ರಾಜ ಎಂಬ ಭಾವವನ್ನು), **स्फुटम्** = ಸ್ಪಷ್ಟವಾಗಿ, **अनिह्नुवानम्** = ಪ್ರಕಟಪಡಿಸುತ್ತಿರುವಂತಹ (ಮುಚ್ಚಿಡದೇ ಇರುತ್ತಿದ್ದಂತಹ), (ಕುದುರೆಯನ್ನು ನಳನು, ಆರುರೋಹ=ಏರಿದನು).

ವಿವರಣೆ : ಸ್ಫುಟಮ್ ಎಂದು ನಪುಂಸಕವಾಗಿ ಬಳಸಿದರೆ, ಪ್ರಕಟಪಡಿಸುವುದು ಎಂಬ ಕ್ರಿಯೆಗೆ ವಿಶೇಷಣವೆಂದು ತಿಳಿಯಬೇಕು. ಸ್ಫುಟಾಮ್ ಎಂಬ ಸ್ತ್ರೀಲಿಂಗವನ್ನು ಬಳಸುವುದಾದರೆ ನಿಜವಾಜಿರಾಜತಾಮ್ ಎಂಬ ಸ್ತ್ರೀಲಿಂಗಕ್ಕೆ ವಿಶೇಷಣವೆಂದು ತಿಳಿಯಬೇಕು. ಎರಡೂ ಪ್ರಯೋಗಗಳು ಪುಸ್ತಕಗಳಲ್ಲಿ ಕಂಡುಬರುತ್ತವೆ. ನಳನ ಕುದುರೆಯು ಎಲ್ಲ ಕುದುರೆಗಳಿಗೂ ರಾಜನೋ ಎಂಬಂತೆ ಇತ್ತು. ಅಂದರೆ ರಾಜನ ಅಥವಾ ರಾಜಕುದುರೆಯ ಎಲ್ಲ ಲಕ್ಷಣಗಳೂ ನಳನ ಕುದುರೆಗೆ ಇದ್ದವು. ಅಂತಹ ಕುದುರೆಯನ್ನು ಏರಿ ನಳನು ಉದ್ಯಾನವನಕ್ಕೆ ಹೊರಟನು ಎಂದರ್ಥ.

अपि द्विजिह्वाभ्यवहारपौरुषे
मुखानुषक्तायतवल्गुवल्गया ॥
उपेयिवांसं प्रतिमल्लतां रय-
स्मये जितस्य प्रसभं गरुत्मतः ॥६३॥

63. ಅನ್ವಯ : **मुखानुषक्तायतवल्गुवल्गया** = (ಕುದುರೆಯ) ಮುಖದಲ್ಲಿ ಸೇರಿಕೊಂಡಿರುವ ಉದ್ದವಾದ ಮತ್ತು ರಮಣೀಯವಾದ ಹಗ್ಗದ ನೆಪದಿಂದ, **रयस्मये** = ವೇಗವನ್ನು ಬಿಂಬಿಸುವ (ಅಹಂಕಾರದ) ನಗುವಿನಲ್ಲಿ, **प्रसभम्** = ಬಲಾತ್ಕಾರದಿಂದ, **जितस्य** = ಗೆದ್ದಿರುವ, **गरुत्मतः** = ಗರುಡನ, **द्विजिह्वाभ्यवहारपौरुषे अपि** = ವಿಷಮಯವಾದ ಸರ್ಪಗಳನ್ನು ತಿನ್ನುವುದು ಎಂಬ ಪರಾಕ್ರಮದ ವಿಷಯದಲ್ಲಿಯೂ ಕೂಡ, **प्रतिमल्लताम्** = ಪ್ರತಿಸ್ಪರ್ಧಿಭಾವವನ್ನು

(ಎದುರಾಳಿತನವನ್ನು), **उपेयिवांसम्** = ಹೊಂದಿರುವಂತಹ, (ಕುದುರೆಯನ್ನು ನಳನು, ಆರುರೋಹ=ಏರಿದನು).

ವಿವರಣೆ : ಉಪೇಯಿವಾನನಾಶ್ವಾನನೂಚಾನಶ್ಚ - ಸೂತ್ರದಿಂದ ನಿಪಾತನ ಮಾಡಿ, ಉಪೇಯಿವಾನ್ ಎಂಬ ರೂಪವನ್ನು ಸಿದ್ಧಪಡಿಸಲಾಗಿದೆ. ಉಪೇಯಿವಾನ್-ಉಪೇಯಿವಾಂಸೌ-ಉಪೇಯಿವಾಂಸಃ.

*** द्वे जिह्वे यस्य सः = द्विजिह्वः । सङ्ख्यापूर्वपदः बहुव्रीहिः । अनेकमन्यपदार्थे ।**

*** अभ्यवहारे पौरुषम् = अभ्यवहारपौरुषम् । तस्मिन् । सप्तमीतत्पुरुषः समासः । सप्तमी शौण्डैः ।**

स सिन्धुजं शीतमहःसहोदरम्
हरन्तमुच्चैःश्रवसः श्रियं हयम् ॥
जिताखिलक्ष्माभृदनल्पलोचनः
तमारुरोह क्षितिपाकशासनः ॥६४॥

64. ಅನ್ವಯ : **जिताखिलक्ष्माभृत्** = ಎಲ್ಲ ಮಹಾರಾಜರನ್ನು ಗೆದ್ದಿರುವಂತಹ, **अनल्पलोचनः** = ವಿಶಾಲಾಕ್ಷನಾದ (ದೊಡ್ಡ ಕಣ್ಣುಳ್ಳಂತಹ), **क्षितिपाकशासनः** = ಭೂಮಂಡಲದ ಇಂದ್ರನಾಗಿರುವ (ಒಡೆಯನಾಗಿರುವ), **सः** = ಅವನು (ನಳನು), **सिन्धुजम्** = ಸಿಂಧು ದೇಶದಲ್ಲಿ ಹುಟ್ಟಿರುವಂತಹ, **शीतमहःसहोदरम्** = ಚಂದ್ರನ ಸಹೋದರನಾದ. **उच्चैःश्रवसः** = ಇಂದ್ರನ ಕುದುರೆಯ, **श्रियम्** = ಕಾಂತಿಯನ್ನು, **हरन्तम्** = ಅಪಹರಿಸುತ್ತಿರುವ (ಮೀರುತ್ತಿರುವ), **तम्** = ಆ, **हयम्** = ಕುದುರೆಯನ್ನು, **आरुरोह** = ಏರಿದನು.

ವಿವರಣೆ : ಕ್ಷಿತಿಪಾಕಶಾಸನಃ = ಪಾಕಶಾಸನ ಅಂದರೆ ಇಂದ್ರ. ಭೂಮಿಯ ಒಡೆಯ, ರಾಜ ಎಂಬುದು ಒಂದು ಅರ್ಥ. ಪಾಕಂ ಶಾಸ್ತಿ ಅಂದರೆ ಅಡುಗೆಯ ವಿಧಾನವನ್ನು ಮಾಡುತ್ತಾನೆ ಅಥವಾ ತಿಳಿಸಿಕೊಡುತ್ತಾನೆ ಎಂದರ್ಥ. ಭೂಮಿಯಲ್ಲಿ ಅಡುಗೆಯ ವಿಧಾನವನ್ನು ತಿಳಿಸಿದವನು ಎಂಬುದು ಎರಡನೆಯ ಅರ್ಥ. ಆದ್ದರಿಂದಲೇ ಇಂದಿಗೂ ಜಗತ್ತಿನಲ್ಲಿ ತುಂಬ ಚೆನ್ನಾಗಿ ಅಡುಗೆಯನ್ನು ಮಾಡಿದಾಗ, ನಳಪಾಕ ಎಂದು ಹೊಗಳುತ್ತಾರೆ. ಸಿಂಧುಜ = ಸಿಂಧುದೇಶದಲ್ಲಿ ಹುಟ್ಟಿದವನು (ಹುಟ್ಟಿದ ಕುದುರೆ) ಎಂಬುದು ಒಂದು ಅರ್ಥ. ಸಮುದ್ರಮಥನವನ್ನು ಮಾಡುವಾಗ ಸ್ವರ್ಗದಲ್ಲಿ ಮೊದಲು ಇದ್ದ ಎಲ್ಲ ವಸ್ತುಗಳೂ ಮೇಲಕ್ಕೆ ಬಂದವು. ಉಚ್ಚೈಃಶ್ರವಾಃ ಎಂಬ ಇಂದ್ರನ

ಕುದುರೆಯೂ ಮೇಲಕ್ಕೆ ಬಂದಿತು. ಅಂದರೆ ಸಮುದ್ರದಲ್ಲಿ ಹುಟ್ಟಿದ್ದು ಎಂದರ್ಥ. ನಳನ ಕುದುರೆಯೂ ಇಂದ್ರನ ಕುದುರೆಯಂತೆಯೇ ಇರುವುದರಿಂದ ಇದೂ ಸಮುದ್ರದಲ್ಲಿ ಹುಟ್ಟಿದ್ದಾಗಿದೆ ಎಂಬುದು ಎರಡನೆಯ ಅರ್ಥ. ಚಂದ್ರ ಮತ್ತು ಕುದುರೆ ಇವೆರಡೂ ಸಮುದ್ರದಲ್ಲಿ ಹುಟ್ಟಿರುವುದರಿಂದ ಅಣ್ಣತಮ್ಮಂದಿರಾಗುತ್ತಾರೆ, ಎಂಬುದು ಇನ್ನೊಂದು ಕಲ್ಪನೆ. ಆರುರೋಹ = ಆ-ಉಪಸರ್ಗ + ರುಹ-ಬೀಜಜನ್ಮನಿ (ಬೀಜಸಂತಾನೇ), ಲಿಟ್-ಲಕಾರ.

निजा मयूखा इव तीक्ष्णदीधितिम्
स्फुटारविन्दाङ्कितपाणिपङ्कजम् ॥
तमश्ववारा जवनाश्वयायिनम्
प्रकाशरूपा मनुजेशमन्वयुः ॥६५॥

65. ಅನ್ವಯ : **तीक्ष्णदीधितिम्** = ಸೂರ್ಯನನ್ನು, **मयूखाः इव** = (ಸೂರ್ಯನ) ಕಿರಣಗಳೋ ಎಂಬಂತೆ, **निजाः** = ತನ್ನ, **प्रकाशरूपाः** = ಬೆಳಗುತ್ತಿರುವ, **अश्ववाराः** = ಕುದುರೆಸವಾರರು, **स्फुटारविन्दाङ्कितपाणिपङ्कजम्** = ಸ್ಪಷ್ಟವಾದ ಪದ್ಮದ ಚಿಹ್ನೆ ಇರುವ ಕೈಕಮಲಗಳನ್ನು ಹೊಂದಿರುವ, **जवनाश्वयायिनम्** = ವೇಗವಾಗಿ ಓಡುವ ಕುದುರೆಯ ಮೇಲೆ ಸವಾರಿ ಮಾಡುವ, **मनुजेशम्** = ರಾಜನಾದ, **तम्** = ಅವನನ್ನು (ನಳನನ್ನು), **अन्वयुः** = ಹಿಂಬಾಲಿಸಿದರು.

ವಿವರಣೆ : ರಾಜನು ಹೋಗುವಾಗ ಅವನ ಪರಿವಾರವೂ ಜೊತೆಗಿರುತ್ತದೆ. ಈ ಕಾರಣದಿಂದ ಉದ್ಯಾನಕ್ಕೆ ಹೊರಟಿರುವ ನಳನನ್ನು ಉಳಿದ ಕುದುರೆ ಸವಾರರು ಹಿಂಬಾಲಿಸಿದರು. ಸೂರ್ಯನ ಕಿರಣಗಳು ಹೇಗೆ ಯಾವಾಗಲೂ ಸೂರ್ಯನ ಜೊತೆಗೆ ಇರುವವೋ, ಹಾಗೆಯೇ ನಳನ ಸೇವಕರು ನಳನನ್ನು ಹಿಂಬಾಲಿಸುತ್ತಾ ಅವನ ಜೊತೆಗೆ ಇದ್ದರು ಎಂದರ್ಥ.

* ಅನ್ವಯುಃ = ಅನು-ಉಪಸರ್ಗ + ಯಾ-ಪ್ರಾಪಣೇ, ಲಙ್-ಲಕಾರ.

*** निजाः + मयूखाः = निजा मयूखाः । यादेशसन्धिः । भोभगो अघो अपूर्वस्य योऽशि ।**
यलोपसन्धिः । लोपः शाकल्यस्य ।

*** मयूखाः + इव = मयूखा इव । । यादेशसन्धिः । भोभगो अघो अपूर्वस्य योऽशि ।**
यलोपसन्धिः । लोपः शाकल्यस्य ।

*** पाणिः एव पङ्कजम् = पाणिपङ्कजम् । अवधारणापूर्वपदः कर्मधारयः ।**

चलन्नलङ्कृत्य महारयं हयम्

स्ववाहवाहोचितवेषपेशलः ॥
प्रमोदनिःस्पन्दतराक्षिपक्ष्मभिः
व्यलोकि लोकैर्नगरालयैर्नलः ॥६६॥

66. ಅನ್ವಯ : **स्ववाहवाहोचितवेषपेशलः** = ತನ್ನ ಕುದುರೆಯ ಮೇಲೆ ಸವಾರಿ ಮಾಡುವವನಿಗೆ ಯೋಗ್ಯವಾದ ವೇಷವನ್ನು ಧರಿಸಿ ಸುಂದರವಾಗಿರುವ, **नलः** = ನಳ ಮಹಾರಾಜನು, **महारयम्** = ಬಹಳ ವೇಗವುಳ್ಳ, **हयम्** = ಕುದುರೆಯನ್ನು, **अलङ्कृत्य** = ಅಲಂಕರಿಸಿ, **चलन्** = ಹೋಗುತ್ತಿರುವವನಾಗಿ, **प्रमोदनिःस्पन्दतराक्षिपक्ष्मभिः** = ಬಹಳವಾದ ಸಂತೋಷದ ಕಾರಣದಿಂದ ನಿಶ್ಚಲವಾದ (ಮುಚ್ಚದೇ ಇರುವ) ಕಣ್ಣಿನ ರೆಪ್ಪೆಗಳುಳ್ಳ, **नगरालयैः** = ನಗರವಾಸಿಗಳಾಗಿರುವ, **लोकैः** = ಜನರಿಂದ **व्यलोकि** = ನೋಡಲ್ಪಟ್ಟನು.

ವಿವರಣೆ : ಅಲಂಕೃತ್ಯ ಎಂಬುದಕ್ಕೆ ಎರಡು ಅರ್ಥಗಳು. ಕುದುರೆಯನ್ನು ಅಲಂಕರಿಸಿ, ಅದರ ಮೇಲೆ ಕುಳಿತು ಹೋದನು ಎಂಬುದು ಒಂದು ಅರ್ಥ. ತಾನು ಅದರ ಮೇಲೆ ಕುಳಿತುಕೊಳ್ಳುವುದರಿಂದಲೇ ಕುದುರೆಯು ಅಲಂಕರಿಸಲ್ಪಟ್ಟಿತು ಎಂಬುದು ಇನ್ನೊಂದು ಅರ್ಥ. ಅಂದರೆ ಅದರ ಮೇಲೆ ಕುಳಿತುಕೊಳ್ಳುವುದರ ಮೂಲಕ, ಕುದುರೆಯನ್ನು ಅಲಂಕರಿಸಿದವನಾಗಿ ಹೋದನು ಎಂಬುದು ತಾತ್ಪರ್ಯ.

ವ್ಯಲೋಕಿ = ವಿ-ಉಪಸರ್ಗ + ಲೋಕೃ-ದರ್ಶನೇ, ಕರ್ಮಣಿ ಲುಙ್-ಲಕಾರ.

*** प्रकृष्टः मोदः = प्रमोदः । प्रादिसमासः । कुगतिप्रादयः ।**

*** अलं कृत्वा = अलङ्कृत्य । भूषणेऽलम् । गतिसमासः । कुगतिप्रादयः ।**

क्षणादथैष क्षणदापतिप्रभः
प्रभञ्जनाध्येयजवेन वाजिना ॥
सहैव ताभिर्जनदृष्टिवृष्टिभिः
बहिः पुरोऽभूत्पुरुहूतपौरुषः ॥६७॥

67. ಅನ್ವಯ : **अथ** = ಆಮೇಲೆ, **क्षणदापतिप्रभः** = ಚಂದ್ರನಂತೆ ಕಾಂತಿಯುಳ್ಳಂತಹ, **पुरुहूतपौरुषः** = ಇಂದ್ರನಂತೆ ಪರಾಕ್ರಮವುಳ್ಳಂತಹ, **एषः** = ಇವನು (ನಳನು), **प्रभञ्जनाध्येयजवेन** = ವಾಯುವಿನಿಂದಲೂ ಕಲಿಯಬೇಕಾಗಿರುವ ವೇಗವುಳ್ಳಂತಹ, **वाजिना** = ಕುದುರೆಯ ಮೂಲಕ, **क्षणात्** = ಕ್ಷಣಮಾತ್ರದಲ್ಲಿ, **ताभिः** = ಆ, **जनदृष्टिवृष्टिभिः** = ಜನರ

ನೋಟವೆಂಬ ಮಳೆಗಳ, **सह एव** = ಜೊತೆಗೆಯೇ, **पुरः** = ನಗರದ, **बहिः** = ಹೊರಗೆ, **अभूत्** = ಇದ್ದನು.

ವಿವರಣೆ : ಜನರು ನೋಡುನೋಡುತ್ತಿದ್ದಂತೆಯೇ, ವಾಯುವಿಗಿಂತಲೂ ವೇಗವಾಗಿ ಓಡುವ ಕುದುರೆಯ ಮೇಲೆ ಕುಳಿತು ನಳನು ನಗರದ ಹೊರಗೆ ಹೋದನು.

*** पुरुहूतस्य पौरुषः इव पौरुषः यस्य सः = पुरुहूतपौरुषः । उपमानोत्तरपदः बहुव्रीहिः समासः । अनेकमन्यपदार्थे ।**

*** पुरः = पञ्चमीविभक्तिः । एकवचनम् । पुर्-शब्दः ।**

ततः प्रतीच्छ प्रहरेति भाषिणी
परस्परोल्लासितशल्यपल्लवे ॥
मृषा मृधं सादिबले कुतूहलात्
नलस्य नासीरगते वितेनतुः ॥६८॥

68. ಅನ್ವಯ : **ततः** = ಆಮೇಲೆ, **प्रतीच्छ** = ತೆಗೆದುಕೊ, **प्रहर** = ಹೊಡೆಯು (ಕೊಲ್ಲು), **इति** = ಎಂಬುದಾಗಿ, **भाषिणी** = ಹೇಳುತ್ತಿರುವಂತಹ, **परस्परोल्लासितशल्यपल्लवे** = ಅನ್ಯೋನ್ಯವಾಗಿ ಉಲ್ಲಾಸಗೊಂಡ (ಶೋಭಿಸುತ್ತಿರುವ) ತೋಮರವೆಂಬ (ಗಡಾರಿ) ಆಯುಧದ ತುದಿಗಳಿರುವ, **नलस्य** = ನಳನ, **नासीरगते** = ಸೇನಾಮುಖದಲ್ಲಿ ಇರುವ, **सादिबले** = ಕುದುರೆಯ ಸೈನ್ಯಗಳು, **कुतूहलात्** = ಕುತೂಹಲದಿಂದ, **मृषा** = ಸುಮ್ಮನೆ (ವಿನೋದಕ್ಕೋಸ್ಕರವಾಗಿ), **मृधम्** = ಯುದ್ಧವನ್ನು, **वितेनतुः** = ಮಾಡಿದವು.

ವಿವರಣೆ : ನಳನ ಸೈನ್ಯದಲ್ಲಿದ್ದ ಅಶ್ವಾರೋಹಿ ಸೈನಿಕರು ಎರಡು ಪಂಗಡಗಳಾಗಿ ರೂಪುಗೊಂಡು, ಪರಾಕ್ರಮದ ಪ್ರದರ್ಶನಕ್ಕೋಸ್ಕರವಾಗಿ ಸಮರಾಭ್ಯಾಸವನ್ನು ಮಾಡಿದರು.

*** प्रहर । हृञ् - हरणे । विध्यादौ लोट्-लकारः ।** ಹರ - ಅಂದರೆ ಒಯ್ಯು, ಕದ್ದೊಯ್ಯು ಎಂಬ ಅರ್ಥವಿದೆ. ಉಪಸರ್ಗವು ಸೇರಿದಾಗ ಬೇರೆ ಬೇರೆ ಅರ್ಥಗಳು ಉಂಟಾಗುತ್ತವೆ. ಪ್ರಹಾರ = ಹೊಡೆಯುವುದು, ಆಹಾರ = ಊಟ ಮತ್ತು ತರುವುದು, ಸಂಹಾರ = ಕೊಲ್ಲುವುದು, ವಿಹಾರ = ಸುತ್ತಾಡುವುದು, ಪರಿಹಾರ = ಬಗೆಹರಿಸುವುದು.

धात्वर्थं बाधते कश्चित् कश्चित्तमनुवर्तते ।
तमेव विशिनष्ट्यन्यः उपसर्गगतिस्त्रिधा ॥

उपसर्गेण धात्वर्थो बलादन्यत्र नीयते ।
प्रहाराहारसंहारविहारपरिहारवत् ॥
*** उत् + लासितः = उल्लासितः । परसवर्णसन्धिः । तोर्लि-८-४-६०.**

प्रयातुमस्माकमियं कियत्पदम्
धरा तदम्भोधिरपि स्थलायताम् ॥
इतीव वाहैर्निजवेगदर्पितैः
पयोधिरोधक्षममुद्धतं रजः ॥६९॥

69. ಅನ್ವಯ : **इयम्** = ಈ, **धरा** = ಭೂಮಿಯು, **अस्माकम्** = (ಓಡುತ್ತಿರುವ) ನಮಗೆ (ಕುದುರೆಗಳಿಗೆ), **प्रयातुम्** = ಹೋಗಲು (ಪೂರ್ತಿಯಾಗಿ ಸುತ್ತಾಡಲು), **कियत्पदम्** = ಎಷ್ಟು ಹೆಜ್ಜೆಗಳುಳ್ಳದ್ದು ? **तत्** = ಆದ್ದರಿಂದ, **अम्भोधिः अपि** = ಸಮುದ್ರವೂ ಕೂಡ, **स्थलायताम्** = ಸ್ಥಳವಾದದ್ದಾಗಲಿ **इति इव** = ಎಂಬಂತೆ, **निजवेगदर्पितैः** = ತಮ್ಮ ವೇಗಗಳಿಂದ ಅಹಂಕಾರವುಳ್ಳ, **वाहैः** = ಕುದುರೆಗಳಿಂದ, **पयोधिरोधक्षमम्** = ಸಮುದ್ರವನ್ನು ತಡೆಯುವಷ್ಟು (ಮುಚ್ಚುವಷ್ಟು), **रजः** = ಧೂಳಿಯು, **उद्धतम्** = ಮೇಲೆದ್ದಿತು.

ವಿವರಣೆ : ನಾವು ಓಡಲು ಪ್ರಾರಂಭಿಸಿದರೆ ಭೂಮಿಯೇ ಸಾಕಾಗುವುದಿಲ್ಲ. ಸಮುದ್ರವನ್ನೂ ಭೂಮಿಯನ್ನಾಗಿ ಮಾಡಬೇಕಾಗುತ್ತದೆ ಎಂಬ ದರ್ಪದಿಂದಲೋ ಎಂಬಂತೆ ಭಯಂಕರವಾದ ಧೂಳನ್ನು ಎಬ್ಬಿಸುತ್ತಾ, ನಳನ ಸೈನ್ಯದ ಕುದುರೆಗಳು ಓಡಿದವು ಎಂದರ್ಥ. ಸ್ಥಲಾಯತಾಮ್ = ಸ್ಥಲಮಿವ ಆಚರತಿ, ಸ್ಥಲಾಯತೇ, ಲೋಟ್-ಲಕಾರ. ಸ್ಥಳದಂತೆ ಆಚರಿಸಲಿ ಎಂದರ್ಥ.

हरेर्यदक्रामि पदैककेन खम्
पदैश्चतुर्भिः क्रमणेऽपि तस्य नः ॥
त्रपा हरीणामिति नम्रिताननैः
न्यवर्ति तैरर्धनभःकृतक्रमैः ॥७०॥

70. ಅನ್ವಯ : **यत्** = ಯಾವ, **खम्** = ಆಕಾಶವು, **हरेः** = ವಿಷ್ಣುವಿನ, **एककेन** = ಒಂದೇ, **पदा** = ಹೆಜ್ಜೆಯಿಂದ, **अक्रामि** = ಆಕ್ರಮಣ ಮಾಡಿಸಲ್ಪಟ್ಟಿತೋ, **तस्य** = ಅದರ (ಆ ಆಕಾಶದಲ್ಲಿ), **चतुर्भिः** = ನಾಲ್ಕು, **पदैः** = ಹೆಜ್ಜೆಗಳಿಂದ, **क्रमणे अपि** = ಸುತ್ತಾಡಿದರೂ ಕೂಡ, **हरीणाम्** = ಕುದುರೆಗಳಾಗಿರುವ, **नः** = ನಮಗೆ, **त्रपा** = ನಾಚಿಕೆ (ಅವಮಾನ), **इति** = ಎಂದು, **नम्रिताननैः** =

ತಲೆಬಾಗಿಸಿರುವ, **अर्धनभःकृतक्रमैः** = ಅರ್ಧ ಆಕಾಶವನ್ನು ಸುತ್ತಾಡಿರುವ, **तैः** = ಅವುಗಳಿಂದ (ಕುದುರೆಗಳಿಂದ), **न्यवर्ति** = ಹಿಂತಿರುಗಲ್ಪಟ್ಟಿತು (ಹಿಂತಿರುಗೋಣವಾಯಿತು).

ವಿವರಣೆ : ಆಕಾಶದಲ್ಲಿಯೂ ಓಡುವ ಸಾಮರ್ಥ್ಯವಿದೆಯೆಂದು ನಳನ ಕುದುರೆಗಳು ಆಕಾಶಕ್ಕೆ ಜಿಗಿದಿವೆ. ಆದರೆ ವಿಷ್ಣುವು ವಾಮನಾವತಾರವನ್ನು ತಳೆದ ಸಂದರ್ಭದಲ್ಲಿ ಆ ಆಕಾಶವನ್ನು ಒಂದೇ ಹೆಜ್ಜೆಯಿಂದ ಪೂರ್ತಿಯಾಗಿ ಆಕ್ರಮಿಸಿದ್ದನು. ಹೀಗಿರುವಾಗ ನಾವು (ಕುದುರೆಗಳು) ನಾಲ್ಕು ಹೆಜ್ಜೆ ಆಕಾಶದಲ್ಲಿಟ್ಟರೂ ನಮಗೇ ಅವಮಾನವೆಂದು ಭಾವಿಸಿ, ಓಡುತ್ತಿದ್ದ ಕುದುರೆಗಳು ಅರ್ಧ ಆಕಾಶದಿಂದ (ಆಕಾಶದ ಮಧ್ಯದಿಂದ) ಹಿಂತಿರುಗಿ ಭೂಮಿಗೆ ಬಂದವು. ನ್ಯವರ್ತಿ = ನಿ-ಉಪಸರ್ಗ + ವೃತು-ವರ್ತನೇ, ಭಾವೇಪ್ರಯೋಗ, ಲುಙ್-ಲಕಾರ.

*** अर्धं नभसः । अर्धनभः । प्रथमातत्पुरुषः । अर्धं नपुंसकम् ।**

*** अक्रामि । हेतुमति च । णिच् । कर्मणि लुङ् । नोदात्तोपदेशेति सूत्रं णिजन्ते न प्रवर्तते, णिजन्तस्य अन्तोदात्तत्वात् उदात्तोपदेशत्वाभावः ।**

चमूचरास्तस्य नृपस्य सादिनो
जिनोक्तिषु श्राद्धतयेव सैन्धवाः ॥
विहारदेशं तमवाप्य मण्डलीम्
अकारयन्भूरितुरङ्गमानपि ॥७१॥

71. ಅನ್ವಯ : **सैन्धवाः** = ಸಿಂಧುದೇಶದಲ್ಲಿ ಹುಟ್ಟಿದ ಬೌದ್ಧರು, **जिनोक्तिषु** = ಬುದ್ಧನ ಮಾತುಗಳಲ್ಲಿ, **श्राद्धतया इव** = ಶ್ರದ್ಧೆಯುಳ್ಳ ಮನೋಭಾವದಿಂದಲೋ ಎಂಬಂತೆ, **तस्य** = ಆ, **नृपस्य** = ನಳನ, **सादिनः** = ಕುದುರೆಸವಾರರಾಗಿರುವ, **चमूचराः** = ಸೈನಿಕರು, **तम्** = ಆ, **विहारदेशम्** = (ನಳನು) ವಿಹರಿಸಬೇಕಾಗಿರುವ ಸ್ಥಳವನ್ನು, **अवाप्य** = ತಲುಪಿ, **तुरङ्गमान् अपि** = ಕುದುರೆಗಳನ್ನೂ ಕೂಡ, **भूरि** = ಚೆನ್ನಾಗಿ, **मण्डलीम्** = ವರ್ತುಲಾಕಾರವಾಗಿ, **अकारयन्** = ಮಾಡಿಸಿದರು.

ವಿವರಣೆ : ಮಂಡಲೀಕರಣ ಎಂಬುದು ಬೌದ್ಧರ ಸಂಪ್ರದಾಯವಾಗಿದೆ. ವಿಶೇಷವಾಗಿ ಸಿಂಧುದೇಶದಲ್ಲಿ ಹುಟ್ಟಿದ ಬೌದ್ಧರು ಬೌದ್ಧ ವಿಹಾರಗಳಿಗೆ (ಬೌದ್ಧ ಮಂದಿರಗಳಿಗೆ) ಹೋಗಿ, ಅಕ್ಕಿ ಮೊದಲಾದ ಏಳು ಧಾನ್ಯಗಳನ್ನು ವರ್ತುಲಾಕಾರವಾಗಿ ಜೋಡಿಸಿ, ಅದರ ಸುತ್ತಲೂ ವರ್ತುಲಾಕಾರವಾಗಿ ಕುಳಿತು, ಮಂಡಲೀಕರಣವನ್ನು ಮಾಡುತ್ತಾರೆ. ಹಾಗೆಯೇ ಸಿಂಧುದೇಶದಲ್ಲಿ

ಹುಟ್ಟಿರುವ ಈ ನಳನ ಅಶ್ವಾರೋಹಿ ಸೈನಿಕರು, ನಳನು ವಿಹರಿಸಬೇಕಾಗಿರುವ ಉದ್ಯಾನಕ್ಕೆ ಹೋಗಿ, ಆ ಕುದುರೆಗಳನ್ನು ವರ್ತುಲಾಕಾರವಾಗಿ ನಿಲ್ಲಿಸಿದರು ಎಂದರ್ಥ.

द्विषद्भिरेवास्य विलङ्घिता दिशो

यशोभिरेवाब्धिरकारि गोष्पदम् ॥

इतीव धारामवधीर्य मण्डली-

क्रियाश्रियामण्डि तुरङ्गमैः स्थली ॥७२॥

72. ಅನ್ವಯ : **अस्य** = ನಳನ, **द्विषद्भिः एव** = ಶತ್ರುಗಳಿಂದಲೇ, **दिशः** = ದಿಕ್ಕುಗಳು, **विलङ्घिताः** = ದಾಟಲ್ಪಟ್ಟವು. **यशोभिः एव** = ಯಶಸ್ಸುಗಳಿಂದಲೇ, **अब्धिः** = ಸಮುದ್ರವು, **गोष्पदम्** = ಗೋಷ್ಪದವಾಗಿ (ಗೋವುಗಳು ಸುತ್ತಾಡುವಷ್ಟು ಚಿಕ್ಕ ಪ್ರದೇಶವಾಗಿ), **अकारि** = ಮಾಡಲ್ಪಟ್ಟಿತು, **इति इव** = ಎಂಬಂತೆ, **तुरङ्गमैः** = ಕುದುರೆಗಳಿಂದ, **धाराम्** = ಐದು ವಿಧದ ಗತಿವಿಶೇಷಗಳನ್ನು, **अवधीर्य** = ಕಡೆಗಣಿಸಿ, **मण्डली-क्रियाश्रिया** = ಮಂಡಲೀಕರಣವೆಂಬುದರ ಶೋಭೆಯಿಂದ, **स्थली** = ಸ್ಥಳವು, **अमण्डि** = ಶೋಭಿಸಲ್ಪಟ್ಟಿತು.

ವಿವರಣೆ : ದ್ವಿಷೋSಮಿತ್ರೇ - ಸೂತ್ರದಿಂದ ಶತ್ರು ಎಂಬ ಅರ್ಥದಲ್ಲಿ ಶತೃ-ಪ್ರತ್ಯಯ ಬಳಕೆಯಾಗಿದೆ. ದ್ವಿಷನ್ ದ್ವಿಷಂತೌ ದ್ವಿಷಂತಃ. ಧಾರಾ - ಆಸ್ಕಂದಿತಂ ಧೌರಿತಕಂ ರೇಚಿತಂ ವಲ್ಗಿತಂ ಪ್ಲುತಮ್ | ಗತಯೋSಮೂಃ ಪಂಚ ಧಾರಾಃ - ಎಂಬುದಾಗಿ ಕುದುರೆಯ ಐದು ವಿಧದ ಓಟಗಳನ್ನು ತಿಳಿಸಿದ್ದಾರೆ. ಆಸ್ಕಂದಿತಮ್ = ಕುಪ್ಪಳಿಸುತ್ತ ಓಡುವುದು, ಧೌರಿತಕಮ್ = ನವಿಲಿನಂತೆ ಒಲೆಯುತ್ತ ಓಡುವುದು, ರೇಚಿತಮ್ = ಮಧ್ಯಮ ವೇಗದಿಂದ ಓಡುವುದು, ವಲ್ಗಿತಮ್ = ದೇಹದ ಮುಂಭಾಗವನ್ನು ಮೇಲೆತ್ತಿ ತಲೆಯನ್ನು ತಗ್ಗಿಸಿ ಓಡುವುದು, ಪ್ಲುತಮ್ = ಅತಿವೇಗವಾಗಿ ಓಡುವುದು. ಈ ಐದು ವಿಧದ ಕುದುರೆಯ ಓಟವನ್ನು ಧಾರಾ ಎನ್ನುವರು. ಈ ಐದು ವಿಧದ ಗತಿಗಳನ್ನು ಬಿಟ್ಟು, ನಳನ ಸೈನ್ಯದ ಕುದುರೆಗಳು ವರ್ತುಲಾಕಾರವಾಗಿ ನಿಂತಿದ್ದವು ಎಂದರ್ಥ. ಗೋಷ್ಪದಮ್ - ಗೋಷ್ಪದಂ ಸೇವಿತಾಸೇವಿತಪ್ರಮಾಣೇಷು - ಸೂತ್ರದಿಂದ ಸುಟ್-ಆಗಮವು ಬಂದು ಗೋಷ್ಪದಮ್ ಎಂಬ ರೂಪವಾಗಿದೆ. ಅವಧೀರ್ಯ - ಧೀರಂ ಕರೋತಿ = ಧೀರಯತಿ, ಗೌರವಿಸುತ್ತಾನೆ ಎಂದರ್ಥ. ಅವ + ಧೀರಯತಿ = ಅನಾದರವನ್ನು ಮಾಡುತ್ತಾನೆ, ಕಡೆಗಣಿಸುತ್ತಾನೆ. ಲ್ಯಬಂತ-ಅವ್ಯಯ.

अचीकरच्चारु हयेन या भ्रमीः

निजातपत्रस्य तलस्थले नलः ॥

मरुत्किमद्यापि न तासु शिक्षते

वितत्य वात्यामयचक्रचङ्कमान् ॥७३॥

73. ಅನ್ವಯ : **नलः** = ನಳನು, **हयेन** = ಕುದುರೆಯ ಮೂಲಕ, **चारु** = ಚೆನ್ನಾಗಿ, **निजातपत्रस्य** = ತನ್ನ ಶ್ವೇತಚ್ಛತ್ರದ, **तलस्थले** = ಬುಡದಲ್ಲಿ, **याः** = ಯಾವ, **भ्रमीः** = ವೃತ್ತಾಕಾರದ ನಡಿಗೆಯನ್ನು, **अचीकरत्** = ಮಾಡಿಸಿದನೋ, **तासु** = ಅವುಗಳಲ್ಲಿ, **मरुत्** = ಗಾಳಿಯು, **अद्य अपि** = ಇಂದು ಕೂಡ, **वात्यामयचक्रचङ्कमान्** = ಬಿರುಗಾಳಿಯಿಂದ ಕೂಡಿದ ಸುಳಿ-ಗಾಳಿಯ ಸುರುಳಿ ಸುತ್ತುವಿಕೆಗಳನ್ನು, **वितत्य** = ಉಂಟುಮಾಡಿ, **न शिक्षते किम्** = ಕಲಿಯುವುದಿಲ್ಲವೇ ?

ವಿವರಣೆ : ನಳನ ಶ್ವೇತಚ್ಛತ್ರದ ಕೆಳಗೆ ವರ್ತುಲಾಕಾರವಾಗಿ ಕುದುರೆಯು ಹೋಗುವಂತೆ, ಗಾಳಿಯೂ ಕೂಡ ಸುಳಿಯನ್ನು ಉಂಟುಮಾಡುತ್ತಾ ಸುತ್ತುಹಾಕಲು ಪ್ರಯತ್ನಿಸುತ್ತದೆ. ಆದರೆ ಗಾಳಿಗೆ (ವಾಯುದೇವನಿಗೆ) ಈವರೆಗೂ ಕುದುರೆಯಂತೆ ಸುರುಳಿ ಸುತ್ತಲು ಸಾಧ್ಯವಾಗಲಿಲ್ಲ. ಶಿಕ್ಷತೇ = ಶಿಕ್ಷ- ವಿದ್ಯೋಪಾದಾನೇ, ಲಟ್-ಲಕಾರ. ವಿದ್ಯೋಪಾದಾನ ಅಂದರೆ ವಿದ್ಯೆಯನ್ನು ತೆಗೆದುಕೊಳ್ಳುವುದು, ಕಲಿಯುವುದು ಎಂದರ್ಥ.

*** अचीकरत् - डुकृञ्-करणे । हेतुमति च । णिच् । कर्तरि लुङ्-लकारः ।**

विवेश गत्वा स विलासकाननम्

ततः क्षणात्क्षोणिपतिर्धृतीच्छया ॥

प्रवालरागच्छुरितं सुषुप्सया

हरिर्घनच्छायमिवार्णसां निधिम् ॥७४॥

74. ಅನ್ವಯ : **ततः** = ಆಮೇಲೆ, **सुषुप्सया** = ಮಲಗುವ ಇಚ್ಛೆಯಿಂದ, **हरिः** = ವಿಷ್ಣುವು, **अर्णसाम् निधिम् इव** = ಸಮುದ್ರವನ್ನೋ ಎಂಬಂತೆ, **सः** = ಆ, **क्षोणिपतिः** = ಮಹಾರಾಜನು (ನಳನು), **क्षणात्** = ಕ್ಷಣಮಾತ್ರದಲ್ಲಿ, **गत्वा** = ಹೋಗಿ, **धृतीच्छया** = ಸಂತೋಷವನ್ನು ಪಡೆಯುವ ಆಸೆಯಿಂದ, **प्रवालरागच्छुरितम्** = ಚಿಗುರುಗಳ ಬಣ್ಣಗಳಿಂದ ವಿಚಿತ್ರವಾದ (ಸುಂದರವಾದ), **घनच्छायम्** = ದಟ್ಟವಾದ ನೆರಳಿರುವ, **विलासकाननम्** = ಕ್ರೀಡಾವನವನ್ನು (ಉದ್ಯಾನವನವನ್ನು), **विवेश** = ಪ್ರವೇಶಿಸಿದನು.

ವಿವರಣೆ : ವಿಷ್ಣುವಿಗೆ ಅನ್ವಯವನ್ನು ಮಾಡುವಾಗ, ಪ್ರವಾಲರಾಗಚ್ಛುರಿತಮ್ = ಹವಳದ ಬಣ್ಣದಿಂದ ಸುಂದರವಾದ, ಘನಚ್ಛಾಯಮ್ = ಮೋಡದಂತೆ (ಕಪ್ಪಾಗಿ) ಶೋಭಿಸುತ್ತಿರುವ - ಎಂಬ ಅರ್ಥವನ್ನು ಕಲ್ಪಿಸಬೇಕು. ಸಮುದ್ರದ ಮೇಲೆ ಆದಿಶೇಷವು ಇರುತ್ತದೆ. ಆ ಆದಿಶೇಷವನ್ನೇ ಪೀಠವಾಗಿ (ಮಂಚವಾಗಿ) ಮಾಡಿಕೊಂಡು, ವಿಷ್ಣುವು ಮಲಗಿ ವಿಶ್ರಾಂತಿಯನ್ನು ಪಡೆಯುತ್ತಾನೆ. ನಳನಿಗೆ ಅನ್ವಯ ಮಾಡುವಾಗ, ಪ್ರವಾಲರಾಗಚ್ಛುರಿತಮ್ = ಚಿಗುರುಗಳಿಂದ ಸುಂದರವಾದ ಮತ್ತು ದಟ್ಟವಾದ ನೆರಳಿರುವ ಎಂಬ ಅರ್ಥವನ್ನು ಕಲ್ಪಿಸಬೇಕು. ಅಂತಹ ಕ್ರೀಡಾವನದಲ್ಲಿ (ಕಾಮಸಂತಪ್ತನಾದ) ನಳನು ವಿಶ್ರಾಂತಿಯನ್ನು ಪಡೆದನು. ಅರ್ಣಸಾಂ ನಿಧಿಂ - ಬದಲಿಗೆ ಅಂಭಸಾಂ ನಿಧಿಮ್ ಎಂಬ ಪಾಠಭೇದವೂ ಇದೆ.

* ಕ್ಷೋಣಿಪತಿಃ = ಕ್ಷೋಣ್ಯಾಃ ಪತಿಃ ಎಂದು ಷಷ್ಠೀತತ್ಪುರುಷ ಸಮಾಸವನ್ನು ಮಾಡಿದಾಗ, ಕ್ಷೋಣೀಪತಿಃ ಎಂಬ ರೂಪವಾಗುತ್ತದೆ. ಆದರೆ ಕ್ಷೋಣೀಪತಿ ಎಂಬ ಶಬ್ದವು ಸಂಜ್ಞಾವಾಚಕವಾಗಿರುವುದರಿಂದ (ಹೆಸರನ್ನು ಸೂಚಿಸುವ ಶಬ್ದವಾಗಿರುವುದರಿಂದ) **ङ्यापोः संज्ञाछन्दसोर्बहुलम्** ಎಂಬ ಪಾಣಿನಿಸೂತ್ರದಿಂದ ಹ್ರಸ್ವವು ವಿಕಲ್ಪವಾಗಿ ಬಂದು, ಕ್ಷೋಣಿಪತಿಃ ಮತ್ತು ಕ್ಷೋಣೀಪತಿಃ ಎಂಬ ಎರಡು ರೂಪಗಳು ಉಂಟಾಗುತ್ತವೆ. ಇಲ್ಲಿ ಕವಿಯು ಹ್ರಸ್ವವನ್ನು ಮಾಡಿದಾಗ ಉಂಟಾಗಿರುವ ಕ್ಷೋಣಿಪತಿಃ ಎಂಬ ರೂಪವನ್ನು ಬಳಸಿದ್ದಾನೆ.

वनान्तपर्यन्तमुपेत्य सस्पृहम्
क्रमेण तस्मिन्नवतीर्णदृक्पथे ॥
न्यवर्ति दृष्टिप्रकरैः पुरौकसाम्
अनुव्रजद्बन्धुसमाजबन्धुभिः ॥७५॥

75. ಅನ್ವಯ : **अनुव्रजद्बन्धुसमाजबन्धुभिः** = ಹಿಂಬಾಲಿಸಿಕೊಂಡು ಹೋಗುತ್ತಿರುವ ಬಂಧುವರ್ಗದ ಸಮಾಜವೆಂಬ (ಸಮೂಹವೆಂಬ) ಬಂಧುಗಳಾಗಿರುವ, **पुरौकसाम्** = ನಗರದ ಪ್ರಜೆಗಳ, **दृष्टिप्रकरैः** = ನೋಟಗಳ ಸಮೂಹಗಳಿಂದ, **वनान्तपर्यन्तम्** = ಉದ್ಯಾನದ ಹತ್ತಿರದಲ್ಲಿರುವ ಗಡಿಯನ್ನು, **सस्पृहम्** = ಅತ್ಯಾಸೆಯಿಂದ, **उपेत्य** = ಹೋಗಿ, **क्रमेण** = ಕ್ರಮವಾಗಿ, **तस्मिन्** = ಆ, **अवतीर्णदृक्पथे** = ಕಣ್ಣಿನ ಮಾರ್ಗವು ದಾಟಲ್ಪಟ್ಟಾಗ (ಕಣ್ಣಿಗೆ ಕಾಣಿಸದಂತೆ ಮರೆಯಾದಾಗ), **न्यवर्ति** = ಹಿಂತಿರುಗಲ್ಪಟ್ಟಿತು. (ಹಿಂತಿರುಗೋಣವಾಯಿತು).

ವಿವರಣೆ : ನಗರದ ಪ್ರಜೆಗಳ ಕಣ್ಣಿನ ನೋಟಗಳೇ ನಳ ಮಹಾರಾಜನನ್ನು ಹಿಂಬಾಲಿಸುತ್ತಿದ್ದವು. ಕಣ್ಣಿಗೆ ಕಾಣಿಸದೇ ಇರುವಷ್ಟು ನಳನು ದೂರ ಹೋದಾಗ, ಆ ನೋಟಗಳು ತಾವಾಗಿಯೇ ಹಿಂತಿರುಗಿದವು. ನ್ಯವರ್ತಿ = ನಿ - ಉಪಸರ್ಗ + ವೃತು-ವರ್ತನೇ, ಭಾವೇಪ್ರಯೋಗ, ಲುಙ್-ಲಕಾರ. ಪುರೌಕಸಾಮ್ - ಎಂಬ ಪ್ರಯೋಗ ಈ ಶ್ಲೋಕದಲ್ಲಿದೆ. ಪುರ್-ಶಬ್ದ ಸಮಾಸವಾದಾಗ ಮಾತ್ರ ಇದು ಸಮಾಸಾಂತಪ್ರತ್ಯಯದ ಮೂಲಕ ಅಕಾರಾಂತವಾಗುತ್ತದೆ. ಇಲ್ಲಿ ಸಮಾಸಾಂತಪ್ರತ್ಯಯ ಇಲ್ಲದಿರುವುದರಿಂದ - ಪುರ್ + ಓಕಸಾಮ್ = ಪುರೋಕಸಾಮ್ ಎಂಬ ಪದದ ಪ್ರಯೋಗ ಯೋಗ್ಯವಾಗಿದೆ.

*** पूः ओकः येषां ते । बहुव्रीहिः समासः । अनेकमन्यपदार्थे । पुर् + ओकस् = पुरोकसः ।
पुरोकाः पुरोकसौ पुरोकसः ।**

*** स्पृहेण सहितम् । सस्पृहम् । सहपूर्वपदबहुव्रीहिः । तेन सहेति तुल्ययोगे । वोपसर्जनस्य ।**

ततः प्रसूने च फले च मञ्जुले
स सम्मुखस्थाङ्गुलिना जनाधिपः ॥
निवेद्यमानं वनपालपाणिना
व्यलोकयत्काननकामनीयकम् ॥७६॥

76. ಅನ್ವಯ : **ततः** = ಆಮೇಲೆ, **सः** = ಆ, **जनाधिपः** = ಮಹಾರಾಜನು, **मञ्जुले** = ಸುಂದರವಾದ, **प्रसूने** = ಹೂವಿನಲ್ಲಿ, **च** = ಮತ್ತು, **फले** = ಹಣ್ಣಿನಲ್ಲಿ, (**च** = ಮತ್ತು), **सम्मुखस्थाङ्गुलिना** = ಮುಂದೆ ಚಾಚಿರುವ ಬೆರಳುಗಳಿರುವ, **वनपालपाणिना** = ಉದ್ಯಾನ-ಪಾಲಕನ ಕೈಯಿಂದ, **निवेद्यमानम्** = ತಿಳಿಸಲ್ಪಡುತ್ತಿರುವ, **काननकामनीयकम्** = ಉದ್ಯಾನವನದ ಸೌಂದರ್ಯವನ್ನು, **व्यलोकयत्** = ನೋಡಿದನು.

ವಿವರಣೆ : ಕಾಮನೀಯಕಮ್ ಎಂಬುದರ ಬದಲು ರಾಮಣೀಯಕಮ್ ಎಂಬ ಪಾಠಭೇದವಿದೆ. ಸಂಮುಖಸ್ಥಾಂಗುಲಿನಾ ಇದರ ಬದಲು, ಸಂಮುಖೀನಾಂಗುಲಿನಾ ಎಂಬ ಪಾಠಭೇದವಿದೆ. ಅರ್ಥವು ಒಂದೇ ಆಗಿದೆ.

*** कमनीयस्य भावः कर्म वा = कामनीयकम् । वुञ्-प्रत्ययः । योपधाद् गुरूपोत्तमाद् वुञ् ।**

फलानि पुष्पाणि च पल्लवे करे
वयोतिपातोद्गतवातवेपिते ॥

स्थितैः समाधाय महर्षिवार्धकाद्

वने तदातिथ्यमशिक्षि शाखिभिः ॥७७॥

77. ಅನ್ವಯ : **वयोतिपातोद्गतवातवेपिते** = ಪಕ್ಷಿಗಳು ಮೇಲಕ್ಕೆ ಹಾರುವಾಗ ಮೇಲೆದ್ದು, ಗಾಳಿಯಿಂದ ಕಂಪಿಸಲ್ಪಟ್ಟಿರುವ, **पल्लवे करे** = ಚಿಗುರೆಂಬ ಕೈಯಲ್ಲಿ, **फलानि** = ಹಣ್ಣುಗಳನ್ನು, **च** = ಮತ್ತು, **पुष्पाणि** = ಹೂವುಗಳನ್ನು, **समाधाय** = ಇಟ್ಟು, **स्थितैः** = ನಿಂತಿರುವಂತಹ, **शाखिभिः** = ಮರಗಳ ಮೂಲಕ, **वने** = ಕಾಡಿನಲ್ಲಿ, **तदातिथ्यम्** = ಅವನ (ನಳನ) ಆತಿಥ್ಯವು (ಅತಿಥಿಸತ್ಕಾರವು), **महर्षिवार्धकाद्** = ವಯಸ್ಸಾದ ಋಷಿ-ಮುನಿಗಳಿಂದ, **अशिक्षि** = ಕಲಿಸಲ್ಪಟ್ಟಿತು.

ವಿವರಣೆ : ಋಷಿ-ಮುನಿಗಳು ಬಹುಶಃ ಅತಿಥಿಗಳನ್ನು ಹೇಗೆ ಸತ್ಕರಿಸಬೇಕು ಎಂಬುದನ್ನು ಉದ್ಯಾನದ ಗಿಡ-ಮರ-ಬಳ್ಳಿಗಳಿಗೆ ಹೇಳಿಕೊಟ್ಟಿದ್ದರು. ಆದ್ದರಿಂದ ಆ ಗಿಡ-ಮರ-ಬಳ್ಳಿಗಳು ತಮ್ಮ ಚಿಗುರುಗಳೆಂಬ ಕೈಯಲ್ಲಿ ಹೂವು-ಹಣ್ಣುಗಳನ್ನು ಹಿಡಿದುಕೊಂಡು ನಳ ಮಹಾರಾಜನಿಗೋಸ್ಕರ ನಿಂತಿದ್ದವು ಎಂದರ್ಥ. ಸಮಾಧಾಯ ಎಂಬುದರ ಬದಲು ಸಮಾದಾಯ ಎಂಬ ಪ್ರಯೋಗವಿದೆ. ಸಮಾದಾಯ = ತೆಗೆದುಕೊಂಡು ಅಥವಾ ತಂದು ಎಂದರ್ಥ.

विनिद्रपत्रालिगतालिकैतवात्

मृगाङ्कचूडामणिवर्जनार्जितम् ॥

दधानमाशासु चरिष्णु दुर्यशः

स कौतुकी तत्र ददर्श केतकम् ॥७८॥

78. ಅನ್ವಯ : **विनिद्रपत्रालिगतालिकैतवात्** = ನಿದ್ದೆ ಮಾಡದೇ ಇರುವ (ಅರಳಿದ) ದಳಗಳ (ಎಸಳುಗಳ) ಸಾಲಿನಲ್ಲಿ ಸೇರಿರಿವ ದುಂಬಿಗಳ ಕಾರಣದಿಂದ, **मृगाङ्कचूडामणिवर्जनार्जितम्** = ಚಂದ್ರನನ್ನೇ ಚೂಡಾಮಣಿಯಾಗಿ ಹೊಂದಿರುವ ಶಿವನನ್ನು ಬಿಡುವ ಮೂಲಕ ಸಂಪಾದಿಸಿರುವ, **आशासु** = ಎಲ್ಲ ದಿಕ್ಕುಗಳಲ್ಲಿ, **चरिष्णु** = ಸಂಚರಿಸುವ ಸ್ವಭಾವವುಳ್ಳ, **दुर्यशः** = ಅಪಕೀರ್ತಿಯನ್ನು, **दधानम्** = ಧರಿಸಿರುವಂತಹ, **केतकम्** = ಕೇದಗೆಯನ್ನು (ಕೇದಗೆ ಹೂವನ್ನು), **तत्र** = ಅಲ್ಲಿ (ಉದ್ಯಾನದಲ್ಲಿ), **कौतुकी** = ಕುತೂಹಲವುಳ್ಳಂತಹ, **सः** = ಅವನು (ನಳನು), **ददर्श** = ನೋಡಿದನು.

ವಿವರಣೆ : ಒಮ್ಮೆ ತಮ್ಮಲ್ಲಿ ಯಾರು ಶ್ರೇಷ್ಠರೆಂಬ ವಿಷಯದಲ್ಲಿ ಬ್ರಹ್ಮನಿಗೂ ವಿಷ್ಣುವಿಗೂ ವಾದ-ವಿವಾದಗಳು ನಡೆದು, ಕೊನೆಗೆ ಯುದ್ಧವೂ ಪ್ರಾರಂಭವಾಯಿತು. ಅವರ ವಿವಾದವನ್ನು ಪರಿಹಾರ ಮಾಡಲು ಬಂದ ಶಿವನು ಅವರಿಬ್ಬರ ಮಧ್ಯದಲ್ಲಿ - ತುದಿ ಮತ್ತು ಬುಡವಿಲ್ಲದ ಬೆಂಕಿಯ ರೂಪದಲ್ಲಿ ಕಾಣಿಸಿಕೊಂಡನು. ನನ್ನ ಬುಡ ಮತ್ತು ತುದಿಯನ್ನು ಯಾರು ನೋಡುವರೋ ಅವರೇ ಶ್ರೇಷ್ಠರೆಂದು ಶಿವನು ತಿಳಿಸಿದನು. ಬ್ರಹ್ಮನಿಗಾಗಲಿ, ವಿಷ್ಣುವಿಗಾಗಲಿ ಆ ಬೆಂಕಿಯ ತುದಿಯನ್ನಾಗಲಿ ಅಥವಾ ಬುಡವನ್ನಾಗಲಿ ತಿಳಿಯಲು ಸಾಧ್ಯವಾಗಲಿಲ್ಲ. ಆದರೆ ನಾನು ತಿಳಿದಿದ್ದೇನೆ ಎಂಬುದಕ್ಕೆ ನೀನು ಸಾಕ್ಷಿ ಹೇಳಬೇಕೆಂದು ಬ್ರಹ್ಮನು ಕೇದಗೆ ಹೂವಿನಲ್ಲಿ ಕೇಳಿಕೊಂಡನು. ಬ್ರಹ್ಮನು ನೋಡದೇ ಇದ್ದರೂ ಕೂಡ, ಅವನು ಬೆಂಕಿಯ ತುದಿಯನ್ನು ನೋಡಿದ್ದಾನೆಂದು ಕೇದಗೆ ಹೂವು ಸುಳ್ಳು ಸಾಕ್ಷಿಯನ್ನು ಹೇಳಿತು. ಇದರಿಂದ ಕೋಪಗೊಂಡ ಶಿವನು - ನಿನ್ನನ್ನು ಭೂಲೋಕದಲ್ಲಿ ಯಾರೂ ಪೂಜಿಸದಿರಲಿ ಎಂದು ಬ್ರಹ್ಮನಿಗೆ ಶಾಪವಿತ್ತನು. ಹಾಗೆಯೇ ತನ್ನ ಪೂಜೆಗೆ ಯೋಗ್ಯವಲ್ಲವೆಂದು ಕೇದಗೆ ಹೂವನ್ನು ಶಿವನು ತಿರಸ್ಕರಿಸಿದನು. ಈ ಕಾರಣದಿಂದ ಶಿವನಿಂದ ಬಿಡಲ್ಪಟ್ಟಿರುವ ಅಥವಾ ತಿರಸ್ಕರಿಸಲ್ಪಟ್ಟಿರುವ ಹೂವು ಅಂದರೆ ಅದು ಕೇದಗೆ ಹೂವು ಎಂದರ್ಥ. ಅಂತಹ ಕೇದಗೆ ಹೂವನ್ನು ನಳನು ಉದ್ಯಾನದಲ್ಲಿ ನೋಡಿದನು. ದದರ್ಶ = ದೃಶಿರ್-ಪ್ರೇಕ್ಷಣೇ, ಲಿಟ್-ಲಕಾರ.

* **विनिद्रपत्रालिगतालिकैतवात् ।**
* **विगता निद्रा यस्याः (पञ्चमी) सा = विनिद्रा । बहुव्रीहिः समासः । अनेकमन्यपदार्थे ।**
* **पत्राणाम् अलिः = पत्रालिः । षष्ठीतत्पुरुषः । षष्ठी ।**
* **विनिद्रा चासौ पत्रालिश्च = विनिद्रपत्रालिः । कर्मधारयः । विशेषणं विशेष्येण बहुलम् । पुंवत्कर्मधारयजातीयदेशीयेषु । विनिद्राशब्दस्य पुंवद्भावः ।**
* **विनिद्रपत्रालिं गताः = विनिद्रपत्रालिगताः । द्वितीयातत्पुरुषः समासः । द्वितीया श्रितातीतपतितगतात्यस्तप्राप्तापन्नैः ।**
* **विनिद्रपत्रालिगताश्च ते अलयश्च = विनिद्रपत्रालिगतालयः । कर्मधारयः । विशेषणं विशेष्येण बहुलम् ।**
* **विनिद्रपत्रालिगतालीनां कैतबम् = विनिद्रपत्रालिगतालिकैतबम् । तस्मात् । विनिद्रपत्रालिगतालिकैतवात् । षष्ठीतत्पुरुषः । षष्ठी ।**

ಹೀಗೆ ಪ್ರತಿಯೊಂದು ಶ್ಲೋಕದ ಪ್ರತಿಯೊಂದು ಪದವನ್ನೂ ಪೂರ್ತಿಯಾಗಿ ಬಿಡಿಸಿಕೊಳ್ಳಬೇಕು. ಇಲ್ಲಿ ಉದಾಹರಣೆಗೋಸ್ಕರ ಒಂದು ಪದವನ್ನು ಸಂಪೂರ್ಣವಾಗಿ ಬಿಡಿಸಿ ತೋರಿಸಲಾಗಿದೆ. ಪತ್ರಾಲಿ ಎಂಬಲ್ಲಿ ಅಲಿ ಶಬ್ದಕ್ಕೆ ಸಾಲು ಎಂದರ್ಥ. ಗತಾಲಿ ಎಂಬಲ್ಲಿ ಅಲಿಶಬ್ದಕ್ಕೆ ದುಂಬಿ ಎಂದರ್ಥ.

वियोगभाजां हृदि कण्टकैः कटुः
निधीयसे कर्णिशरः स्मरेण यत् ॥
ततो दुराकर्षतया तदन्तकृद्
विगीयसे मन्मथदेहदाहिना ॥७९॥

79. ಅನ್ವಯ : **यत्** = ಯಾವ ಕಾರಣದಿಂದ, **स्मरेण** = ಮನ್ಮಥನಿಂದ, **वियोगभाजाम्** = ವಿರಹದುಃಖವುಳ್ಳವರ, **हृदि** = ಹೃದಯದಲ್ಲಿ, **कण्टकैः** = (ತನ್ನ) ಮುಳ್ಳುಗಳಿಂದ, **कटुः** = ತೀಕ್ಷ್ಣವಾದ, **कर्णिशरः** = ಕಿವಿಯುಳ್ಳ ಬಾಣದಂತಿರುವ ಕೇದಗೆಯು, **(त्वम्** = ನೀನು), **निधीयसे** = ಇಡಲ್ಪಡುತ್ತಿರುವೆಯೋ, **ततः** = ಅಲ್ಲಿಂದ, **दुराकर्षतया** = ಕೀಳಲು (ಕಿತ್ತು ಹಾಕಲು) ಸಾಧ್ಯವಾಗದೇ ಇರುವುದರಿಂದ, **तदन्तकृद्** = ವಿರಹಿಗಳನ್ನು ಕೊಲ್ಲುವವನಾಗಿ (ನೀನು), **मन्मथदेहदाहिना** = ಮನ್ಮಥನ ದೇಹವನ್ನು ಸುಟ್ಟಿರುವ ಶಿವನಿಂದ, **विगीयसे** = ನಿಂದಿಸಲ್ಪಡುತ್ತಿರುವಿ.

ವಿವರಣೆ : ಮನ್ಮಥನು ವಿರಹಿಗಳ ಹೃದಯದ ಮೇಲೆ ಬಿಟ್ಟಿರುವ ಪುಷ್ಪಬಾಣವೇ ಕೇದಗೆ ಹೂವು. ಒಮ್ಮೆ ಮನ್ಮಥನ ಬಾಣವು ಚುಚ್ಚಿದರೆ ಅದನ್ನು ತೆಗೆಯುವುದು ಕಷ್ಟ. ಅಂದರೆ ವಿರಹವೇದನೆಯನ್ನು ಪರಿಹರಿಸುವುದು ಕಷ್ಟ. ಅಂತಹ ಬಾಣವನ್ನು ತೆಗೆಯಲು ಸಾಧ್ಯವಾಗದೇ ಇದ್ದಾಗ ವಿರಹಿಗಳು ಪ್ರಾಣವನ್ನೂ ಬಿಡಬಹುದು. ವಿರಹಿಗಳು ಪ್ರಾಣ ಬಿಟ್ಟಾಗ ಮನ್ಮಥನನ್ನು ಕೊಂದ ಶಿವನು ಕೇದಗೆಯನ್ನೇ ನಿಂದಿಸುತ್ತಾನೆ ಎಂದರ್ಥ. ಯಾಕೆಂದರೆ ವಿರಹಿಗಳ ಸಾವಿಗೆ ಅವರ ಹೃದಯದಲ್ಲಿ ಚುಚ್ಚಿರುವ ಕೇದಗೆ ಹೂವೇ ಕಾರಣವಾಗಿದೆ. ಹಿಂದಿನ ಶ್ಲೋಕದಲ್ಲಿ, ಶಿವನು ಯಾಕೆ ಕೇದಗೆಯನ್ನು ಇಷ್ಟಪಡುವುದಿಲ್ಲ ಎಂಬುದನ್ನು ವಿವರಿಸಲಾಗಿದೆ. ಈ ಶ್ಲೋಕದಲ್ಲಿ - ವಿರಹಿಗಳ ಪ್ರಾಣ ತೆಗೆಯುವುದರಿಂದ ಶಿವನು ನಿನ್ನನ್ನು (ಕೇದಗೆಯನ್ನು) ನಿಂದಿಸುತ್ತಿರಬಹುದು ಎಂದು ಇನ್ನೊಂದು ಕಾರಣವನ್ನು ಕವಿಯು ವಿವರಿಸುತ್ತಿದ್ದಾನೆ.

त्वदग्रसूच्या सचिवेन कामिनोः

मनोभवः सीव्यति दुर्यशःपटौ ॥

स्फुटं स पत्रैः करपत्रमूर्तिभिः

वियोगहृद्दारुणि दारुणायते ॥८०॥

80. ಅನ್ವಯ : **सः** = ಆ, **मनोभवः** = ಮನ್ಮಥನು, **त्वदग्रसूच्या** = ನಿನ್ನ (ಕೇದಗೆಯ) ತುದಿ ಎಂಬ ಸೂಜಿ ರೂಪದಲ್ಲಿರುವ, **सचिवेन** = ಸಾಧನದಿಂದ, **कामिनोः** = ಪ್ರೇಮಿಗಳ, **दुर्यशःपटौ** = ಅಪಕೀರ್ತಿ ಎಂಬ ಬಟ್ಟೆಗಳೆರಡನ್ನು, **सीव्यति** = ಹೊಲಿಯುತ್ತಾನೆ. **स्फुटम्** = ಸ್ಪಷ್ಟವಾಗಿ, **करपत्रमूर्तिभिः** = ಗರಗಸದಂತೆ ಇರುವ, **पत्रैः** = ಬಾಣಗಳಿಂದ, **वियोगहृद्दारुणि** = ವಿರಹಿಗಳ ಹೃದಯವೆಂಬ ಕಟ್ಟಿಗೆಗಳಲ್ಲಿ (ಕಟ್ಟಿಗೆಗಳನ್ನು), **दारुणायते** = ಕತ್ತರಿಸುವವನಂತೆ ಆಗುತ್ತಾನೆ (ಕತ್ತರಿಸುತ್ತಾನೆ).

ವಿವರಣೆ : ಪ್ರಪಂಚದಲ್ಲಿ ಪ್ರೇಮಿಗಳ ಬಗ್ಗೆ ಕೆಟ್ಟ ಅಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ಪ್ರೇಮವೊಂದಿದ್ದರೆ ಸಾಕು. ಆ ಕೆಟ್ಟ ಅಭಿಪ್ರಾಯಗಳನ್ನು (ಅಪಕೀರ್ತಿಯನ್ನು) ಮನ್ಮಥನು ಹೊಲಿದು ಜೋಡಿಸಿ, ಸರಿಮಾಡುತ್ತಾನೆ. ಇಲ್ಲಿ ಹೊಲಿಯಲು ಬಳಸುವ ಸೂಜಿಯೂ ಕೆದಗೆಯೇ ಆಗಿದೆ. ಒಂದುವೇಳೆ ಪ್ರೇಮವ್ಯವಹಾರದಲ್ಲಿ ಬಿರುಕು ಉಂಟಾಗಿ, ವಿರಹವು ಉಂಟಾದರೆ, ಅದೇ ಮನ್ಮಥನು ಆ ವಿರಹಿಗಳ ಹೃದಯವೆಂಬ ಕಟ್ಟಿಗೆಯನ್ನು, ಕೇದಗೆ ಎಂಬ ಗರಗಸದಿಂದ ಕತ್ತರಿಸುತ್ತಾನೆ. ದಾರುಣಾಯತೇ = ದಾರುಣಃ ಇವ ಆಚರತಿ, ನಾಮಧಾತು. ಲಟ್-ಲಕಾರ. ತ್ವದಗ್ರಸೂಚೀಸಚಿವೇನ - ಎಂಬ ಪಾಠಭೇದವೂ ಇದೆ.

धनुर्मधुस्विन्नकरोऽपि भीमजा-

परं परागैस्तव धूलिहस्तयन् ॥

प्रसूनधन्वा शरसात्करोति माम्

इति क्रुधाक्रुश्यत तेन केतकम् ॥८१॥

81. ಅನ್ವಯ : **धनुर्मधुस्विन्नकरः** = ಪುಷ್ಪಧನುಸ್ಸಿನ ಮಕರಂದದಿಂದ ಒದ್ದೆಯಾದ ಕೈಯುಳ್ಳ, **प्रसूनधन्वा** = ಪುಷ್ಪಧನುಸ್ಸನ್ನು ಹಿಡಿದಿರುವ ಮನ್ಮಥನು, **तव** = ನಿನ್ನ, **परागैः** = (ಕೇದಗೆಯ) ಕೇಸರದ ಕಣಗಳಿಂದ, **धूलिहस्तयन्** = ಧೂಳಿಯನ್ನು (ಕೇಸರ) ಹಚ್ಚಿಕೊಂಡ ಕೈಯುಳ್ಳವನಾಗಿ, **भीमजापरम्** = ದಮಯಂತಿಯಲ್ಲಿ ಅತ್ಯಂತ ಪ್ರೀತಿಯನ್ನು ಹೊಂದಿರುವ, **माम्** = ನನ್ನನ್ನು, **अपि** = ಕೂಡ, **शरसात्करोति** = ಬಾಣಕ್ಕೆ ಗುರಿಯನ್ನಾಗಿ ಮಾಡುತ್ತಾನೆ, **इति** = ಎಂದು, **तेन**

= ಅವನಿಂದ (ನಳನಿಂದ), **केतकम्** = ಕೇದಗೆಯು, **क्रुधा** = ಸಿಟ್ಟಿನಿಂದ, **आक्रुश्यत** = ಆಕ್ರೋಶಗೊಳ್ಳಲ್ಪಟ್ಟಿತು (ಬಯ್ಯಲ್ಪಟ್ಟಿತು).

ವಿವರಣೆ : ಸೈನಿಕರು ಯುದ್ಧ ಮಾಡುವಾಗ, ಬೆವರಿನಿಂದ ಅಥವಾ ಮಳೆಯಿಂದ ಕೈಯು ಒದ್ದೆಯಾದರೆ, ಬಾಣಗಳನ್ನು ಬಿಡಲು ಕಷ್ಟವಾಗುತ್ತದೆ. ಆಗ ಅವರು ಕೈಗೆ ಸ್ವಲ್ಪ ಹಿಟ್ಟನ್ನು ಹಚ್ಚಿಕೊಳ್ಳುತ್ತಾರೆ. ಆದರೆ ಮನ್ಮಥನ ಧನುಸ್ಸೇ ಹೂವುಗಳಿಂದ ಮಾಡಲ್ಪಟ್ಟಿದೆ. ಆ ಹೂವುಗಳ ಮಕರಂದವು ಕೈಗೆ ತಾಕಿ, ಕೈಯು ಒದ್ದೆಯಾದಾಗ ಮನ್ಮಥನು ಲೀಲಾಜಾಲವಾಗಿ ಬಾಣಗಳನ್ನು ಬಿಡಲು ಅಸಮರ್ಥನಾಗುತ್ತಾನೆ. ಆಗ ಅವನು ತನ್ನ ಕೈಗೆ ಕೇದಗೆ ಹೂವಿನ ಕೇಸರವನ್ನು ಹಚ್ಚಿಕೊಳ್ಳುತ್ತಾನೆ. ಈ ಉದ್ಯಾನದಲ್ಲಿ ಇರುವ ಕೇದಗೆಯು ಮನ್ಮಥನಿಗೆ ಈ ರೀತಿಯಲ್ಲಿ ಸಹಾಯವನ್ನು ಮಾಡುತ್ತಿದೆ ಎಂದು ಭಾವಿಸುತ್ತಾ, ನಳನು ಕೇದಗೆಯನ್ನು ಕುರಿತು ಶಪಿಸುತ್ತಾನೆ (ಬಯ್ಯುತ್ತಾನೆ). ಆಕ್ರುಶ್ಯತ = ಆ-ಉಪಸರ್ಗ + ಕ್ರುಶ-ಆಹ್ವಾನೇ ರೋದನೇ ಚ, ಕರ್ಮಣಿ ಪ್ರಯೋಗ, ಲಙ್-ಲಕಾರ.

*** प्रसूनं धनुः यस्य सः = प्रसूनधन्वा । बहुव्रीहिः । अनेकमन्यपदार्थे । धनुषश्च । अनङ् ।**

*** कृत्स्नः अहं शरः सम्पद्येत इति शरसात् । विभाषा साति कार्त्स्न्ये । साति-प्रत्ययः ।**

विदर्भसुभ्रूस्तनतुङ्गताप्तये
घटानिवापश्यदलं तपस्यतः ॥
फलानि धूमस्य धयानधोमुखान्
स दाडिमे दोहदधूपिनि द्रुमे ॥८२॥

82. ಅನ್ವಯ : **सः** = ಅವನು (ನಳನು), **दोहदधूपिनि** = ದೋಹದಕ್ಕೋಸ್ಕರವಾಗಿ ಧೂಪ (ಹೊಗೆ) ಹಾಕಿರುವ, **दाडिमे** = ದಾಳಿಂಬೆಯ, **द्रुमे** = ಮರದಲ್ಲಿ, **फलानि** = ಹಣ್ಣುಗಳನ್ನು, **विदर्भसुभ्रूस्तनतुङ्गताप्तये** = ವಿದರ್ಭದೇಶದ ಸುಂದರಿಯಾಗಿರುವ ದಮಯಂತಿಯ ಸ್ತನಗಳಂತೆ ದೊಡ್ಡದಾಗುವುದಕ್ಕೋಸ್ಕರ, **अलम्** = ಸಾಕಷ್ಟು (ಬಹಳವಾಗಿ), **तपस्यतः** = ತಪಸ್ಸು ಮಾಡುತ್ತಿರುವ (ಕಷ್ಟಪಡುತ್ತಿರುವ), **धूमस्य** = ಹೊಗೆಯ, **धयान्** = ಪಾನವನ್ನು ಮಾಡುತ್ತಿರುವ (ಹೊಗೆಯನ್ನು ಕುಡಿಯುತ್ತಿರುವ), **अधोमुखान्** = ಕೆಳಮುಖವಾಗಿರುವ, **घटान्** = ಕೊಡಪಾನಗಳನ್ನೋ, **इव** = ಎಂಬಂತೆ, **अपश्यत्** = ನೋಡಿದನು.

ವಿವರಣೆ : ಗಿಡ-ಮರ-ಬಳ್ಳಿಗಳಲ್ಲಿ ಹೂವು-ಹಣ್ಣುಗಳು ಬೆಳೆದಿಲ್ಲವೆಂದಾದರೆ, ದೋಹದ ಎಂಬ ಸಂಸ್ಕಾರವನ್ನು ಮಾಡುವ ಕ್ರಮವು ರೂಢಿಯಲ್ಲಿತ್ತು. ಇದರಲ್ಲಿ ಬೇರೆ ಬೇರೆ ವಿಧಾನಗಳಿವೆ. ದೊಡ್ಡದಾಗಿ ದಾಳಿಂಬೆ ಹಣ್ಣುಗಳು ಬೆಳೆಯಬೇಕೆಂದು ಉದ್ಯಾನಪಾಲಕರು, ದಾಳಿಂಬೆ ಮರದ ಕೆಳಗೆ ದೋಹದ ಎಂಬ ಹೊಗೆಯನ್ನು ಹಾಕಿರುತ್ತಾರೆ. ಅದನ್ನು ನಳನು ನೋಡುತ್ತಾನೆ. ಆಗ ಅವನಿಗೆ ದಮಯಂತಿಯ ಸ್ತನಗಳಂತೆ ದೊಡ್ಡದಾದ ದಾಳಿಂಬೆ ಹಣ್ಣುಗಳು, ಕೆಳಮುಖವಾಗಿ ನೇತು ಹಾಕಿದಂತೆ ತೋರುತ್ತದೆ. ಅಂತಹ ದಾಳಿಂಬೆ ಹಣ್ಣುಗಳು ಹೊಗೆಯನ್ನು ಕುಡಿಯುತ್ತಿರುವ ಕೊಡಪಾನಗಳೋ ಎಂಬಂತೆ ಕಾಣಿಸುತ್ತವೆ. ಕಾಳಿದಾಸನ ಮಾಲವಿಕಾಗ್ನಿಮಿತ್ರದಲ್ಲಿ, ದೋಹದ ಅಂದರೆ ಎಡಗಾಲಿನಿಂದ ಒದೆಯುವುದು ಎಂದು ವರ್ಣಿಸಲಾಗಿದೆ. ಇಲ್ಲಿ ಹೊಗೆ ಹಾಕುವ ಕ್ರಮವನ್ನು ವರ್ಣಿಸಲಾಗಿದೆ. ದೋಹದದಲ್ಲಿ ಬೇರೆ ಬೇರೆ ಪ್ರಕಾರಗಳಿವೆ.

वियोगिनीमैक्षत दाडिमीमसौ
प्रियस्मृतेः स्पष्टमुदीतकण्टकाम् ॥
फलस्तनस्थानविदीर्णरागिहृद्-
विशच्छुकास्यस्मरकिंशुकाशुगाम् ॥८३॥

83. ಅನ್ವಯ : **असौ** = ಇವನು (ನಳನು), **प्रियस्मृतेः** = ದಮಯಂತಿಯ ನೆನಪಿನಿಂದಲೋ ಎಂಬಂತೆ, **स्पष्टम्** = ಸ್ಪಷ್ಟವಾಗಿ ಕಾಣುತ್ತಿರುವ, **उदीतकण्टकाम्** = ಮುಳ್ಳುಗಳು ಬೆಳೆದಿರುವ, **फलस्तनस्थानविदीर्णरागिहृद्-विशच्छुकास्यस्मरकिंशुकाशुगाम्** = ಹಣ್ಣುಗಳೆಂಬ ಸ್ತನಗಳ ಸ್ಥಾನದಲ್ಲಿ ಮನಸ್ಸು ನೆಟ್ಟಿರುವುದರಿಂದ ಅನುರಾಗವುಳ್ಳ ಹೃದಯವನ್ನು ಪ್ರವೇಶಿಸಿರುವ ಗಿಳಿಗಳ ಮುಖಗಳೇ, ಪಲಾಶದ (ಮುತ್ತುಗದ) ಹೂವುಗಳೆಂಬ ಮನ್ಮಥನ ಬಾಣಗಳಾಗಿರುವ, **दाडिमीम्** = ದಾಳಿಂಬೆಯನ್ನು, **वियोगिनीम्** = ವಿರಹದಿಂದ ಕೂಡಿದ ಯುವತಿಯನ್ನಾಗಿ (ದಮಯಂತಿಯನ್ನಾಗಿ), **ऐक्षत** = ನೋಡಿದನು.

ವಿವರಣೆ : ದಾಳಿಂಬೆ ಹಣ್ಣುಗಳನ್ನು ನೋಡಿದಾಗ ದಮಯಂತಿಯ ಸ್ತನಗಳೋ ಎಂಬಂತೆ ನಳನಿಗೆ ಭಾಸವಾಗುತ್ತದೆ. ಇದರಿಂದ ಅವನ ಹೃದಯದಲ್ಲಿ ಅನುರಾಗವು ಹೆಚ್ಚಾಗುತ್ತದೆ. ಆ ದಾಳಿಂಬೆಗಳನ್ನು ತಿನ್ನಲು ಗಿಳಿಗಳು ಅಲ್ಲಿ ಬಂದು ಕುಳಿತಿರುತ್ತವೆ. ಅವುಗಳ ಕೊಕ್ಕು ಕೆಂಪಾಗಿರುವುದರಿಂದ, ಅದು ಮುತ್ತುಗದ ಮರದ ಹೂವಿನಂತೆ ಇರುತ್ತದೆ. (ಕಿಂಶುಕ ಅಂದರೆ

ಮುತ್ತುಗದ ಮರ). ಇದನ್ನು ನೋಡಿದಾಗ ಮನ್ಮಥನ ಬಾಣವೋ ಎಂಬಂತೆ ನಳನಿಗೆ ಕಾಣಿಸುತ್ತದೆ. ಅಂತಹ ದಾಳಿಂಬೆಯನ್ನು ನಳನು ನೋಡಿದನು ಎಂದರ್ಥ. ಐಕ್ಷತ = ಈಕ್ಷ-ದರ್ಶನೇ, ಲಙ್-ಲಕಾರ.

*** विशत् + शुकास्यम् = विशच्छुकास्यम् । छत्वसन्धिः । शश्छोऽटि -८-४-६३.**

स्मरार्धचन्द्रेषुनिभे क्रशीयसाम्
स्फुटं पलाशेऽध्वजुषां पलाशनात् ॥
स वृन्तमालोकत खण्डमन्वितम्
वियोगिहृत्खण्डिनि कालखण्डजम् ॥८४॥

84. ಅನ್ವಯ : **सः** = ಅವನು (ನಳನು), **स्मरार्धचन्द्रेषुनिभे** = ಮನ್ಮಥನ ಅರ್ಧಚಂದ್ರಾಕೃತಿಯ ಬಿಲ್ಲಿನಂತಿರುವ, **वियोगिहृत्खण्डिनि** = ವಿರಹಿಗಳ ಹೃದಯವನ್ನು ಚುಚ್ಚುತ್ತಿರುವ, **क्रशीयसाम्** = ಹೆಚ್ಚು ತೆಳ್ಳಗಿರುವ, **अध्वजुषाम्** = ದಾರಿಹೋಕರ, **पलाशनात्** = ಮಾಂಸಭಕ್ಷಣದ ಕಾರಣದಿಂದ, **पलाशे** = ಮುತ್ತುಗದ ಮರದಲ್ಲಿ, **अन्वितम्** = ಅನ್ವಯವನ್ನು ಹೊಂದಿರುವ, **स्फुटम्** = ಸ್ಪಷ್ಟವಾದ, **वृन्तम्** = ತೊಟ್ಟನ್ನು, **कालखण्डजम्** = ಯಕೃತ್ತಿನಿಂದ ಉಂಟಾಗಿರುವ, **खण्डम्** = ತುಂಡನ್ನಾಗಿ, **आलोकत** = ನೋಡಿದನು.

ವಿವರಣೆ : ತೆಳ್ಳಗಿರುವ ಮತ್ತು ವಿರಹಿಯಾದ ದಾರಿಹೋಕನನ್ನು (ದಾರಿಯಲ್ಲಿ ಹೋಗುತ್ತಿರುವವನನ್ನು) ಮಾಂಸವನ್ನು ತಿನ್ನುವ ಪ್ರಾಣಿಯೊಂದು ತಿಂದರೆ, ದೇಹದ ಅರೆಬರೆ ಮಾಂಸವು ಅಲ್ಲಿಯೇ ಉಳಿದಿರುತ್ತದೆ. ಅವನ ಯಕೃತ್ತಿನ (ಪಿತ್ತಕೋಶದ) ಮಾಂಸ ಅಥವಾ ನರಗಳೂ ಕಪ್ಪಾಗಿ ಕಾಣುತ್ತಿರುತ್ತವೆ. ಅಂತಹ ಪಲಾಶ ವೃಕ್ಷದ ಹೂವಿನ ಅಥವಾ ಹಣ್ಣಿನ ತೊಟ್ಟುಗಳನ್ನು ನಳನು ಉದ್ಯಾನದಲ್ಲಿ ನೋಡಿದನು. ಈ ವರ್ಣನೆಯಿಂದ ವಿರಹವೇದನೆಯ ಭೀಕರತೆಯು ವ್ಯಕ್ತವಾಗುತ್ತದೆ. ಪಲಾಶ ಅಂದರೆ ಮುತ್ತುಗದ ಮರ. ಈ ಪದವನ್ನು ಬಿಡಿಸಿದಾಗ ಬೇರೆಯೇ ಅರ್ಥ ಸಿಗುತ್ತದೆ. ಪಲಮ್ ಅಶ್ನಾತಿ ಇತಿ ಪಲಾಶಃ, ಅಂದರೆ ಮಾಂಸವನ್ನು ತಿನ್ನುವವನು ಎಂದರ್ಥ. ಆಲೋಕತ = ಆ-ಉಪಸರ್ಗ + ಲೋಕೃ-ದರ್ಶನೇ, ಲಙ್-ಲಕಾರ.

*** अर्धं चन्द्रस्य = अर्धचन्द्रम् । प्रथमातत्पुरुषः समासः । अर्धं नपुंसकम् ।**

नवा लता गन्धवहेन चुम्बिता

करम्बिताङ्गी मकरन्दशीकरैः ॥

दृशा नृपेण स्मितशोभिकुड्मला

दरादराभ्यां दरकम्पिनी पपे ॥८५॥

85. ಅನ್ವಯ : **गन्धवहेन** = ಗಾಳಿಯಿಂದ, **चुम्बिता** = ಆಲಂಗಿಸಲ್ಪಟ್ಟಿರುವ (ಸ್ಪರ್ಶಿಸಲ್ಪಟ್ಟಿರುವ), **मकरन्दशीकरैः** = ಹೂವಿನ ಮಕರಂದದ ಹನಿಗಳಿಂದ, **करम्बिताङ्गी** = ಒದ್ದೆಯಾಗಿರುವ (ತಂಪಾಗಿರುವ) ಶರೀರವುಳ್ಳ, **स्मितशोभिकुड्मला** = ಮಂದಹಾಸದಿಂದ ಶೋಭಿಸುತ್ತಿರುವ ಹೂವಿನ ಮೊಗ್ಗಿನಂತಿರುವ, **दरकम्पिनी** = (ಸಣ್ಣ ತಂಗಾಳಿಯಿಂದ) ಸ್ವಲ್ಪ ಕಂಪಿಸುತ್ತಿರುವ, **नवा** = ಹೊಸದಾದ, **लता** = ಬಳ್ಳಿಯು (ಪ್ರಿಯತಮೆಯು), **नृपेण** = ರಾಜನಿಂದ (ನಳನಿಂದ), **दृशा** = ಕಣ್ಣಿನ ಮೂಲಕ, **दरादराभ्याम्** = ಹೆದರಿಕೆ ಮತ್ತು ಉತ್ಕಂಠತೆಗಳಿಂದ, **पपे** = ಕುಡಿಯಲ್ಪಟ್ಟಿತು (ಕಣ್ತುಂಬಿ ನೋಡಲ್ಪಟ್ಟಿತು).

ವಿವರಣೆ : ಪಪೇ = ಪಾ-ಪಾನೇ, ಕರ್ಮಣಿಪ್ರಯೋಗ, ಲಿಟ್-ಲಕಾರ.

विचिन्वतीः पान्थपतङ्गहिंसनैः

अपुण्यकर्माण्यलिकज्जलच्छलात् ॥

व्यलोकयच्चम्पककोरकावलीः

स शम्बरारेर्बलिदीपिका इव ॥८६॥

86. ಅನ್ವಯ : **पान्थपतङ्गहिंसनैः** = ದಾರಿಯಲ್ಲಿ ಹೋಗುತ್ತಿರುವ ಮಿಡತೆಗಳನ್ನು ಹಿಂಸಿಸಿದ್ದರಿಂದ (ಕೊಂದಿದ್ದರಿಂದ), **अलिकज्जलच्छलात्** = ದುಂಬಿಗಳೆಂಬ ಕಾಡಿಗೆಯ ನೆಪದಿಂದ, **अपुण्यकर्माणि** = ಪಾಪಕರ್ಮಗಳನ್ನು, **विचिन्वतीः** = ಸಂಗ್ರಹಿಸುತ್ತಿರುವ (ಮಾಡುತ್ತಿರುವ), **चम्पककोरकावलीः** = ಸಂಪಿಗೆಯ ಮೊಗ್ಗುಗಳ ಸಾಲುಗಳನ್ನು, **शम्बरारेः** = ಮನ್ಮಥನ, **बलिदीपिकाः इव** = ಪೂಜೆಗೋಸ್ಕರ ಇರುವ ದೀಪಗಳನ್ನೋ ಎಂಬಂತೆ, **सः** = ಅವನು (ನಳನು), **व्यलोकयत्** = ನೋಡಿದನು.

ವಿವರಣೆ : ಎಲ್ಲಿಂದಲೋ ಬರುತ್ತಿರುವ ಮಿಡತೆಗಳು ಸಂಪಿಗೆಯ ಹೂವು ಅಥವಾ ಮೊಗ್ಗುಗಳನ್ನು ನೋಡಿ, ಅದರ ಮೇಲೆ ಮಕರಂದವನ್ನು ಹೀರಲು ಕುಳಿತುಕೊಳ್ಳುತ್ತವೆ. ಆಗ ಅವುಗಳನ್ನು ಜನರು ಹೊಡೆದು ಓಡಿಸುತ್ತಾರೆ (ಕೊಲ್ಲುತ್ತಾರೆ). ಇದರಿಂದ ಹೆದರಿಕೊಂಡ ದುಂಬಿಗಳು ಸಂಪಿಗೆಯ ಮೇಲೆ ಕುಳಿತುಕೊಳ್ಳುವುದಿಲ್ಲ. ಆದರೆ ಸಂಪಿಗೆಯ ಮೇಲೆಯೇ

ಹಾರಾಡುತ್ತಾ ಇರುತ್ತವೆ. ಈ ಸಂಪಿಗೆಯೇ ದೀಪವೆಂದೂ, ಅದರ ಮೇಲೆ ಹಾರಾಡುತ್ತಿರುವ ದುಂಬಿಗಳೇ ದೀಪದ ಮಸಿ ಎಂದೂ ಕಲ್ಪಿಸಬೇಕು. ಸಂಪಿಗೆಯ ಮೇಲೆ ಕುಳಿತಿರುವ ಮಿಡತೆಗಳನ್ನು ಜನರು ಕೊಂದಂತೆ, ದುಂಬಿಗಳನ್ನೂ ಕೊಂದರೆ ಅದರ ಪಾಪವೆಲ್ಲವೂ ಸಂಪಿಗೆ ಹೂವಿಗೆ ಸೇರುತ್ತದೆ. ಆದ್ದರಿಂದ ಪಾಪಕರ್ಮವನ್ನು ಮಾಡುತ್ತಿದೆ ಎಂದು ವರ್ಣಿಸಲಾಗಿದೆ. ಹಾಗೆಯೇ ಪ್ರೇಮರಸಕ್ಕೆ ಉತ್ತೇಜನವನ್ನು ನೀಡುವ ಸುಂದರವಾದ ಸಂಪಿಗೆ ಹೂವುಗಳನ್ನು ನೋಡಿಯೇ ವಿರಹಿಗಳು ಸಾಯುತ್ತಾರೆ. ಈ ಮೂಲಕವಾಗಿಯೂ ಸಂಪಿಗೆಯು ಪಾಪವನ್ನೆಸಗುತ್ತಿದೆ ಎಂದು ಕಲ್ಪಿಸಬೇಕು.

*** न पुण्यं यस्मिन् तत् = अपुण्यम् । नञ्बहुव्रीहिः । नञोऽस्त्यर्थानां वाच्यो वा चोत्तरपदलोपः ।**

अमन्यतासौ कुसुमेषु गर्भगम्
परागमन्धङ्करणं वियोगिनाम् ॥
स्मरेण मुक्तेषु पुरा पुरारये
तदङ्गभस्मेव शरेषु सङ्गतम् ॥८७॥

87. ಅನ್ವಯ : **असौ** = ಇವನು (ನಳನು), **कुसुमेषु** = ಹೂವುಗಳಲ್ಲಿ, **गर्भगम्** = ಗರ್ಭವನ್ನು ಧರಿಸಿರುವ, **वियोगिनाम्** = ವಿರಹ ವೇದನೆ ಇರುವವರನ್ನು, **अन्धङ्करणम्** = ಕುರುಡರನ್ನಾಗಿ ಮಾಡುವ, **परागम्** = ಪರಾಗವನ್ನು (ಹೂವಿನ ಕೇಸರವನ್ನು), **पुरा** = ಹಿಂದೆ, **पुरारये** = ಶಿವನಿಗೆ, **स्मरेण** = ಮನ್ಮಥನಿಂದ, **मुक्तेषु** = ಬಿಡಲ್ಪಟ್ಟ, **शरेषु** = ಬಾಣಗಳಲ್ಲಿ, **सङ्गतम्** = ಸೇರಿಕೊಂಡಿರುವ, **तदङ्गभस्म इव** = ಶಿವನ ಶರೀರದ ಭಸ್ಮವನ್ನೋ ಎಂಬಂತೆ, **अमन्यत** = ತಿಳಿದನು.

ವಿವರಣೆ : ಭಸ್ಮದಿಂದ (ಬೂದಿಯಿಂದ) ಕುರುಡುತನವು ಬರುತ್ತದೆ. ಅಂದರೆ ಬೂದಿಯು ಕಣ್ಣಿಗೆ ತಾಕಿದರೆ ಕಣ್ಣು ಕುರುಡಾಗುತ್ತದೆ. ಅದಕ್ಕೋಸ್ಕರ ಮನ್ಮಥನು ಶಿವನೊಂದಿಗೆ ಯುದ್ಧವನ್ನು ಮಾಡುವಾಗ, ಬಾಣಗಳಿಗೆ ಭಸ್ಮವನ್ನು ಹಚ್ಚಿ ಬಿಡುತ್ತಿದ್ದನು. ಶಿವನ ಕಣ್ಣಿಗೆ ಭಸ್ಮವು ತಾಕಿ, ಶಿವನು ಕುರುಡನಾದರೆ ಮನ್ಮಥನೊಂದಿಗೆ ಯುದ್ಧವನ್ನು ಮಾಡುವುದಿಲ್ಲವೆಂಬುದು ಮನ್ಮಥನ ನಂಬಿಕೆ. ಪುಷ್ಪಬಾಣದಲ್ಲಿರುವ ಭಸ್ಮವು ಕಣ್ಣನ್ನು ಕುರುಡಾಗಿಸುವಂತೆ, ಪುಷ್ಪಗಳಲ್ಲಿರುವ ಕೇಸರವು ವಿರಹಿಗಳ ಕಣ್ಣನ್ನು ಕುರುಡಾಗಿಸುತ್ತದೆ. ಅಂದರೆ ವಿರಹಿಗಳಿಗೆ ಏನೂ ತೋಚದಂತೆ ಮಾಡುತ್ತದೆ ಎಂದರ್ಥ.

*** अन्धम् + करणम् = अन्धङ्करणम् । परसवर्णसन्धिः । अनुस्वारस्य ययि परसवर्णः ।**

*** सम् + गतम् = सङ्गतम् । परसवर्णसन्धिः । अनुस्वारस्य ययि परसवर्णः ।**

पिकाद्वने शृण्वति भृङ्गहुङ्कृतैः
दशामुदञ्चत्करुणे वियोगिनाम् ॥
अनास्थया सूनकरप्रसारिणीम्
ददर्श दूनस्थलपद्मिनीं नलः ॥८८॥

88. ಅನ್ವಯ : **पिकात्** = ಕೋಗಿಲೆಯಿಂದ, (ಮತ್ತು) **भृङ्गहुङ्कृतैः** = ದುಂಬಿಗಳ ಹುಂಕಾರಗಳಿಂದ, **वियोगिनाम्** = ವಿರಹಿಗಳ, **दशाम्** = ದಶೆಯನ್ನು (ಅವಸ್ಥೆಯನ್ನು), **उदञ्चत्करुणे** = ಬೆಳೆಯುತ್ತಿರುವ ಕರುಣ ಎಂಬ ಹೆಸರಿನ ಮರಗಳಿರುವ, **वने** = ಉಪವನವು, **शृण्वति** = ಕೇಳಿಸಿಕೊಳ್ಳುತ್ತಿದ್ದಾಗ, **दूनः** = ವಿರಹದಿಂದ ಸಂತಪ್ತನಾದ, **नलः** = ನಳನು, **अनास्थया** = ಆಸಕ್ತಿ ಇಲ್ಲದೆಯೇ, **सूनकरप्रसारिणीम्** = ಹೂವೆಂಬ ಕೈಯನ್ನು ಚಾಚುತ್ತಿರುವ, **स्थलपद्मिनीम्** = ಕೃತ್ರಿಮವಾಗಿ ಮಾಡಿದ ಕೊಳದಲ್ಲಿ ಬೆಳೆಸಿದ ಕಮಲದ ಗಿಡವನ್ನು, **ददर्श** = ನೋಡಿದನು.

ವಿವರಣೆ : ಕೋಗಿಲೆಯ ಗಾನ, ದುಂಬಿಗಳ ಝೇಂಕಾರ, ಕರುಣ ಮರಗಳು ಚಿಗುರೊಡೆಯುವುದು ಮತ್ತು ಕಮಲಗಳು ಅರಳುವುದು - ಇವು ನಾಲ್ಕು ವಿರಹಿಗಳ ದುಃಖವನ್ನು ಇಮ್ಮಡಿಗೊಳಿಸುತ್ತವೆ. ಈ ಶ್ಲೋಕದಲ್ಲಿ ವರ್ಣನೆ ಹೀಗಿದೆ -ವಿರಹಿಗಳ ದುಃಖವು ಕೊಗಿಲೆಯ ಮತ್ತು ದುಂಬಿಗಳ ಧ್ವನಿಯಿಂದ ವ್ಯಕ್ತವಾಗುತ್ತಿತ್ತು. ಅದನ್ನು ಉದ್ಯಾನವು ಕೇಳಿಸಿಕೊಳ್ಳುತ್ತಿತ್ತು. ಆಗ ನಳನು ಕೃತ್ರಿಮವಾಗಿ ಬೆಳೆಸಿದ ಕಮಲದ ಗಿಡವನ್ನು ನೋಡಿದನು. ಅಕೃತ್ರಿಮವಾದ ಅಂದರೆ ಪ್ರಕೃತಿಯಲ್ಲಿ ಸಹಜವಾಗಿ ಇರುವ ಭೂಭಾಗವನ್ನು ಸ್ಥಲೀ ಎನ್ನುತ್ತಾರೆ. ಜಾನಪದಕುಂಡ-ಸೂತ್ರದಿಂದ ಙೀಷ್-ಪ್ರತ್ಯಯ. ಕೃತ್ರಿಮ ಅಂದರೆ ಮನುಷ್ಯ ನಿರ್ಮಿತವಾಗಿದ್ದರೆ ಅದನ್ನು ಸ್ಥಲ ಎನ್ನುತ್ತಾರೆ. ಇಲ್ಲಿ ಸ್ಥಲಪದ್ಮಿನೀ ಎಂಬ ಪದವು ಇರುವುದರಿಂದ, ಕೃತ್ರಿಮವಾಗಿ ಕೊಳವನ್ನು ನಿರ್ಮಿಸಿ, ಬೆಳೆಸಿರುವ ಕಮಲದ ಗಿಡ ಎಂದರ್ಥ.

*** हुं + कृतैः = हुङ्कृतैः । परसवर्णसन्धिः । अनुस्वारस्य ययि परसवर्णः-८-४-५८.**

*** न आस्था = अनास्था । तया । अनास्थया । नञ्-समासः । (नञ्-तत्पुरुषः) । नञ् |**

रसालसालः समदृश्यतामुना

स्फुरद्द्विरेफारवरोषहुङ्कृतिः ॥
समीरलोलैर्मुकुलैर्वियोगिने
जनाय दित्सन्निव तर्जनाभियम् ॥८९॥

89. ಅನ್ವಯ : **अमुना** = ಇವನಿಂದ (ನಳನಿಂದ), **समीरलोलैः** = ಬೀಸುವ ಗಾಳಿಯಿಂದ ಚಂಚಲವಾಗಿರುವ, **मुकुलैः** = ಮೊಗ್ಗುಗಳಿಂದ, **वियोगिने** = ವಿರಹಿಯಾದ, **जनाय** = ಮನುಷ್ಯನಿಗೆ, **तर्जनाभियम्** = ಗದರಿಸುವುದರಿಂದ ಉಂಟಾದ ಹೆದರಿಕೆಯನ್ನು, **दित्सन् इव** = ಕೊಡಲು ಬಯಸುತ್ತಲೋ ಎಂಬಂತೆ (ಕೊಡುತ್ತಲೋ ಎಂಬಂತೆ), **स्फुरद्-द्विरेफारवरोषहुङ्कृतिः** = ಶೋಭಿಸುತ್ತಿರುವ ದುಂಬಿಗಳ ನಾದವೇ ಸಿಟ್ಟನ್ನು ತೋರಿಸುವ ಹುಂಕಾರವಾಗಿರುವ, **रसालसालः** = ಮಾವಿನ ಮರವು, **समदृश्यत** = ನೋಡಲ್ಪಟ್ಟಿತು.

ವಿವರಣೆ : ಮಾವಿನ ಮರವು ಹೂ ಬಿಟ್ಟು, ಅದರ ಪರಿಮಳವು ಘಮಘಮಿಸುತ್ತಿದ್ದರೆ ಹಾಗೂ ಅದರಲ್ಲಿ ಕೋಗಿಲೆಯೂ ಕೂಗುತ್ತಿದ್ದರೆ, ವಿರಹಿಯ ದುಃಖವು ಇಮ್ಮಡಿಯಾಗುತ್ತದೆ. ಆದರೂ, ಅದರಲ್ಲಿ ಆನಂದವನ್ನು ಅನುಭವಿಸುತ್ತಾನೆ. ಆದರೆ ಇಲ್ಲಿ ಮಾವಿನ ಹೂವಿನ ಮಕರಂದವನ್ನು ಹೀರಲು ಸೇರಿರುವ ಅಸಂಖ್ಯಾತ ದುಂಬಿಗಳನ್ನು ನೋಡಿದಾಗ, ಆ ಮಾವಿನ ಮರವು ಗದರಿಸುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ಯಾಕೆಂದರೆ ಹತ್ತಿರ ಹೋಗಲು ಸಾಧ್ಯವಾಗುತ್ತಿರಲಿಲ್ಲ.

ಸಮದೃಶ್ಯತ = ಸಮ್-ಉಪಸರ್ಗ + ದೃಶಿರ್-ಪ್ರೇಕ್ಷಣೇ, ಕರ್ಮಣಿಪ್ರಯೋಗ, ಲಙ್-ಲಕಾರ.

*** हुं + कृतिः = हुङ्कृतिः । परसवर्णसन्धिः । अनुस्वारस्य ययि परसवर्णः-८-४-५८.**

*** दातुम् इच्छन् = दित्सन् । सन्नन्तात् शतृ-प्रत्ययः । वर्तमानं कृदन्तम् ।**

लटः शतृशानचावप्रथमासमानाधिकरणे ।

दिने दिने त्वं तनुरेधि रेऽधिकम्
पुनःपुनर्मूर्च्छ च तापमृच्छ च ॥
इतीव पान्थाञ्शपतः पिकान्द्विजान्
सखेदमैक्षिष्ट स लोहितेक्षणान् ॥९०॥

90. ಅನ್ವಯ : **रे** = ಎಲೈ !, **दिने दिने** = ಪ್ರತಿದಿನವೂ, **तनुः** = ತೆಳ್ಳಗಾಗಿರುವ, **त्वम्** = ನೀನು, **अधिकम्** = ಹೆಚ್ಚು, **एधि** = ಆಗು. **च** = ಮತ್ತು, **पुनःपुनः** = ಮತ್ತೆ ಮತ್ತೆ, **मूर्च्छ** = ಪ್ರಜ್ಞೆ

ತಪ್ಪಿದವನಾಗು, **च** = ಮತ್ತು, **तापम्** = ತಾಪವನ್ನು (ವಿರಹ ವೇದನೆಯನ್ನು), **ऋच्छ** = ಹೊಂದು, **इति** = ಎಂದು, **पान्थान्** = ದಾರಿಹೋಕರನ್ನು (ಉದ್ಯಾನಕ್ಕೆ ಬಂದವರನ್ನು), **शपतः** = ಶಪಿಸುತ್ತಾ ಇರುವ, **लोहितेक्षणान्** = ಕೆಂಪಾದ ಕಣ್ಣುಗಳುಳ್ಳ, **पिकान्** = ಗಿಳಿಗಳನ್ನು, **द्विजान् इव** = ಬ್ರಾಹ್ಮಣರನ್ನೋ ಎಂಬಂತೆ, **सः** = ಅವನು (ನಳನು), **सखेदम्** = ದುಃಖದಿಂದ, **ऐक्षिष्ट** = ನೋಡಿದನು.

ವಿವರಣೆ : ಬ್ರಾಹ್ಮಣರು ಸಿಟ್ಟುಗೊಂಡಾಗ ಶಾಪವನ್ನು ಕೊಡುತ್ತಾರೆ. ಕೆಂಪಾದ ಕಣ್ಣುಗಳುಳ್ಳ ಗಿಳಿಗಳ ಕೂಗಾಟವನ್ನು ಕೇಳಿದಾಗ, ಬ್ರಾಹ್ಮಣರು ಶಾಪವನ್ನು ಕೊಡುತ್ತಿದ್ದಂತೆ ಭಾಸವಾಗುತ್ತಿತ್ತು. ದ್ವಿಜ ಎಂಬ ಶಬ್ದಕ್ಕೆ ಹಕ್ಕಿ ಎಂಬ ಅರ್ಥವೂ ಇದೆ. ಆಗ (ಶಪತಃ ಇವ) ಶಪಿಸುತ್ತಿವೆಯೋ ಎಂಬಂತಿರುವ ಗಿಳಿಗಳೆಂಬ ಹಕ್ಕಿಗಳನ್ನು ನೋಡಿದನು ಎಂದು ಅನ್ವಯವನ್ನು ಮಾಡಿಕೊಳ್ಳಬೇಕು. ಐಕ್ಷಿಷ್ಟ = ಈಕ್ಷ-ದರ್ಶನೇ, ಲುಙ್-ಲಕಾರ. ಅಧಿಕಮ್ ಎಂಬುದು ಕ್ರಿಯಾವಿಶೇಷಣ.

*** दिने दिने । नित्यवीप्सयोः इति द्वित्वम् ।**

*** खेदेन सहितम् = सखेदम् । बहुव्रीहिः समासः । तेन सहेति तुल्ययोगे । वोपसर्जनस्य ।**

अलिस्रजा कुड्मलमुच्चशेखरम्
निपीय चाम्पेयमधीरया धिया ॥
स धूमकेतुं विपदे वियोगिनाम्
उदीतमातङ्कितवानशङ्कत ॥९१॥

91. ಅನ್ವಯ : **अलिस्रजा** = ದುಂಬಿಗಳ ಸಾಲಿನಿಂದ, **उच्चशेखरम्** = ಎತ್ತರವಾದ ಕಿರೀಟವನ್ನು ಹೊಂದಿರುವ, **चाम्पेयम्** = ಸಂಪಿಗೆಯ (ನಾಗಕೇಸರದ), **कुड्मलम्** = ಮೊಗ್ಗನ್ನು, **अधीरया** = ಧೈರ್ಯವಿಲ್ಲದ, **धिया** = ಬುದ್ಧಿಯಿಂದ, **निपीय** = ಕಣ್ತುಂಬ ನೋಡಿ, **आतङ्कितवान्** = ಆತಂಕಗೊಂಡಿರುವ (ಉದ್ವೇಗಗೊಂಡಿರುವ), **सः** = ಅವನು (ನಳನು), **वियोगिनाम्** = ವಿರಹಿಗಳ, **विपदे** = ವಿನಾಶಕ್ಕೋಸ್ಕರ, **उदीतम्** = ಹುಟ್ಟಿಕೊಂಡಿರುವ, **धूमकेतुम्** = ಧೂಮಕೇತುವನ್ನಾಗಿ, **अशङ्कत** = ಭಾವಿಸಿದನು (ಸಂಶಯಪಟ್ಟನು).

ವಿವರಣೆ : ಚಾಂಪೇಯಕ್ಕೆ ಸಂಪಿಗೆ, ನಾಗಕೇಸರ ಎಂಬ ಎರಡು ಅರ್ಥಗಳೂ ಇವೆ. ಉಚ್ಚಶೇಖರಮ್ - ಹೂವಿಗೆ ಅಥವಾ ಹೂವಿನ ತಲೆಗೆ ಕಿರೀಟವು ಇರುವುದಿಲ್ಲ. ಆದರೆ ಹೂವಿನ

ಮೇಲೆ ದುಂಬಿಗಳು ಗುಂಪುಗಟ್ಟಿ ಹಾರಾಡುತ್ತಾ ಇದ್ದುದರಿಂದ, ಆ ದುಂಬಿಗಳೇ ಹೂವಿಗೆ ಕಿರೀಟದಂತೆ ಕಂಡುಬರುತ್ತಿತ್ತು. ಅಧೀರಯಾ = ದಮಯಂತಿಯೇ ಕ್ಷಣ ಕ್ಷಣಕ್ಕೂ ನೆನಪಾಗುತ್ತಿದ್ದುದರಿಂದ, ಸಂಪಿಗೆ ಅಥವಾ ನಾಗಕೇಸರದ (ಕೆಂಡಸಂಪಿಗೆ / ನಾಗಸಂಪಿಗೆ) ಸೌಂದರ್ಯವನ್ನು ಸವಿಯುವಷ್ಟು ಧೈರ್ಯ ನಳನಿಗೆ ಇರಲಿಲ್ಲ ಎಂಬುದು ಒಂದು ಅರ್ಥ. ಆ ದುಂಬಿಗಳು ಎಲ್ಲಿ ಕಚ್ಚುತ್ತವೋ ಎಂಬ ಹೆದರಿಕೆ ಇದ್ದುದರಿಂದ, ಸಂಪಿಗೆಯನ್ನೇ ನೋಡುತ್ತಾ ಇರಲು ಧೈರ್ಯವಿರಲಿಲ್ಲ ಎಂಬುದು ಇನ್ನೊಂದು ಅರ್ಥ. ಅಶಂಕತ = ಶಕಿ-ಶಂಕಾಯಾಮ್, ಲಙ್-ಲಕಾರ.

गलत्परागं भ्रमिभङ्गिभिः पतत्-
प्रसक्तभृङ्गावलि नागकेसरम् ॥
स मारनाराचनिघर्षणस्खलद्-
ज्वलत्कणं शाणमिव व्यलोकयत् ॥९२॥

92. ಅನ್ವಯ : सः = ಅವನು (ನಳನು), **गलत्परागम्** = ಬೀಳುತ್ತಿರುವ ಪರಾಗವುಳ್ಳ (ಕೇಸರವುಳ್ಳ), **भ्रमिभङ्गिभिः** = ಸುಳಿಯಂತೆ ಸುತ್ತುವ ವಿಶೇಷವಾದ ಪ್ರಕಾರಗಳಿಂದ, **पतत्प्रसक्तभृङ्गावलि** = ಬೀಳುತ್ತಾ ತಾಕಿಕೊಳ್ಳುತ್ತಿರುವ ದುಂಬಿಗಳ ಸಾಲುಗಳಿರುವ, **नागकेसरम्** = ನಾಗಕೇಸರವನ್ನು (ಕೆಂಡಸಂಪಿಗೆ / ನಾಗಸಂಪಿಗೆಯನ್ನು), **मारनाराचनिघर्षणस्खलद्-ज्वलत्कणम्** = ಮನ್ಮಥನ ಬಾಣಗಳಿಂದ ಹೊಡೆಯಲ್ಪಟ್ಟು (ಉಜ್ಜಲ್ಪಟ್ಟು), ಜಾರಿ, ಉರಿಯುತ್ತಿರುವ ಬೆಂಕಿಯ ಕಣವುಳ್ಳ, **शाणम् इव** = (ಚಿನ್ನವನ್ನು ಪರೀಕ್ಷಿಸುವ) ಓರೆಗಲ್ಲನ್ನೋ ಎಂಬಂತೆ, **व्यलोकयत्** = ನೋಡಿದನು.

ವಿವರಣೆ : ಮನ್ಮಥನು ಹೊಡೆದ ಬಾಣವು ತಾಕಿ, ನಾಗಕೇಸರವು ನೆಲಕ್ಕೆ ಬೀಳುತ್ತಿದೆ ಎಂಬುದು ಕಲ್ಪನೆ. ಮನ್ಮಥನ ಬಾಣವು ಕೆಂಡಸಂಪಿಗೆಯ ಮರಕ್ಕೆ ಹೊಡೆದು, ಉಜ್ಜಿಕೊಂಡು ಹೋಗುವ ರಭಸಕ್ಕೆ ಬೆಂಕಿಯು ಹುಟ್ಟಿಕೊಂಡಿದೆ ಎಂಬುದು ಇನ್ನೊಂದು ಕಲ್ಪನೆ. ಉಜ್ಜಿದಾಗ ಬೆಂಕಿ ಹತ್ತಿಕೊಳ್ಳುವುದಾದರೆ ಅದು ಓರೆಗಲ್ಲು ಎಂಬ ಮತ್ತೊಂದು ಕಲ್ಪನೆ. ಬೀಳುತ್ತಿರುವ ಕೆಂಡಸಂಪಿಗೆಯನ್ನು ನೋಡಿದಾಗ, ಬೆಂಕಿಯ ಕಿಡಿಗಳಿರುವ ಓರೆಗಲ್ಲು ಇರಬಹುದೆಂದು ನಳನಿಗೆ ಅನಿಸಿತು. ಮರದಿಂದ ಬೀಳುತ್ತಿರುವ ನಾಗಕೇಸರವನ್ನು ಸುಳಿಯಂತೆ ಸುತ್ತುತ್ತಾ ದುಂಬಿಗಳು ಮುತ್ತಿಡುತ್ತಿದ್ದವು.

तदङ्गमुद्दिश्य सुगन्धि पातुकाः
शिलीमुखालीः कुसुमाद्गुणस्पृशः ॥
स्वचापदुर्निर्गतमार्गणभ्रमात्
स्मरः स्वनन्तीरवलोक्य लज्जितः ॥९३॥

93. ಅನ್ವಯ : **सुगन्धि** = ಚೆನ್ನಾಗಿ ಪರಿಮಳವಿರುವಂತಹ, **तदङ्गम्** = ಅವನ (ನಳನ) ಶರೀರವನ್ನು, **उद्दिश्य** = ಗುರಿಯಾಗಿಟ್ಟುಕೊಂಡು, **गुणस्पृशः** = ಪರಿಮಳವೆಂಬ ಸದ್ಗುಣವನ್ನು ಹೊಂದಿರುವ, **कुसुमात्** = ಹೂವಿನಿಂದ, **पातुकाः** = ಬೀಳುವ ಸ್ವಭಾವವುಳ್ಳ, **स्वनन्तीः** = ಧ್ವನಿಯನ್ನು ಮಾಡುತ್ತಿರುವ (ಗುಂಯ್-ಗುಟ್ಟುತ್ತಿರುವ), **शिलीमुखालीः** = ದುಂಬಿಗಳ ಸಾಲನ್ನು, **अवलोक्य** = ನೋಡಿ, **स्मरः** = ಮನ್ಮಥನು, **स्वचापदुर्निर्गतमार्गणभ्रमात्** = ತನ್ನ ಬಿಲ್ಲಿನಿಂದ ಹೊರಹೊಮ್ಮಿರುವ ಬಾಣವೆಂಬ ಭ್ರಮೆಯಿಂದ, **लज्जितः** = ನಾಚಿಕೆಯುಳ್ಳವನು (ಅಭವತ್ = ಆದನು).

ವಿವರಣೆ : ಮನ್ಮಥನ ಬಿಲ್ಲು ಮತ್ತು ಬಾಣಗಳು ಹೂವುಗಳಿಂದಲೇ ನಿರ್ಮಿತವಾಗಿವೆ. ಬಹಳ ಪರಿಮಳವಿರುವ ಹೂವಿನ ಬಾಣವನ್ನು ಮನ್ಮಥನು ಆಕಾಶದಲ್ಲಿ ಬಿಟ್ಟಾಗ, ಅದನ್ನು ಹಿಂಬಾಲಿಸಿಕೊಂಡು ದುಂಬಿಗಳು ಹೋಗುತ್ತವೆ. ಆದರೆ ಮನ್ಮಥನ ಬಾಣಕ್ಕಿಂತಲೂ ಹೆಚ್ಚಿನ ಪರಿಮಳ ನಳನ ದೇಹಕ್ಕೆ ಇದ್ದುದರಿಂದ, ದುಂಬಿಗಳು ಆಕಾಶದ ಬದಲಿಗೆ, ಭೂಮಿಯಲ್ಲಿರುವ ನಳನ ತಲೆಯ ಮೇಲೆ ಸುತ್ತುತ್ತಿದ್ದವು. ಆಕಾಶದಲ್ಲಿದ್ದ ತನ್ನ ಪುಷ್ಪಬಾಣದಿಂದ ದುಂಬಿಗಳು ಕೆಳಗೆ ಬೀಳುತ್ತಿವೆ ಎಂದು ಭಾವಿಸಿ ಮನ್ಮಥನು ನಾಚಿಕೊಂಡನು.

मरुल्ललत्पल्लवकण्टकैः क्षतम्
समुच्छलच्चन्दनसारसौरभम् ॥
स वारनारीकुचसञ्चितोपमम्
ददर्श मालूरफलं पचेलिमम् ॥९४॥

94. ಅನ್ವಯ : **मरुल्ललत्पल्लवकण्टकैः** = ಗಾಳಿಯು ಬೀಸುತ್ತಿರುವುದರಿಂದ ಕಂಪಿಸುವ ಚಿಗುರುಗಳ ಮುಳ್ಳುಗಳಿಂದ, **क्षतम्** = ಗಾಯಗೊಂಡಿರುವ, **समुच्छलच्चन्दनसारसौरभम्** = ಮೇಲೆದ್ದು ಬರುತ್ತಿರುವ ಶ್ರೀಗಂಧದ ತಿರುಳಿನ (ಅಥವಾ ಕರ್ಪೂರದ) ಪರಿಮಳವಿರುವ, **वारनारीकुचसञ्चितोपमम्** = ವೇಶ್ಯಾಸ್ತ್ರೀಯರ ಸ್ತನಗಳಂತೆ ಸಾದೃಶ್ಯವನ್ನು ಹೊಂದಿರುವಂತಹ,

पचेलिमम् = ಬಲಿತಿರುವ (ಮಾಗಿದ), **मालूरफलम्** = ಬಿಲ್ವದ ಹಣ್ಣನ್ನು, **सः** = ಅವನು (ನಳನು), **ददर्श** = ನೋಡಿದನು.

ವಿವರಣೆ : ಪಚೇಲಿಮ - ಎಂಬ ಶಬ್ದಕ್ಕೆ ಕೆಲವು ಪುಸ್ತಕಗಳಲ್ಲಿ ಪಕ್ವವಾದ ಅಥವಾ ಹಣ್ಣಾದ ಎಂಬ ಅರ್ಥವಿದೆ. ಆದರೆ ಪಚೇಲಿಮ ಅಂದರೆ ಹಣ್ಣಾಗಲು ಯೋಗ್ಯವಾದದ್ದು ಅಂದರೆ ಬಲಿತಿರುವುದು ಎಂಬುದೇ ಸರಿಯಾದ ಅರ್ಥ.

*** मरुत् + ललत् = मरुल्ललत् । परसवर्णसन्धिः । तोर्लि ।**

*** कण्टकैः + क्षतम् = कण्टकैः + क्षतम् । विसर्गसन्धिः । शर्परे विसर्जनीयः ।**

युवद्वयीचित्तनिमज्जनोचित-
प्रसूनशून्येतरगर्भगह्वरम् ॥
स्मरेषुधीकृत्य धिया भयान्धया
स पाटलायाः स्तबकं प्रकम्पितः ॥९५॥

95. ಅನ್ವಯ : **युवद्वयीचित्तनिमज्जनोचित-प्रसूनशून्येतरगर्भगह्वरम्** = ಯುವಕ-ಯುವತಿಯರೆಂಬ ಜೋಡಿಗಳ ಮನಸ್ಸನ್ನು ಮುಳುಗಿಸಲು (ಸೆಳೆಯಲು) ಯೋಗ್ಯವಾದ ಹೂವಿನ ಶೂನ್ಯವಲ್ಲದಂತಹ (ಪೂರ್ಣವಾದ) ಮಧ್ಯದಲ್ಲಿ ರಂಧ್ರವಿರುವ, **पाटलायाः** = ಪಾದರೀಹೂವಿನ, **स्तबकम्** = ಗೊಂಚಲನ್ನು, **भयान्धया** = ಭಯವೆಂಬ ಕುರುಡುತನದ, **धिया** = ಭಾವನೆಯಿಂದ (ಬುದ್ಧಿಯಿಂದ), **स्मरेषुधीकृत्य** = ಮನ್ಮಥನ ಬತ್ತಳಿಕೆಯನ್ನಾಗಿ ಮಾಡಿ, **सः** = ಅವನು (ನಳನು), **प्रकम्पितः** = ನಡುಗಿದನು. (ಅಥವಾ ಹಿಂದಿನ ಶ್ಲೋಕದಲ್ಲಿರುವ ದದರ್ಶ ಎಂಬ ಕ್ರಿಯಾಪದವನ್ನು ಇಲ್ಲಿ ಸೇರಿಸಿಕೊಳ್ಳಬೇಕು. ಆಗ - **प्रकम्पितः** = ನಡುಗುತ್ತಿರುವ, **सः** = ಅವನು (ನಳನು), **पाटलायाः** = ಪಾದರೀಹೂವಿನ, **स्तबकम्** = ಗೊಂಚಲನ್ನು, **ददर्श** = ನೋಡಿದನು ಎಂಬುದಾಗಿಯೂ ಅನ್ವಯವನ್ನು ಮಾಡಬಹುದು.)

*** अस्मरेषुधिं स्मरेषुधिं कृत्वा = स्मरेषुधीकृत्य । कृभ्वस्तियोगे सम्पद्यकर्तरि च्विः । च्वि-प्रत्ययः । ऊर्यादिच्विडाचश्च । गतिसंज्ञा । गतिसमासः । कुगतिप्रादयः ।**

मुनिद्रुमः कोरकितः शितिद्युतिः
वनेऽमुनामन्यत सिंहिकासुतः ॥
तमिस्रपक्षत्रुटिकूटभक्षितम्

कलाकलापं किल वैधवं वमन् ॥९६॥

96. ಅನ್ವಯ : **अमुना** = ಇವನಿಂದ (ನಳನಿಂದ), **वने** = ಉದ್ಯಾನವನದಲ್ಲಿ, **कोरकितः** = ಮೊಗ್ಗು ಬಿಟ್ಟಿರುವ, **शितिद्युतिः** = ಕಪ್ಪಾದ ಕಾಂತಿಯುಳ್ಳ, **मुनिद्रुमः** = ಅಗಸ್ತ್ಯವೃಕ್ಷವು, **तमिस्रपक्षत्रुटिकूटभक्षितम्** = ಕೃಷ್ಣಪಕ್ಷದಲ್ಲಿ ಕ್ಷಯವೆಂಬ ನೆಪದಿಂದ ತಿನ್ನಲ್ಪಟ್ಟಿರುವ, **वैधवम्** = ಚಂದ್ರನ, **कलाकलापम्** = ಕಲೆಗಳ ಸಮೂಹವನ್ನು, **वमन्** = ವಾಂತಿ ಮಾಡುತ್ತಾ ಇರುವ (ಹೊರ ಹಾಕುತ್ತಾ ಇರುವ), **सिंहिकासुतः** = ಸಿಂಹಿಕೆಯ ಮಗನಾದ ರಾಹು ಎಂಬುದಾಗಿ, **अमन्यत किल** = ತಿಳಿಯಲ್ಪಟ್ಟಿತಲ್ಲವೇ ?

ವಿವರಣೆ : ಕೃಷ್ಣಪಕ್ಷದಲ್ಲಿ ರಾಹುವು ಚಂದ್ರನನ್ನು ತಿನ್ನುವುದರಿಂದ ಅವನ ದೇಹವು ಕ್ಷಯವಾಗುತ್ತದೆ ಎಂಬುದು ಕವಿಕಲ್ಪನೆ. ಕೃಷ್ಣಪಕ್ಷದಲ್ಲಿ ತಿಂದಿರುವ ಚಂದ್ರನ ಕಲೆಗಳನ್ನು ಉಗುಳುತ್ತಿರುವ ರಾಹುವೋ ಎಂಬಂತೆ ಇರುವ ಅಗಸ್ತ್ಯವೃಕ್ಷವನ್ನು ನಳನು ನೋಡಿದನು.

*** कोरकम् अस्य सञ्जातम् इति कोरकितः । तदस्य सञ्जातं तारकादिभ्य इतच् ।
इतच्-प्रत्ययः ।**

पुरा हठाक्षिप्ततुषारपाण्डुर-
च्छदा वृतेर्वीरुधि बद्धविभ्रमाः ॥
मिलन्निमीलं ससृजुर्विलोकिताः
नभस्वतस्तं कुसुमेषुकेलयः ॥९७॥

97. ಅನ್ವಯ : **वृतेः** = ಬೇಲಿಯ, **वीरुधि** = ಬಳ್ಳಿಯಲ್ಲಿ, **बद्धविभ्रमाः** = ಮಾಡಲ್ಪಟ್ಟಿರುವ ಹಕ್ಕಿಗಳ ಕುಣಿತವಿರುವ (ಹಾರಾಟವಿರುವ), (ಹಾಗೆಯೇ) **पुरा** = ಹಿಂದೆ, **हठाक्षिप्ततुषारपाण्डुरच्छदाः** = ಬಲಾತ್ಕಾರದಿಂದ ಕಂಪಿಸಲ್ಪಟ್ಟಿರುವ ಮತ್ತು ಹಿಮದಿಂದ ಬಿಳಿಯಾದ ಎಲೆಗಳನ್ನು ಹೊಂದಿರುವ, **नभस्वतः** = ವಾಯುದೇವನ, **कुसुमेषुकेलयः** = ಪ್ರೇಮದ ಆಟಗಳು (ಮನ್ಮಥನ ಆಟಗಳು), **विलोकिताः** = ನೋಡಲ್ಪಟ್ಟವುಗಳಾಗಿ, **तम्** = ಅವನನ್ನು (ನಳನನ್ನು), **मिलन्निमीलम्** = ಕಣ್ಣು ಮುಚ್ಚಿದವನನ್ನಾಗಿ, **ससृजुः** = ಮಾಡಿದವು.

ವಿವರಣೆ : ಬದ್ಧವಿಭ್ರಮಾಃ ಎಂಬಲ್ಲಿ ವಿಭ್ರಮ ಎಂಬುದಕ್ಕೆ ವಿಶಿಷ್ಟವಾದ ಭ್ರಮಣ ಅಂದರೆ ಸಣ್ಣ ಕಂಪನವನ್ನು ಹೊಂದಿರುವ ಎಲೆಗಳು ಎಂಬುದಾಗಿ ಅರ್ಥವನ್ನು ಹೇಳಬಹುದು. ಅಥವಾ ವಿಭ್ರಮ ಎಂಬಲ್ಲಿ ವಿ ಎಂಬುದಕ್ಕೆ ಪಕ್ಷಿ ಎಂಬ ಅರ್ಥವನ್ನಿಟ್ಟುಕೊಂಡರೆ, ಚಿಲಿಪಿಲಿಗೈಯುವ

ಹಕ್ಕಿಗಳ ಹಾರಾಟವಿರುವ ಎಲೆಗಳು ಎಂಬುದಾಗಿಯೂ ವಿವರಿಸಬಹುದು. ವಾಯುದೇವನ ಪ್ರೇಮದಾಟವೆಂದರೆ ತಂಪಾಗಿ, ನಿಧಾನವಾಗಿ ಗಾಳಿಯು ಬೀಸುವುದು. ಇದರಿಂದ ಎಲೆಗಳು ಸ್ವಲ್ಪ ಮಾತ್ರ ಕಂಪಿಸುತ್ತವೆ. ಇವುಗಳನ್ನು ನೋಡಿದಾಗ ದಮಯಂತಿಯ ಬಗ್ಗೆ ಒಲವಿನ ಉತ್ಕಂಠತೆಯು ಹೆಚ್ಚಾಗಿ, ನಳನು ಕಣ್ಣುಗಳನ್ನು ಮುಚ್ಚಿದನು ಎಂದರ್ಥ.

* **नभस्वतः + तम् = नभस्वतस्तम् । सत्वसन्धिः । विसर्जनीयस्य सः-८-३-३४.**

गता यदुत्सङ्गतले विशालताम्
द्रुमाः शिरोभिः फलगौरवेण ताम् ॥
कथं न धात्रीमतिमात्रनामितैः
स वन्दमानानभिनन्दति स्म तान् ॥९८॥

98. ಅನ್ವಯ : **द्रुमाः** = ಮರಗಳು, **यदुत्सङ्गतले** = ಯಾವ (ಭೂಮಾತೆಯ) ತೊಡೆಯ ಮೇಲೆ, **विशालताम्** = ಬೆಳವಣಿಗೆಯನ್ನು, **गताः** = ಹೊಂದಿದವೋ, **ताम्** = ಅಂತಹ, **धात्रीम्** = ಭೂಮಾತೆಯನ್ನು, **फलगौरवेण** = ಹಣ್ಣುಗಳ ಭಾರದಿಂದ, **अतिमात्रनामितैः** = ಬಹಳವಾಗಿ ಬಾಗಿರುವಂತಹ, **शिरोभिः** = ತಲೆಗಳಿಂದ (ತುದಿಗಳಿಂದ), **वन्दमानान्** = ನಮಸ್ಕಾರವನ್ನು ಮಾಡುತ್ತಿರುವ, **तान्** = ಅವುಗಳನ್ನು (ಮರಗಳನ್ನು), **सः** = ಅವನು (ನಳನು), **कथम्** = ಹೇಗೆ ತಾನೆ, **न अभिनन्दति स्म** = ಅಭಿನಂದಿಸದೇ ಇದ್ದಿರಬಹುದು ?

ವಿವರಣೆ : ಉದ್ಯಾನದಲ್ಲಿ ಬೆಳೆದಿರುವ ಮರಗಳೆಂದರೆ ಭೂಮಾತೆಯ ಮಡಿಲಲ್ಲಿ ಬೆಳೆದಿರುವ ಮರಗಳು. ಅವುಗಳ ತುದಿಯೇ ತಲೆ. ಆ ಮರಗಳ ತುದಿಯಲ್ಲಿ ಬಹಳವಾಗಿ ಹಣ್ಣುಗಳು ಇದ್ದುದರಿಂದ, ಅವುಗಳು ಭೂಮಾತೆಗೆ ತಲೆಬಾಗಿ ನಮಸ್ಕರಿಸಿದಂತೆ ಭಾಸವಾಗುತ್ತಿತ್ತು. ಅಂತಹ ಮರಗಳನ್ನು ನಳನು ಅಭಿನಂದಿಸಿದನು.

* **अतिमात्रं नामिताः = अतिमात्रनामिताः । तैः । अतिमात्रनामितैः । केवलसमासः । सह सुपा ।**

नृपाय तस्मै हिमितं वनानिलैः
सुधीकृतं पुष्परसैरहर्महः ॥
विनिर्मितं केतकरेणुभिः सितम्
वियोगिनेऽदत्त न कौमुदीमुदः ॥९९॥

99. ಅನ್ವಯ : **वनानिलैः** = ಉದ್ಯಾನದ ಗಾಳಿಗಳಿಂದ, **हिमितम्** = ತಂಪಾಗಿರುವ, **पुष्परसैः** = ಹೂವಿನ ಮಕರಂದಗಳಿಂದ, **सुधीकृतम्** = ಅಮೃತವಾಗಿರುವ, **केतकरेणुभिः** = ಕೇದಗೆಯ ಕೇಸರಗಳಿಂದ, **विनिर्मितम्** = ಮಾಡಲ್ಪಟ್ಟಿರುವ, **सितम्** = ಬಿಳುಪಾದ, **अहर्महः** = ಹಗಲಿನ (ಬಿಸಿಲಿನ) ಕಾಂತಿಯು, **वियोगिने** = ವಿರಹಿಯಾದ, **तस्मै** = ಆ, **नृपाय** = ರಾಜನಿಗೆ (ನಳನಿಗೆ), **कौमुदीमुदः** = ಬೆಳದಿಂಗಳ ಸಂತೋಷಗಳನ್ನು, **न अदत्त** = ತಂದುಕೊಡಲಿಲ್ಲ.

ವಿವರಣೆ : ಉದ್ಯಾನದಲ್ಲಿ ತಂಗಾಳಿ, ಹೂವುಗಳ ಮಕರಂದ, ಮಂಜಿನಿಂದ ಬೆಳ್ಳಗಾದ ಎಲೆಗಳು, ಮಂಜಿನಂತಿರುವ ಬಿಸಿಲು - ಇವೆಲ್ಲವೂ ಸೇರಿ ಚಂದ್ರನ ಬೆಳದಿಂಗಳಿನಂತೆ ಭಾಸವಾಗುತ್ತಿತ್ತು. ಆದರೂ ಇದು ಚಂದ್ರನ ಬೆಳದಿಂಗಳಿನಷ್ಟು ಖುಷಿಯನ್ನು ನಳನಿಗೆ ಕೊಡಲಿಲ್ಲ ಎಂದರ್ಥ.

अयोगभाजोऽपि नृपस्य पश्यता
तदेव साक्षादमृतांशुमाननम् ॥
पिकेन रोषारुणचक्षुषा मुहुः
कुहूरुताहूयत चन्द्रवैरिणी ॥१००॥

100. ಅನ್ವಯ : **अयोगभाजः अपि** = ವಿರಹ ವೇದನೆಯನ್ನು ಹೊಂದಿದ್ದರೂ ಕೂಡ, **नृपस्य** = ರಾಜನ (ನಳನ), **तदेव** = ಅದೇ, **आननम्** = ಮುಖವನ್ನು, **साक्षात्** = ಪ್ರತ್ಯಕ್ಷವಾಗಿ, **अमृतांशुम्** = ಚಂದ್ರನನ್ನಾಗಿ, **पश्यता** = ನೋಡುತ್ತಿರುವ, **रोषारुणचक्षुषा** = ಸಿಟ್ಟಿನಿಂದ ಕೆಂಪಾದ ಕಣ್ಣುಗಳುಳ್ಳ, **पिकेन** = ಕೋಗಿಲೆಯಿಂದ, **चन्द्रवैरिणी** = ಅಮಾವಾಸ್ಯೆಯು, **कुहूरुता** = ಕುಹೂ ಎಂಬ ಧ್ವನಿಯ ಮೂಲಕ, **मुहुः** = ಮತ್ತೆ ಮತ್ತೆ, **आहूयत** = ಕರೆಯಲ್ಪಟ್ಟಿತು.

ವಿವರಣೆ : ವಿರಹದುಃಖ ಇರುವಾಗ ಮುಖ ಬಾಡಿ ಅಮಾವಾಸ್ಯೆಯಂತೆ ಕಾಂತಿಹೀನವಾಗಿ ಇರಬೇಕು. ಆದರೆ ನಳನ ಮುಖವು ಹುಣ್ಣಿಮೆಯ ಚಂದ್ರನಂತೆ ಇತ್ತು. ಇದನ್ನು ನೋಡಿದ ಕೋಗಿಲೆಯು ಮತ್ಸರದಿಂದ ಅಮಾವಾಸ್ಯೆಯನ್ನು ಅಲ್ಲಿಗೆ ಆಮಂತ್ರಿಸಿತು ಎಂದರ್ಥ.

*** रोषेण अरुणम् = रोषारुणम् । तृतीयातत्पुरुषः समासः । कर्तृकरणे कृता बहुलम् ।**

*** रोषारुणं चक्षुः यस्य सः = रोषारुणचक्षुः । तेन । रोषारुणचक्षुषा । बहुव्रीहिः समासः । अनेकमन्यपदार्थे ।**

अशोकमर्थान्वितनामताशया-

गताञ्शरण्यं गृहशोचिनोऽध्वगान् ॥

अमन्यतावन्तमिवैष पल्लवैः

प्रतीष्टकामज्वलदस्रजालकम् ॥१०१॥

101. ಅನ್ವಯ : **एषः** = ಇವನು (ನಳನು), **पल्लवैः** = ಚಿಗುರುಗಳಿಂದ, **प्रतीष्टकामज्वलदस्रजालकम्** = ತೆಗೆದುಕೊಳ್ಳಲ್ಪಟ್ಟಿರುವ (ಮುಚ್ಚಲ್ಪಟ್ಟಿರುವ) ಮನ್ಮಥನ ಉರಿಯುತ್ತಿರುವ ಅಸ್ತ್ರಗಳ ಸಮೂಹವನ್ನು ಹೊಂದಿರುವ, **अशोकम्** = ಅಶೋಕವನ್ನು, **अर्थान्वितनामताशया** = ಅನ್ವರ್ಥವಾದ ಹೆಸರು ಎಂಬ ಭಾವನೆಯಿಂದ, **शरण्यम्** = ಮನೆಗೆ, **आगतान्** = ಬಂದಿರುವ, **गृहशोचिनः** = ಹೆಣ್ಣನ್ನು ಕುರಿತು ದುಃಖಿಸುತ್ತಿರುವ (ವಿರಹ ವೇದನೆಯಿಂದ ಬಳಲುತ್ತಿರುವ), **अध्वगान्** = ದಾರಿಹೋಕರನ್ನು, **अवन्तम् इव** = ರಕ್ಷಿಸುತ್ತಿರುವವನನ್ನೋ ಎಂಬಂತೆ, **अमन्यत** = ತಿಳಿದನು.

ವಿವರಣೆ : ನ ಶೋಕಃ ಯಸ್ಯ - ಅಂದರೆ ಯಾರಿಗೆ ಶೋಕವು ಇಲ್ಲವೋ ಅವನು. ಶೋಕ ಇಲ್ಲದಿರುವವನು ಶೋಕವುಳ್ಳವರನ್ನೂ ಶೋಕದಿಂದ ದೂರಮಾಡಲು ಸಮರ್ಥನಾಗುತ್ತಾನೆ. ಆದ್ದರಿಂದ ಅಶೋಕ ಎಂಬುದು ಅನ್ವರ್ಥವಾದ ಹೆಸರು. ಅಶೋಕ ಎಂಬುದು ಮನ್ಮಥನ ಐದು ಬಾಣಗಳಲ್ಲಿ ಒಂದಾಗಿದೆ. ಪ್ರೇಮಪಾಶದಲ್ಲಿ ಸಿಲುಕಿ, ವಿರಹದಿಂದ ಬಳಲುವವರಿಗೆ ಮನ್ಮಥನ ಅಶೋಕವೆಂಬ ಬಾಣವು ಇನ್ನೂ ಹೆಚ್ಚಾದ ವೇದನೆಯನ್ನು ಉಂಟುಮಾಡಿ ಪೀಡಿಸುತ್ತದೆ. ಆದರೆ ಈ ಉದ್ಯಾನದಲ್ಲಿ ಅಶೋಕವು ಇರುವುದರಿಂದ ಇದರ ಹೂವು (ಬಾಣವು) ಮನ್ಮಥನ ಅಶೋಕವನ್ನು ಹೊಡೆದುರುಳಿಸಿ, ವಿರಹಿಗಳನ್ನು ರಕ್ಷಿಸಬಹುದು ಎಂಬುದು ಕವಿಕಲ್ಪನೆ. ಅಂತಹ ಅಶೋಕವನ್ನು ಉದ್ಯಾನವನದಲ್ಲಿ ನಳನು ನೋಡಿದನು ಎಂದರ್ಥ.

*** न शोकः यस्य सः = अशोकः । बहुव्रीहिः समासः । अनेकमन्यपदार्थे ।**

*** न शोकः यस्मिन् सः = अशोकः । बहुव्रीहिः समासः । अनेकमन्यपदार्थे ।**

*** न शोकः यस्मात् सः = अशोकः । बहुव्रीहिः समासः । अनेकमन्यपदार्थे ।**

ಹೀಗೆ ಈ ಸಮಾಸವನ್ನು ಮೂರು ವಿಧದಲ್ಲಿಯೂ ಬಿಡಿಸಲು ಸಾಧ್ಯವಿದೆ.

विलासवापीतटवीचिवादनात्

पिकालिगीतेः शिखिलास्यलाघवात् ॥

वनेऽपि तौर्यत्रिकमारराध तम्

क्व भोगमाप्नोति न भाग्यभाग्जनः ॥१०२॥

102. ಅನ್ವಯ : **विलासवापीतटवीचिवादनात्** = ವಿಹಾರಕ್ಕೋಸ್ಕರ ಕಟ್ಟಿಸಿರುವ ಸರೋವರಗಳ ದಡಗಳಲ್ಲಿ ಅಲೆಗಳು ಶಬ್ದ ಮಾಡುತ್ತಿರುವುದರಿಂದ, **पिकालिगीतेः** = ಕೋಗಿಲೆ ಮತ್ತು ದುಂಬಿಗಳ ಹಾಡುಗಾರಿಕೆಯಿಂದ, **शिखिलास्यलाघवात्** = ನವಿಲಿನ ನೃತ್ಯದ ನೈಪುಣ್ಯದಿಂದ, **वने अपि** = ಉದ್ಯಾನದಲ್ಲಿಯೂ ಕೂಡ, **तम्** = ಅವನನ್ನು (ನಳನನ್ನು), **तौर्यत्रिकम्** = ನೃತ್ಯ-ಗೀತ-ವಾದ್ಯ ಎಂಬ ಮೂರು (ಸಂಗೀತದ ಪ್ರಭೇದವು), **आरराध** = ಆರಾಧಿಸಿತು. (ಪೂಜಿಸಿತು). **भाग्यभाग्** = ಭಾಗ್ಯವಂತನಾದ, **जनः** = ಮನುಷ್ಯನು, **क्व** = ಎಲ್ಲಿ ತಾನೆ, **भोगम्** = ಸುಖಭೋಗವನ್ನು, **न आप्नोति** = ಪಡೆಯುವುದಿಲ್ಲ ? (ಎಲ್ಲ ಕಡೆಯೂ ಪಡೆಯುತ್ತಾನೆ).

ವಿವರಣೆ : ಆರರಾಧ = ಆ-ಉಪಸರ್ಗ + ರಾಧ-ಸಂಸಿದ್ಧೌ, ಲಿಟ್-ಲಕಾರ.

तदर्थमध्याप्य जनेन तद्वने

शुका विमुक्ताः पटवस्तमस्तुवन् ॥

स्वरामृतेनोपजगुश्च सारिकाः

तथैव तत्पौरुषगायनीकृताः ॥१०३॥

103. ಅನ್ವಯ : **जनेन** = ಸೇವಕ ಜನರಿಂದ, **तदर्थम्** = ಅವನಿಗೋಸ್ಕರ (ನಳನಿಗೋಸ್ಕರ), **अध्याप्य** = ಕಲಿಸಲ್ಪಟ್ಟು, **तद्वने** = ಆ ಉದ್ಯಾನದಲ್ಲಿ, **विमुक्ताः** = ಬಿಡಲ್ಪಟ್ಟಿರುವ (ಬಿಟ್ಟಿರುವ), **पटवः** = ಪ್ರವೀಣವಾದ, **शुकाः** = ಗಿಳಿಗಳು, **तम्** = ಅವನನ್ನು (ನಳನನ್ನು), **अस्तुवन्** = ಸ್ತುತಿಸಿದವು. **च** = ಮತ್ತು, **तथैव** = ಹಾಗೆಯೇ, **तत्पौरुषगायनीकृताः** = ಅವನ ಪರಾಕ್ರಮವನ್ನು ಹಾಡುತ್ತಿರುವ, **सारिकाः** = ಹೆಣ್ಣು ಗಿಳಿಗಳು, **स्वरामृतेन** = ಅಮೃತದಂತಹ ಧ್ವನಿಯಿಂದ, **उपजगुः** = ಹಾಡಿದವು.

ವಿವರಣೆ : ಅಸ್ತುವನ್ = ಷ್ಟುಞ್ - ಸ್ತುತೌ , ಲಙ್-ಲಕಾರ. ಉಪಜಗುಃ = ಉಪ-ಉಪಸರ್ಗ + ಗೈ - ಶಬ್ದೇ, ಲಿಟ್-ಲಕಾರ.

* तस्मै इति = तदर्थम् । चतुर्थीतत्पुरुषः समासः । चतुर्थी तदर्थार्थबलिहितसुखरक्षितैः । नित्यसमासः । अर्थेन नित्यसमासो विशेष्यलिङ्गता च ।

इतीष्टगन्धाढ्यमटन्नसौ वनम्
पिकोपगीतोऽपि शुकस्तुतोऽपि च ॥
अविन्दतामोदभरं बहिश्चरम्
विदर्भसुभ्रूविरहेण नान्तरम् ॥१०४॥

104. ಅನ್ವಯ : **इति** = ಹೀಗೆ, **इष्टगन्धाढ्यम्** = ಇಷ್ಟವಾದ ಪರಿಮಳದಿಂದ ಸಂಪದ್ಭರಿತವಾದ, **वनम्** = ಉದ್ಯಾನವನವನ್ನು, **अटन्** = ಸುತ್ತುತ್ತಿರುವವನಾಗಿ, **पिकोपगीतः अपि** = ಕೋಗಿಲೆಯಿಂದ ಹಾಡಿಹೊಗಳಲ್ಪಟ್ಟರೂ ಕೂಡ, **च** = ಮತ್ತು, **शुकस्तुतः अपि** = ಗಿಳಿಯಿಂದ ಸ್ತುತಿಸಲ್ಪಟ್ಟರೂ ಕೂಡ, **असौ** = ಇವನು (ನಳನು), **बहिश्चरम्** = (ದೇಹದ) ಹೊರಗೆ ಅಲೆದಾಡುವ, **आमोदभरम्** = ಸಂತೋಷದ ಅತಿರೇಕವನ್ನು (ಬಹಳ ಸಂತೋಷವನ್ನು), **अविन्दत** = ಹೊಂದಿದನು. **विदर्भसुभ्रूविरहेण** = ವಿದರ್ಭದೇಶದ ಸುಂದರಿಯಾಗಿರುವ ದಮಯಂತಿಯ ವಿರಹದಿಂದ, **आन्तरम्** = ಆಂತರಿಕವಾದ (ಮಾನಸಿಕವಾದ), (**आमोदभरम्** = ಆನಂದಾತಿಶಯವನ್ನು) **न** (**अविन्दत**) = ಹೊಂದಲಿಲ್ಲ.

*** अविन्दत = विदिलृ-लाभे, लङ्-लकारः ।**

करेण मीनं निजकेतनं दधद्
द्रुमालवालाम्बुनिवेशशङ्कया ॥
व्यतर्कि सर्वर्तुघने वने मधुम्
स मित्रमत्रानुसरन्निव स्मरः ॥१०५॥

105. ಅನ್ವಯ : **सः** = ಅವನು (ನಳನು), **द्रुमालवालाम्बुनिवेशशङ्कया** = ನೀರು ಹಾಯಿಸುವ ಸಲುವಾಗಿ ಗಿಡ-ಮರಗಳ ಸುತ್ತಲೂ ಮಾಡಿರುವ ಪಾತಿಯನ್ನು (ಸಣ್ಣ ಹೊಂಡವನ್ನು) ಸೇರಬಹುದೆಂಬ ಸಂಶಯದಿಂದ, **निजकेतनम्** = ತನ್ನ ಧ್ವಜವಾದ, **मीनम्** = ಮೀನನ್ನು,**करेण** = ಕೈಯಿಂದ, **दधद्** = ಹಿಡಿದಿರುವವನಾಗಿ, **सर्वर्तुघने** = ಎಲ್ಲ ಋತುಗಳಿಂದ ಸಂಪದ್ಭರಿತವಾದ, **अत्र** = ಈ, **वने** = ಉದ್ಯಾನದಲ್ಲಿ, **मित्रम्** = ಗೆಳೆಯನಾದ, **मधुम्** = ವಸಂತನನ್ನು (ವಸಂತ ಋತುವನ್ನು), **अनुसरन्** = ಹಿಂಬಾಲಿಸುತ್ತಾ ಇರುವ, **स्मरः इव** = ಮನ್ಮಥನೋ ಎಂಬಂತೆ, **व्यतर्कि** = ಊಹಿಸಲ್ಪಟ್ಟನು.

ವಿವರಣೆ : ನಳನನ್ನು ನೋಡಿದಾಗ, ವಸಂತ ಋತುವನ್ನು ಹಿಂಬಾಲಿಸುತ್ತಿರುವ ಮನ್ಮಥನೋ ಎಂಬಂತೆ ಭಾಸವಾಯಿತು. ವ್ಯತರ್ಕಿ = ವಿ-ಉಪಸರ್ಗ + ತರ್ಕ-ಭಾಷಾಯಾಂ ವಿತರ್ಕೇ ಚ, ಕರ್ಮಣಿಪ್ರಯೋಗ, ಲುಙ್-ಲಕಾರ.

लताबलालास्यकलागुरुस्तरु-
प्रसूनगन्धोत्करपश्यतोहरः ॥
असेवतामुं मधुगन्धवारिणि
प्रणीतलीलाप्लवनो वनानिलः ॥१०६॥

106. ಅನ್ವಯ : **लताबलालास्यकलागुरुः** = (ಉದ್ಯಾನದ) ಬಳ್ಳಿಯೆಂಬ ನೃತ್ಯಗಾತಿಯ ನೃತ್ಯಕ್ಕೆ ಗುರುವಾಗಿರುವ, **तरुप्रसूनगन्धोत्करपश्यतोहरः** = ಮರಗಳ ಹೂವಿನ ಪರಿಮಳವೆಂಬ ಸಂಪತ್ತನ್ನು, ನೋಡುನೋಡುತ್ತಿರುವಾಗಲೇ ಕದಿಯುತ್ತಿರುವ (ಸೆಳೆಯುತ್ತಿರುವ), **मधुगन्धवारिणि** = ಮಕರಂದವೆಂಬ ಪರಿಮಳದ ನೀರಿನಲ್ಲಿ, **प्रणीतलीलाप्लवनः** = ಮಾಡಿದ ವಿಲಾಸ ಕ್ರೀಡೆಯುಳ್ಳವನಾಗಿ (ಮುಳುಗು ಹಾಕಿದವನಾಗಿ), **वनानिलः** = ಉದ್ಯಾನದ ವಾಯುದೇವನು (ಗಾಳಿಯು), **अमुम्** = ಇವನನ್ನು (ನಳನನ್ನು), **असेवत** = ಸೇವಿಸಿದನು (ಸೇವೆ ಮಾಡಿದನು).

ವಿವರಣೆ : ಮನುಷ್ಯರು ದೇವರ ಸೇವೆಯನ್ನು ಮಾಡುವುದು ಸಾಮಾನ್ಯವಾದ ರೂಢಿ. ಆದರೆ ವಾಯುದೇವನೇ ನಳನ ಸೇವೆಯನ್ನು ಮಾಡಿದನು ಎಂಬುದಾಗಿ ವರ್ಣಿಸಲಾಗಿದೆ.

अथ स्वमादाय भयेन मन्थनात्
चिरत्नरत्नाधिकमुच्चितं चिरात् ॥
निलीय तस्मिन्निव सन्नपां निधिः
वने तडाको ददृशेऽवनीभुजा ॥१०७॥

107. ಅನ್ವಯ : **अथ** = ಆಮೇಲೆ, **मन्थनात्** = (ಸಮುದ್ರ ಮಥನದಂತೆ) ಮಥನ ಮಾಡಬಹುದೆಂದು, **भयेन** = ಭಯದಿಂದ, **चिरात्** = ಬಹಳ ಸಮಯದಿಂದ, **उच्चितम्** = ಬೆಳೆದು ಬಲಿತಿರುವ, **चिरत्नरत्नाधिकम्** = ಶಾಶ್ವತವಾದ ರತ್ನಗಳಿಗಿಂತಲೂ ಹೆಚ್ಚಾದ, **स्वम्** = ಸಂಪತ್ತನ್ನು, **आदाय** = ತಂದು, **तस्मिन्** = ಆ, **वने** = ಉದ್ಯಾನದಲ್ಲಿ, **निलीय** = ಅಡಗಿಕೊಂಡು, **निवसन्** = ವಾಸಿಸುತ್ತಾ, **तडाकः** = ಸರೋವರವು, **अपाम् निधिः इव** =

ಸಮುದ್ರವೋ ಎಂಬಂತೆ, **अवनीभुजा** = ರಾಜನಿಂದ (ನಳ ಮಹಾರಾಜನಿಂದ), **ददृशे** = ನೋಡಲ್ಪಟ್ಟಿತು.

ವಿವರಣೆ : ತಸ್ಮಿನ್ನಿವಸನ್ನಪಾಮ್ - ಎಂಬಲ್ಲಿ ತಸ್ಮಿನ್+ನಿವಸನ್+ಅಪಾಮ್ ಎಂಬುದಾಗಿ ಮತ್ತು ತಸ್ಮಿನ್+ಇವ+ಸನ್+ಅಪಾಮ್ ಎಂಬುದಾಗಿಯೂ ಸಂಧಿಯನ್ನು ಬಿಡಿಸಲು ಸಾಧ್ಯವಿದೆ. ಅರ್ಥದಲ್ಲಿ ವಿಶೇಷ ವ್ಯತ್ಯಾಸಗಳು ಇರುವುದಿಲ್ಲ. ದೇವತೆಗಳು ಮತ್ತು ರಾಕ್ಷಸರು ಸೇರಿ ಸಮುದ್ರಮಥನವನ್ನು ಮಾಡಿದಂತೆ, ನನ್ನನ್ನೂ ನಳನು ಮಥಿಸಬಹುದು ಎಂಬ ಭಯದಿಂದ ಸರೋವರವು ಉದ್ಯಾನದಲ್ಲಿ ಅಡಗಿಕೊಂಡಿತು ಎಂಬುದು ಈ ಶ್ಲೋಕದಲ್ಲಿ ಇರುವ ಕಲ್ಪನೆ. ದದೃಶೇ = ದೃಶಿರ್-ಪ್ರೇಕ್ಷಣೇ, ಕರ್ಮಣಿಪ್ರಯೋಗ, ಲಿಟ್-ಲಕಾರ.

पयोनिलीनाभ्रमुकामुकावली-
रदाननन्तोरगपुच्छसुच्छवीन् ॥
जलार्धरुद्धस्य तटान्तभूभिदो
मृणालजालस्य मिषाद्बभार यः ॥१०८॥

108. ಅನ್ವಯ : ಇಲ್ಲಿಂದ ಮುಂದಿನ ಶ್ಲೋಕಗಳಲ್ಲಿ ಸರೋವರದ ವರ್ಣನೆಯು ಇದೆ. **यः** = ಯಾವ (ಸರೋವರವು), **जलार्धरुद्धस्य** = ನೀರಿನಿಂದ ಅರ್ಧ ಮುಳುಗಿರುವ, **तटान्तभूभिदः** = ದಡದ ಭೂಮಿಯನ್ನು (ಅಲೆಗಳಿಂದ) ಒಡೆಯುತ್ತಿರುವ, **मृणालजालस्य** = ತಾವರೆಯ ದಂಟುಗಳ ಗುಂಪಿನ, **मिषाद्** = ನೆಪದಿಂದ, **अनन्तोरगपुच्छसुच्छवीन्** = ಅನಂತ ಎಂಬ ನಾಗನ (ಹಾವಿನ) ಬಾಲದ ಸುಂದರವಾದ ಕಾಂತಿಗಳನ್ನು, **पयोनिलीनाभ्रमुकामुकावलीरदान्** = ನೀರಿನಲ್ಲಿ ಮುಳುಗಿರುವ, ಗುಂಪುಗುಂಪಾಗಿರುವ ಐರಾವತಗಳ ದಂತಗಳನ್ನಾಗಿ, **बभार** = ಧರಿಸಿತು.

ವಿವರಣೆ : ಮಂದವಾಗಿ ಬೀಸುತ್ತಿರುವ ಗಾಳಿಯ ಕಾರಣದಿಂದ ತಾವರೆಯ ಗಿಡಗಳು ಪದೇ ಪದೇ ದಡಕ್ಕೆ ಬಡಿಯುತ್ತಿದ್ದವು. ಇದು ಐರಾವತಗಳ ಗುಂಪು ತಮ್ಮ ದಂತಗಳಿಂದ ದಡವನ್ನು ತಿವಿಯುತ್ತಿದ್ದಂತೆ ಭಾಸವಾಗುತ್ತಿತ್ತು. ಆದ್ದರಿಂದ ತಾವರೆಯ ದಂಟುಗಳನ್ನು ನೋಡಿದಾಗ ಐರಾವತಗಳ ದಂತಗಳೋ ಎಂಬಂತೆ ಅನಿಸಿತು ಎಂದರ್ಥ.

*** अर्धं रुद्धस्य । अर्धरुद्धः । प्रथमातत्पुरुषः । अर्धं नपुंसकम् ।**

तटान्तविश्रान्ततुरङ्गमच्छटा-
स्फुटानुबिम्बोदयचुम्बनेन यः ॥

बभौ चलद्वीचिकशान्तशातनैः

सहस्रमुच्चैःश्रवसामिवाश्रयन् ॥१०९॥

109. ಅನ್ವಯ : **यः** = ಯಾವ (ಸರೋವರವು), **तटान्तविश्रान्ततुरङ्गमच्छटा-स्फुटानुबिम्बोदयचुम्बनेन** = ದಡದ ತುದಿಯಲ್ಲಿ ವಿಶ್ರಾಂತಿಯನ್ನು ಪಡೆದ (ನಳನ) ಕುದುರೆಗಳ ಗುಂಪುಗಳ ಸ್ಪಷ್ಟವಾದ ಪ್ರತಿಬಿಂಬಗಳ ತಾಗುವಿಕೆಯಿಂದ (ಮುಟ್ಟಿರುವುದರಿಂದ), **चलद्वीचिकशान्तशातनैः** = ಕಂಪಿಸುತ್ತಿರುವ ಅಲೆಗಳೆಂಬ ಚಾಟಿಗಳ ಹೊಡೆತಗಳಿಂದ, (ಹೊಡೆತಗಳ ಕಾರಣದಿಂದ), **उच्चैःश्रवसाम्** = ಕುದುರೆಗಳ, **सहस्रम्** = ಸಾವಿರವನ್ನು (ಸಾವಿರ ಕುದುರೆಗಳನ್ನು), **आश्रयन् इव** = ಆಶ್ರಯಿಸಿಕೊಳ್ಳುತ್ತಿದೆಯೋ ಎಂಬಂತೆ, **बभौ** = ಶೋಭಿಸಿತು.

ವಿವರಣೆ : ಸರೋವರದ ಸಮೀಪಕ್ಕೆ ಕೆಲವೇ ಕುದುರೆಗಳು ಬಂದಿದ್ದರೂ, ಸರೋವರದ ಅಲೆಗಳಲ್ಲಿ ಸಾವಿರಾರು ಪ್ರತಿಬಿಂಬಗಳು ಕಾಣಿಸುತ್ತಿದ್ದವು. ಆದ್ದರಿಂದ ಸಾವಿರಾರು ಕುದುರೆಗಳು ಅಲ್ಲಿಗೆ ಬಂದಿವೆಯೋ ಎಂಬಂತೆ ತೋರುತ್ತಿತ್ತು. ಇವ + ಆಶ್ರಯನ್ = ಇವಾಶ್ರಯನ್ ಮತ್ತು ಇವ + ಶ್ರಯನ್ ಎಂಬ ಎರಡೂ ಪಾಠಗಳಿವೆ. ಬಭೌ = ಭಾ- ದೀಪ್ತೌ, ಲಿಟ್-ಲಕಾರ.

सिताम्बुजानां निवहस्य यश्छलाद्

बभावलिश्यामलितोदरश्रियाम् ॥

तमःसमच्छायकलङ्कसङ्कुलम्

कुलं सुधांशोर्बहुलं वहन्बहु ॥११०॥

110. ಅನ್ವಯ : **यः** = ಯಾವ (ಸರೋವರವು), **अलिश्यामलितोदरश्रियाम्** = ದುಂಬಿಗಳಿಂದ ಕಪ್ಪಾಗಿರುವ ಮಧ್ಯಭಾಗದ ಶೋಭೆಯನ್ನು ಹೊಂದಿರುವ, **सिताम्बुजानाम्** = ಬಿಳಿದಾವರೆಗಳ, **निवहस्य** = ಸಮೂಹದ, **छलाद्** = ನೆಪದಿಂದ, **तमःसमच्छायकलङ्कसङ्कुलम्** = ಕತ್ತಲೆಗೆ ಸದೃಶವಾದ ಕಪ್ಪುಬಣ್ಣದ ಕಳಂಕದಿಂದ (ಚಂದ್ರನ ಕಲೆಯಿಂದ) ತುಂಬಿರುವ, **बहु** = ತುಂಬ, **सुधांशोः** = ಚಂದ್ರನ, **कुलम्** = ಕುಟುಂಬಗಳನ್ನು (ಗುಂಪನ್ನು), **बहुलम्** = ಬಹಳವಾಗಿ, **वहन्** = ಹೊತ್ತುಕೊಳ್ಳುತ್ತಾ, **बभौ** = ಶೋಭಿಸಿತು.

ವಿವರಣೆ : ಸರೋವರದಲ್ಲಿರುವ ಕಮಲಗಳನ್ನು ನೋಡಿದಾಗ ಕಮಲಗಳೋ ಅಥವಾ ಚಂದ್ರಬಿಂಬಗಳೋ ಎಂಬುದು ತಿಳಿಯುತ್ತಿರಲಿಲ್ಲ. ಚಂದ್ರನ ಮೇಲೆ ಕಳಂಕ ಇರುವಂತೆ, ಕಮಲದ

ಮೇಲೆ ದುಂಬಿಗಳು ಇದ್ದುದರಿಂದ, ಕಮಲಗಳೆಲ್ಲವೂ ಚಂದ್ರಬಿಂಬದಂತೆ ಕಾಣುತ್ತಿದ್ದವು. ಬಹಲಂ ಮತ್ತು ಬಹುಲಂ ಎಂಬ ಪಾಠಭೇದವಿದೆ.

*** श्यामलः अस्य सञ्जातः = श्यामलितः । तदस्य सञ्जातं तारकादिभ्य इतच् ।**

रथाङ्गभाजा कमलानुषङ्गिणा
शिलीमुखस्तोमसखेन शार्ङ्गिणा ॥
सरोजिनीस्तम्बकदम्बकैतवात्
मृणालशेषाहिभुवान्वयायि यः ॥१११॥

111. ಅನ್ವಯ : **यः** = ಯಾವ (ಸರೋವರವು), **सरोजिनीस्तम्बकदम्बकैतवात्** = ಕಮಲದ ಗಿಡಗಳ ಪೊದೆಗಳ ಗುಂಪಿನ ನೆಪದಿಂದ, **रथाङ्गभाजा** = ಚಕ್ರವಾಕ ಪಕ್ಷಿಗಳನ್ನು ಹೊಂದಿರುವ, **कमलानुषङ्गिणा** = ಕಮಲದ ಜೊತೆಗೆ (ಲಕ್ಷ್ಮಿಯ ಜೊತೆಗೆ) ಇರುವುದರಿಂದ, **शिलीमुखस्तोमसखेन** = ದುಂಬಿಗಳ ಗುಂಪಿನ ಸಾದೃಶ್ಯದಿಂದ (ಗೆಳೆಯನಿಂದ), **मृणालशेषाहिभुवा** = ತಾವರೆಯ ದಂಟಿನಂತೆ ಇರುವ ಶೇಷವೆಂಬ ಸರ್ಪದ ಆಕಾರದಲ್ಲಿರುವ, **शार्ङ्गिणा** = ವಿಷ್ಣುವಿನಿಂದ, **अन्वयायि** = ಅನುಸರಿಸಲ್ಪಟ್ಟಿತು. (ಹಿಂಬಾಲಿಸಲ್ಪಟ್ಟಿತು).

ವಿವರಣೆ : ಕಮಲಗಳು, ಕಮಲಾ (ಲಕ್ಷ್ಮೀ), ಆದಿಶೇಷ - ಇವರೆಲ್ಲರೂ ಈ ಸರೋವರದಲ್ಲಿ ಇರುವುದರಿಂದ, ಆ ಸರೋವರವನ್ನು ಹಿಂಬಾಲಿಸುತ್ತಾ ವಿಷ್ಣುವು ಅಲ್ಲಿಗೆ ಬಂದನು ಎಂದರ್ಥ. ಅನ್ವಯಾಯಿ = ಅನು-ಉಪಸರ್ಗ + ಯಾ-ಪ್ರಾಪಣೇ, ಕರ್ಮಣಿಪ್ರಯೋಗ, ಲುಙ್-ಲಕಾರ.

तरङ्गिणीरङ्कजुषः स्ववल्लभाः
तरङ्गरेखा बिभराम्बभूव यः ॥
दरोद्गतैः कोकनदौघकोरकैः
धृतप्रवालाङ्कुरसञ्चयश्च यः ॥११२॥

112. ಅನ್ವಯ : **यः** = ಯಾವ (ಸರೋವರವು), **अङ्कजुषः** = ಹತ್ತಿರದಲ್ಲಿರುವ (ಮಡಿಲಲ್ಲಿರುವ, ತೊಡೆಯ ಮೇಲಿರುವ), **तरङ्गरेखाः** = ಅಲೆಗಳ ಸಮೂಹವೆಂಬ, **स्ववल्लभाः** = ತಮ್ಮ ಪ್ರಿಯತಮೆಯರಾದ, **तरङ्गिणीः** = ನದಿಗಳನ್ನು, **बिभराम्बभूव** = ಧರಿಸಿಕೊಂಡಿದ್ದಿತೋ, **च** = ಮತ್ತು, **यः** = ಯಾವ (ಸರೋವರವು),

दरोद्गतैः = ಸ್ವಲ್ಪ ಮೇಲೆದ್ದಿರುವಂತಹ, **कोकनदौघकोरकैः** = ಕೆನ್ನೈದಿಲೆಯ ಮೊಗ್ಗುಗಳಿಂದ (ಮೊಗ್ಗುಗಳಿಂದಾಗಿ), **धृतप्रवालाङ्कुरसञ्चयः** = ಹವಳದ ಚಿಗುರುಗಳ ಗೊಂಚಲನ್ನು ಧರಿಸಿರುವುದು, (ಆಗಿತ್ತು).

ವಿವರಣೆ : ಬಿಭರಾಂಬಭೂವ = ಡುಭೃಞ್-ಭರಣೇ, ಲಿಟ್-ಲಕಾರ.

*** सं + चयः = सञ्चयः । परसवर्णसन्धिः । अनुस्वारस्य ययि परसवर्णः-८-४-५८.**

*** सञ्चयः + च = सञ्चयश्च । श्चुत्वसन्धिः । स्तोश्चुना श्चुः-८-४-४०.**

महीयसः पङ्कजमण्डलस्य यः

छलेन गौरस्य च मेचकस्य च ॥

नलेन मेने सलिले निलीनयोः

त्विषं विमुञ्चन्विधुकालकूटयोः ॥११३॥

113. ಅನ್ವಯ : **च** = ಮತ್ತು, **यः** = ಯಾವ (ಸರೋವರವು), **महीयसः** = ಬಹಳ ದೊಡ್ಡದಾದ, **गौरस्य** = ಬಿಳಿಯ, **च** = ಮತ್ತು, **मेचकस्य** = ಕಪ್ಪಾದ, **पङ्कजमण्डलस्य** = ತಾವರೆಗಳ ಸಮೂಹದ, **छलेन** = ನೆಪದಿಂದ, **सलिले** = ನೀರಿನಲ್ಲಿ, **निलीनयोः** = ಮುಳುಗಿರುವ, **विधुकालकूटयोः** = ಚಂದ್ರನ ಮತ್ತು ಕಾಲಕೂಟ ವಿಷದ, **त्विषम्** = ಶೋಭೆಯನ್ನು, **विमुञ्चन्** = ಬಿಡುತ್ತಿರುವುದಾಗಿ (ಹೊರಹೊಮ್ಮಿಸುತ್ತಿರುವುದಾಗಿ), **नलेन** = ನಳನಿಂದ, **मेने** = ತಿಳಿಯಲ್ಪಟ್ಟಿತು.

ವಿವರಣೆ : ಕಾಲಕೂಟ ಎಂಬ ವಿಷ ಮತ್ತು ಚಂದ್ರ ಇವೆರಡೂ ಕೂಡ ಸಮುದ್ರಮಥನದ ಸಮಯದಲ್ಲಿ ಸಮುದ್ರದಿಂದ ಮೇಲೆ ಬಂದಿವೆ. ಹೀಗೆ ಒಟ್ಟಿಗೆ ಹುಟ್ಟಿರುವುದರಿಂದ ಚಂದ್ರ ಮತ್ತು ಕಾಲಕೂಟ ಅಣ್ಣ-ತಮ್ಮಂದಿರೂ ಆಗಿದ್ದಾರೆ. ಆದ್ದರಿಂದ ಈ ಸರೋವರದಲ್ಲಿ ಒಟ್ಟಿಗೆ ಇದ್ದಿರಬಹುದು ಎಂಬುದು ಕಲ್ಪನೆ. ಇಲ್ಲಿಯವರೆಗಿನ ಶ್ಲೋಕಗಳಲ್ಲಿ ಸರೋವರದ ವರ್ಣನೆಯನ್ನು ಮಾಡಲಾಗಿದೆ. ಮೇನೇ = ಮನು - ಅವಬೋಧನೇ, ಲಿಟ್-ಲಕಾರ.

*** निलीनश्च निलीनश्च । निलीनौ । तयोः । निलीनयोः । एकशेषः ।**
सरूपाणामेकशेष एकविभक्तौ ।

चलीकृता यत्र तरङ्गरिङ्गणैः

अबालशैवाललतापरम्पराः ॥

ध्रुवं दधुर्वाडवहव्यवाडव-

स्थितिप्ररोहत्तमभूमधूमताम् ॥११४॥

114. ಅನ್ವಯ : **यत्र** = ಯಾವುದರಲ್ಲಿ (ಸರೋವರದಲ್ಲಿ), **तरङ्गरिङ्गणैः** = ಅಲೆಗಳ ಕಂಪನಗಳಿಂದ, **चलीकृताः** = ಚಂಚಲವಾಗಿ ಮಾಡಲ್ಪಟ್ಟಿರುವ, **अबालशैवाललतापरम्पराः** = ಚೆನ್ನಾಗಿ ಬೆಳೆದಿರುವ ಪಾಚಿ ಎಂಬ ಬಳ್ಳಿಗಳ ಸಾಲುಗಳು, **वाडवहव्यवाडवस्थितिप्ररोहत्तमभूमधूमताम्** = ವಾಡವಾಗ್ನಿಯ ಇರುವಿಕೆಯಿಂದಾಗಿ ಚೆನ್ನಾಗಿ ಮೇಲೇಳುತ್ತಿರುವ ಬಹಳವಾದ ಹೊಗೆಯನ್ನು, **ध्रुवम्** = ನಿಶ್ಚಯವಾಗಿಯೂ, **दधुः** = ಧರಿಸಿದವು.

ವಿವರಣೆ : ಪಾಚಿ ಹಸಿರಾಗಿರುವುದರಿಂದ ಮತ್ತು ದೂರದಿಂದ ನೋಡಿದಾಗ ಕಪ್ಪಾಗಿ ಕಾಣಿಸುವುದರಿಂದ, ಪಾಚಿಯನ್ನು ವಾಡವಾಗ್ನಿಯ ಹೊಗೆಗೆ ಹೋಲಿಸಲಾಗಿದೆ. ಸಮುದ್ರದಲ್ಲಿ ನಿರಂತರವಾಗಿ ಉರಿಯುತ್ತಿರುವ ಬೆಂಕಿಯನ್ನು ವಾಡವಾಗ್ನಿ ಎನ್ನುತ್ತಾರೆ.

प्रकाममादित्यमवाप्य कण्टकैः

करम्बितामोदभरं विवृण्वती ॥

धृतस्फुटश्रीगृहविग्रहा दिवा

सरोजिनी यत्प्रभवाप्सरायिता ॥११५॥

115. ಅನ್ವಯ : **आदित्यम्** = ಸೂರ್ಯನನ್ನು, **अवाप्य** = ಪಡೆದು (ತಲುಪಿ), **प्रकामम्** = ಚೆನ್ನಾಗಿ, **कण्टकैः** = (ತಾವರೆಯ ದಂಟಿನ) ಚೂಪಾದ ತುದಿಗಳಿಂದ, **करम्बिता** = ಹರಡಿರುವವಳಾಗಿ ಅಥವಾ ಹೊಂದಿದವಳಾಗಿ (ತುಟಿಯಿಂದ ಹೊರ ಬಂದಿರುವ ಹಲ್ಲುಗಳು ಇರುವವಳಾಗಿ), **आमोदभरम्** = ಪರಿಮಳದ ಹೆಚ್ಚಳವನ್ನು, **विवृण्वती** = ವಿವರಿಸುತ್ತಿರುವವಳಾಗಿ, **दिवा** = ಹಗಲಿನಲ್ಲಿ, **धृतस्फुटश्रीगृहविग्रहा** = ಸ್ಪಷ್ಟವಾದ ಲಕ್ಷ್ಮಿಯ ಮನೆಯೆಂಬ ಕಮಲವನ್ನೇ ಶರೀರವಾಗಿ ಧರಿಸಿರುವ, **सरोजिनी** = ಕಮಲದ ಬಳ್ಳಿಯು, **यत्प्रभवा** = ಯಾವ ಈ ಸರೋವರದ ಕಾರಣದಿಂದಾಗಿ, **अप्सरायिता** = ಅಪ್ಸರೆಯಂತಾದಳು.

ವಿವರಣೆ : ಸೂರ್ಯನು ಆಗಸದಲ್ಲಿ ಮೇಲೆ ಬಂದಂತೆ ತಾವರೆಯ ಗಿಡವೂ ಸೂರ್ಯನ ಕಡೆಗೆ ಬಾಗುತ್ತದೆ. ಆದ್ದರಿಂದ ಕಮಲದ ಬಳ್ಳಿಯು ಸೂರ್ಯನನ್ನು ತಲುಪುತ್ತಾಳೆ ಎಂದರ್ಥ. ಕಮಲದ ಹೂವಿನ ಹೊರಭಾಗವು ಕೆಂಪಾಗಿದ್ದು, ತುದಿಯು ಸ್ವಲ್ಪ ಬಿಳಿಯಾಗಿರುವುದರಿಂದ, ತುಟಿಯಿಂದ ಹೊರ ಬಂದಿರುವ ಹಲ್ಲುಗಳಿರುವ ಯುವತಿಯಂತೆ ಆ ಕಮಲದ ಬಳ್ಳಿಯು ಕಾಣಿಸುತ್ತಾಳೆ.

*** कण्टकश्च कण्टकश्च कण्टकश्च । कण्टकाः । तैः । कण्टकैः । एकशेषः । सरूपाणामेकशेष एकविभक्तौ ।**

यदम्बुपूरप्रतिबिम्बितायतिः

मरुत्तरङ्गैस्तरलस्तटद्रुमः ॥

निमज्य मैनाकमहीभृतः सतः

ततान पक्षान्धुवतः सपक्षताम् ॥११६॥

116. ಅನ್ವಯ : **मरुत्तरङ्गैः** = ಗಾಳಿಯ ಅಲೆಗಳಿಂದ, **तरलः** = ಚಂಚಲವಾದ, (ಮತ್ತು) **यदम्बुपूरप्रतिबिम्बितायतिः** = ಯಾವ ನೀರು ತುಂಬಿರುವ ಸರೋವರದಲ್ಲಿ ಪ್ರತಿಬಿಂಬ ಉದ್ದವಾಗಿರುವ, **तटद्रुमः** = ದಡದಲ್ಲಿರುವ ಮರವು, **निमज्य** = ಮುಳುಗಿ, **सतः** = ಇರುವಂತಹ, **पक्षान्** = ರೆಕ್ಕೆಗಳನ್ನು, **धुवतः** = ಬಡಿಯುತ್ತಿರುವಂತಹ (ಕಂಪಿಸುತ್ತಿರುವಂತಹ), **मैनाकमहीभृतः** = ಮೈನಾಕಪರ್ವತದ, **सपक्षताम्** = ಸಾಮ್ಯತೆಯನ್ನು, **ततान** = ಉಂಟುಮಾಡಿತು.

ವಿವರಣೆ : ಸರೋವರದ ನೀರು ಅಲುಗಾಡದೇ ಇದ್ದಾಗ ದಡದಲ್ಲಿರುವ ಮರದ ಉದ್ದವಾದ ಪ್ರತಿಬಿಂಬವು ನೀರಿನಲ್ಲಿ ಕಾಣಿಸುತ್ತದೆ. ಆದರೆ ನೀರು ಕಂಪಿಸಿದಾಗ, ಮರವು ನೀರಿನಲ್ಲಿ ಮುಳುಗಿದಂತೆಯೂ, ಅದರ ರೆಂಬೆಗಳು (ರೆಕ್ಕೆಗಳು) ಸಮುದ್ರದ ನೀರಿನಲ್ಲಿ ಬಡಿಯುತ್ತಿರುವಂತೆಯೂ ಕಾಣಿಸುತ್ತದೆ. ಇದು ನೀರಿನಲ್ಲಿ ಸ್ವಲ್ಪ ಮುಳುಗಿರುವ ಮೈನಾಕಪರ್ವತದಂತೆ ಕಾಣಿಸಿತು ಎಂದರ್ಥ.

ಹಿಂದೆ ಎಲ್ಲ ಪರ್ವತಗಳಿಗೂ ರೆಕ್ಕೆಗಳಿದ್ದವು ಎಂಬ ಕಥೆಗಳಿವೆ. ಆ ಕಥೆಗಳ ಪ್ರಕಾರ ಒಂದು ದಿನ ಇಂದ್ರನು ಆ ಪರ್ವತಗಳ ರೆಕ್ಕೆಯನ್ನು ಕತ್ತರಿಸುತ್ತಾನೆ. ಆದರೆ ಮೈನಾಕ ಪರ್ವತವು ಓಡಿಹೋಗಿ, ತಪ್ಪಿಸಿಕೊಳ್ಳುತ್ತದೆ. ಅದು ಸಮುದ್ರದಲ್ಲಿ ಮುಳುಗಿ ತನ್ನ ರೆಕ್ಕೆಗಳನ್ನು ಉಳಿಸಿಕೊಳ್ಳುತ್ತದೆ. ಹಾಗೆ ಸಮುದ್ರದಲ್ಲಿ ಮುಳುಗಿರುವ ಮೈನಾಕಪರ್ವತವೋ ಎಂಬಂತೆ, ಸರೋವರದಲ್ಲಿ ಉಂಟಾಗಿರುವ ಮರಗಳ ಪ್ರತಿಬಿಂಬಗಳು ಕಾಣಿಸುತ್ತವೆ ಎಂದರ್ಥ.

ತತಾನ = ತನು-ವಿಸ್ತಾರೇ, ಲಿಟ್-ಲಕಾರ.

पयोधिलक्ष्मीमुषि केलिपल्वले

रिरंसुहंसीकलनादसादरम् ॥

स तत्र चित्रं विचरन्तमन्तिके

हिरण्मयं हंसमबोधि नैषधः ॥११७॥

117. ಅನ್ವಯ : **सः** = ಅವನು, **नैषधः** = ನಿಷಧ ದೇಶದ ರಾಜನಾದ ನಳನು, **पयोधिलक्ष्मीमुषि** = ಸಮುದ್ರದ ಶೋಭೆಯನ್ನೂ ಮೀರಿಸುವಂತಹ, **केलिपल्वले** = ಕ್ರೀಡಾಸರೋವರದಲ್ಲಿ, **रिरंसुहंसीकलनादसादरम्** = ಆಟವಾಡಲು (ರಮಿಸಲು) ಬಯಸುತ್ತಿರುವ ಹೆಣ್ಣುಹಂಸಗಳ ಧ್ವನಿಗಳಲ್ಲಿ ಗೌರವಪೂರ್ವಕವಾಗಿ, **तत्र** = ಅಲ್ಲಿ, **अन्तिके** = ಹತ್ತಿರದಲ್ಲಿ, **विचरन्तम्** = ಸುತ್ತಾಡುತ್ತಿರುವ, **चित्रम्** = ವಿಚಿತ್ರವಾದ (ಅದ್ಭುತವಾದ), **हिरण्मयम्** = ಬಂಗಾರದ, **हंसम्** = ಹಂಸವನ್ನು, **अबोधि** = ತಿಳಿದುಕೊಂಡನು (ನೋಡಿದನು).

ವಿವರಣೆ : ಅಬೋಧಿ = ಬುಧ - ಅವಗಮನೇ, ಕರ್ತರಿಪ್ರಯೋಗ, ಲುಙ್-ಲಕಾರ.

प्रियासु बालासु रतिक्षमासु च

द्विपत्रितं पल्लवितं च बिभ्रतम् ॥

स्मरार्जितं रागमहीरुहाङ्कुरम्

मिषेण चञ्च्वोश्चरणद्वयस्य च ॥११८॥

118. ಅನ್ವಯ : **च** = ಮತ್ತು, **बालासु** = (ಹಂಸದ) ಮರಿಗಳಲ್ಲಿ, **च** = ಮತ್ತು, **रतिक्षमासु** = ಯೌವನವನ್ನು ಪಡೆದ, **प्रियासु** = ಪ್ರಿಯತಮೆಯರಲ್ಲಿ (ಹಂಸಗಳಲ್ಲಿ), **चञ्च्वोः** = ಎರಡು ಕೊಕ್ಕುಗಳ, **च** = ಮತ್ತು, **चरणद्वयस्य** = ಎರಡು ಕಾಲುಗಳ, **मिषेण** = ನೆಪದಿಂದ, **द्विपत्रितम्** = ಎರಡು ಎಲೆಗಳಿರುವ, **पल्लवितम्** = ಅರಳಿರುವ (ಚಿಗುರಿನಿಂದ ಕೂಡಿರುವ), **स्मरार्जितम्** = ಅನುರಾಗವನ್ನು ಹೆಚ್ಚಿಸುವ, **रागमहीरुहाङ्कुरम्** = ಬಣ್ಣವಿರುವ ಮರದ ಚಿಗುರನ್ನು, **बिभ्रतम्** = ಹಿಡಿದು ಕೊಂಡಿರುವ, [**हंसम्** = ಹಂಸವನ್ನು, **अबोधि** = ತಿಳಿದುಕೊಂಡನು (ನೋಡಿದನು).]

ವಿವರಣೆ : ಹಂಸವನ್ನು ನೋಡಿದನು - ಎಂಬುದನ್ನು ಹಿಂದಿನ ಶ್ಲೋಕದಿಂದ ಸೇರಿಸಿ ಅನ್ವಯವನ್ನು ಮಾಡಿಕೊಳ್ಳಬೇಕು.

* चञ्चुश्च चञ्चुश्च = चञ्चू । तयोः । चञ्च्वोः । एकशेषः । सरूपाणामेकशेष एकविभक्तौ ।

* द्वयोः पत्रयोः समाहारः = द्विपत्रम् । समाहारद्विगुः । सङ्ख्यापूर्वो द्विगुः । तद्धितार्थोत्तरपदसमाहारे च ।

* द्विपत्रम् अस्य सञ्जातम् = द्विपत्रितम् । तदस्य सञ्जातं तारकादिभ्य इतच् ।

महीमहेन्द्रस्तमवेक्ष्य स क्षणम्
शकुन्तमेकान्तमनोविनोदिनम् ॥
प्रियावियोगाद्विधुरोऽपि निर्भरम्
कुतूहलाक्रान्तमना मनागभूत् ॥११९॥

119. ಅನ್ವಯ : **महीमहेन्द्रः** = ಭೂಮಂಡಲದ ಚಕ್ರವರ್ತಿಯಾದ, **सः** = ಅವನು (ನಳನು), **एकान्तमनोविनोदिनम्** = ನಿಶ್ಚಯವಾಗಿಯೂ (ಯಾವಾಗಲೂ) ಮನಸ್ಸನ್ನು ಸಂತೋಷಪಡಿಸುವಂತಹ, **तम्** = ಆ, **शकुन्तम्** = ಪಕ್ಷಿಯನ್ನು (ಹಂಸವನ್ನು), **क्षणम्** = ಒಂದು ಕ್ಷಣ, **अवेक्ष्य** = ನೋಡಿ, **प्रियावियोगात्** = ಪ್ರಿಯತಮೆಯ (ದಮಯಂತಿಯ) ವಿಯೋಗದಿಂದ, **निर्भरम्** = ಬಹಳವಾಗಿ, **विधुरः अपि** = ಒಬ್ಬಂಟಿಯಾಗಿದ್ದರೂ ಕೂಡ, **मनाक्** = ಸ್ವಲ್ಪ, **कुतूहलाक्रान्तमनाः** = ಕುತೂಹಲದಿಂದ ಆಕ್ರಮಿಸಲ್ಪಟ್ಟ ಮನಸ್ಸುಳ್ಳವನು, **अभूत्** = ಆದನು.

ವಿವರಣೆ : ದಮಯಂತಿಯ ಚಿಂತೆಯಲ್ಲಿಯೇ ಮುಳುಗಿದ್ದರೂ, ವಿಚಿತ್ರವಾದ ಹಂಸವನ್ನು ನೋಡಿ, ಹಂಸದ ಕಡೆಗೆ ನಳನು ಆಕರ್ಷಿತನಾದನು.

अवश्यभव्येष्वनवग्रहग्रहा
यया दिशा धावति वेधसः स्पृहा ॥
तृणेन वात्येव तयानुगम्यते
जनस्य चित्तेन भृशावशात्मना ॥१२०॥

120. ಅನ್ವಯ : **अवश्यभव्येषु** = ಭವಿಷ್ಯದಲ್ಲಿ ಆಗಲೇಬೇಕಾಗಿರುವ ಘಟನೆಗಳಲ್ಲಿ, **अनवग्रहग्रहा** = ಅಡೆತಡೆಯಿಲ್ಲದೆ ಮುನ್ನಡೆಯುವಂತಹ, **वेधसः** = ಬ್ರಹ್ಮನ, **स्पृहा** = ಆಸೆಯು, **यया** = ಯಾವ, **दिशा** = ದಿಕ್ಕಿನಲ್ಲಿ, **धावति** = ಓಡುತ್ತದೆಯೋ, **तया** = ಅದೇ ದಿಕ್ಕಿನಲ್ಲಿ, **भृशावशात्मना** = ಅತ್ಯಂತ ಪರತಂತ್ರವೆಂಬ ಕಾರಣದಿಂದ, **जनस्य** = ಮನುಷ್ಯನ (ಜನರ), **चित्तेन** = ಮನಸ್ಸೆಂಬ, **तृणेन** = ಹುಲ್ಲಿನಿಂದ, **वात्या इव** = ಬಿರುಗಾಳಿಯೋ ಎಂಬಂತೆ, **अनुगम्यते** = ಹಿಂಬಾಲಿಸಲ್ಪಡುತ್ತದೆ.

ವಿವರಣೆ : ಹೇಗೆ ಹುಲ್ಲಿನ ಕಡ್ಡಿಯು ಬಿರುಗಾಳಿ ಬೀಸಿದ ಕಡೆಗೆ ಹೋಗುವುದೋ ಹಾಗೆಯೇ ಬ್ರಹ್ಮನ ಆಸೆಯಂತೆ ಮನುಷ್ಯನ ಮನಸ್ಸು ಓಡುತ್ತಿರುತ್ತದೆ.

*** अवश्यं भव्यानि । अवश्यभव्यानि । तेषु । अवश्यभव्येषु । केवलसमासः । सह सुपा ।**

अथावलम्ब्य क्षणमेकपादिकाम्

तदा निदद्रावुपपल्वलं खगः ॥

स तिर्यगावर्जितकन्धरः शिरः

पिधाय पक्षेण रतिक्लमालसः ॥१२१॥

121. ಅನ್ವಯ : **अथ** = ಆಮೇಲೆ (ನಳನು ಹಂಸವನ್ನು ನೋಡಿದ ಮೇಲೆ), **रतिक्लमालसः** = ಹೆಣ್ಣುಹಂಸಗಳ ಜೊತೆಗೆ ಆಟವಾಡಲು ಆಲಸ್ಯವುಳ್ಳದ್ದಾಗಿ, **सः** = ಆ, **खगः** = ಪಕ್ಷಿಯು (ಹಂಸವು), **तदा** = ಆಗ, **एकपादिकाम्** = ಒಂದು ಕಾಲನ್ನು, **अवलम्ब्य** = ಆಧರಿಸಿ, **तिर्यगावर्जितकन्धरः** = ಅಡ್ಡವಾಗಿ ಕುತ್ತಿಗೆಯನ್ನು ಬಾಗಿಸಿ, **पक्षेण** = ರೆಕ್ಕೆಯಿಂದ, **शिरः** = ತಲೆಯನ್ನು, **पिधाय** = ಮುಚ್ಚಿ, **उपपल्वलम्** = ಸರೋವರದ ಸಮೀಪದಲ್ಲಿ, **क्षणम्** = ಒಂದು ಕ್ಷಣ, **निदद्रौ** = ನಿದ್ರಿಸಿತು.

ವಿವರಣೆ : ನಿದದ್ರೌ = ನಿ-ಉಪಸರ್ಗ + ದ್ರಾ - ಕುತ್ಸಾಯಾಂ ಗತೌ, ಲಿಟ್-ಲಕಾರ.

*** पल्वलस्य समीपम् = उपपल्वलम् । अव्ययीभावः समासः । अव्ययं विभक्तीति सूत्रम् ।**

*** पिधाय ।** ಅವ ಮತ್ತು ಅಪಿ ಎಂಬ ಅವ್ಯಯಗಳನ್ನು ಉಪಸರ್ಗಗಳಾಗಿ ಬಳಸಿದಾಗ ಭಾಗುರಿ ಆಚಾರ್ಯರ ಮತದಲ್ಲಿ ಅಕಾರಕ್ಕೆ ವಿಕಲ್ಪವಾಗಿ ಲೋಪವು ಬರುತ್ತದೆ. ಆಗ ಅಪಿಧಾಯ / ಪಿಧಾಯ, ಅವಗಾಹ್ಯ / ವಗಾಹ್ಯ ಮೊದಲಾದ ಎರಡು ರೂಪಗಳು ಉಂಟಾಗುತ್ತವೆ. ಅದಕ್ಕೆ ನಿಯಮ ಈ ಕೆಳಗಿನಂತಿದೆ -

वष्टिभागुरिरल्लोपमवाप्योरुपसर्गयोः ।
आपं चैव हलन्तानां यथा वाचा निशा दिशा ॥

सनालमात्माननिर्जितप्रभम्

ह्रिया नतं काञ्चनमम्बुजन्म किम् ॥

अबुद्ध तं विद्रुमदण्डमण्डितम्

स पीतमम्भःप्रभुचामरं नु किम् ॥१२२॥

122. ಅನ್ವಯ : **सः** = ಅವನು (ನಳನು), **आत्माननिर्जितप्रभम्** = ತನ್ನ ಮುಖವನ್ನು ಸೋಲಿಸಿದ ಸೌಂದರ್ಯವುಳ್ಳಂತಹ, **तम्** = ಅದನ್ನು (ಹಂಸವನ್ನು), **ह्रिया** = ನಾಚಿಕೆಯಿಂದ, **नतम्** = ಬಾಗಿರುವ, **सनालम्** = ದಂಟಿನಿಂದ ಕೂಡಿರುವ, **काञ्चनम्** = ಬಂಗಾರದ, **अम्बुजन्म**

किम् = ತಾವರೆಯೇ ? विद्रुमदण्डमण्डितम् = ಹವಳದ ಕೋಲಿನಿಂದ (ಹಿಡಿಕೆಯಿಂದ) ಶೋಭಿಸುತ್ತಿರುವ, पीतम् = ಹಳದಿ ಬಣ್ಣದ, अम्भःप्रभुचामरम् नु किम् = ನೀರಿನ ರಾಜನಾದ ವರುಣ ದೇವರ ಚಾಮರವೇನು ?, (ಎಂಬುದಾಗಿ) अबुद्ध = ತಿಳಿದನು.

ವಿವರಣೆ : ಹಂಸವನ್ನು ನೋಡಿದಾಗ, ಚಿನ್ನದ ತಾವರೆಯೋ ? ಅಥವಾ ವರುಣ ದೇವರ ಹವಳದ ಹಿಡಿಕೆಯಿರುವ ಚಾಮರವೋ ಎಂದು ನಳನಿಗೆ ಅನಿಸಿತು. ಅಬುದ್ಧ = ಬುಧ - ಅವಗಮನೇ, ಲುಙ್-ಲಕಾರ.

* आत्म + आननम् = आत्माननम् । सवर्णदीर्घसन्धिः । अकः सवर्णे दीर्घः-६-१-१०१.

कृतावरोहस्य हयादुपानहौ
ततः पदे रेजतुरस्य बिभ्रती ॥
तयोः प्रवालैर्वनयोस्तथाम्बुजैः
नियोद्धुकामे किमु बद्धवर्मणी ॥१२३॥

123. ಅನ್ವಯ : ततः = ಆಮೇಲೆ, हयात् = ಕುದುರೆಯಿಂದ, कृतावरोहस्य = ಕೆಳಗಿಳಿದಿರುವ, अस्य = ಇವನ (ನಳನ), उपानहौ = ಪಾದರಕ್ಷೆಗಳನ್ನು, बिभ्रती = ಧರಿಸಿರುವ, पदे = ಎರಡೂ ಕಾಲುಗಳು, तयोः = ಆ, वनयोः = ನೀರು ಮತ್ತು ಕಾಡುಗಳ, प्रवालैः = ಚಿಗುರುಗಳ ಜೊತೆಗೆ, तथा = ಹಾಗೆಯೇ (ಮತ್ತು) अम्बुजैः = ತಾವರೆಗಳ ಜೊತೆಗೆ, नियोद्धुकामे = ಯುದ್ಧಮಾಡಲು ಬಯಸಿರುವ (ಸ್ಪರ್ಧೆಗಿಳಿದಿರುವ), बद्धवर्मणी = ಕವಚವನ್ನು ಕಟ್ಟಿಕೊಂಡಿರುವವುಗಳೋ, किमु = ಏನೋ ? (ಎಂಬಂತೆ), रेजतुः = ಶೋಭಿಸಿದವು.

ವಿವರಣೆ : ಚಿಗುರುಗಳು ಕೋಮಲವಾಗಿರುತ್ತವೆ. ಹಾಗೆಯೇ ಕಮಲಗಳು ಸುಂದರವಾಗಿರುತ್ತವೆ. ಇವುಗಳ ಜೊತೆಗೆ ಸ್ಪರ್ಧೆ ಮಾಡಬೇಕೆಂಬ ಆಸೆಯಿಂದ ನಳನ ಕಾಲುಗಳು ಪಾದರಕ್ಷೆಗಳೆಂಬ ಕವಚಗಳನ್ನು ಧರಿಸಿ, ಯುದ್ಧ ಮಾಡಲು ಸಿದ್ಧವಾದವುಗಳಂತೆ ಕಾಣಿಸಿದವು. ಏಕೆಂದರೆ ನಳನ ಕಾಲುಗಳೂ ಕೂಡ ಚಿಗುರಿನಂತೆ ಕೋಮಲವಾಗಿಯೂ, ತಾವರೆಯಂತೆ ಸುಂದರವಾಗಿಯೂ ಇದ್ದವು. ರೇಜತುಃ = ರಾಜೃ - ದೀಪ್ತೌ, ಲಿಟ್-ಲಕಾರ.

विधाय मूर्तिं कपटेन वामनीम्
स्वयं बलिध्वंसिविडम्बिनीमयम् ॥
उपेतपार्श्वश्चरणेन मौनिना

नृपः पतङ्गं समधत्त पाणिना ॥१२४॥

124. ಅನ್ವಯ : **अयम्** = ಈ, **नृपः** = ರಾಜನು (ನಳನು), **स्वयम्** = ತಾನೇ (ಉದ್ದೇಶ ಪೂರ್ವಕವಾಗಿ), **कपटेन** = ಕಪಟತನದಿಂದ, **वामनीम्** = ಚಿಕ್ಕದಾದ, **बलिध्वंसिविडम्बिनीम्** = ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದ ವಾಮನಾವತಾರವನ್ನು ಅನುಕರಣೆ ಮಾಡುವ, **मूर्तिम्** = ದೇಹವನ್ನು, **विधाय** = ಧರಿಸಿ, **मौनिना** = ಮೌನವಾದ (ಸದ್ದಿಲ್ಲದ), **चरणेन** = ಹೆಜ್ಜೆಯಿಂದ, **उपेतपार्श्वः** = ಹತ್ತಿರಕ್ಕೆ ಹೋದವನಾಗಿ, **पाणिना** = ಕೈಯಿಂದ, **पतङ्गम्** = ಹಕ್ಕಿಯನ್ನು (ಹಂಸವನ್ನು), **समधत्त** = ಹಿಡಿದನು.

ವಿವರಣೆ : ಪಕ್ಷಿಯನ್ನಾಗಲಿ ಅಥವಾ ಹಂಸವನ್ನಾಗಲಿ ಕೈಯಿಂದ ಹಿಡಿಯುವುದು ಕಷ್ಟ. ಆದ್ದರಿಂದ ನಳನು ತನ್ನ ದೇಹವನ್ನು ವಾಮನಮೂರ್ತಿಯಂತೆ ಚಿಕ್ಕದಾಗಿ ಮಾಡಿಕೊಂಡು, ಸದ್ದಿಲ್ಲದ ಬೆಕ್ಕಿನ ಹೆಜ್ಜೆಗಳನ್ನಿಡುತ್ತಾ, ಹಂಸದ ಹತ್ತಿರ ಹೋಗಿ, ಹಂಸವನ್ನು ಹಿಡಿದನು ಎಂದರ್ಥ. ಸಮಧತ್ತ = ಸಮ್ - ಉಪಸರ್ಗ + ಡುಧಾಞ್ - ಧಾರಣಪೋಷಣಯೋಃ, ಲಙ್-ಲಕಾರ.

तदात्तमात्मानमवेत्य सम्भ्रमात्
पुनःपुनः प्रायसदुत्प्लवाय सः ॥
गतो विरुत्योड्डयने निराशताम्
करौ निरोद्धुर्दशति स्म केवलम् ॥१२५॥

125. ಅನ್ವಯ : **सः** = ಅದು (ಹಂಸವು), **आत्मानम्** = ತನ್ನನ್ನು, **तदात्तम्** = ಅವನ (ನಳನ) ಅಡಿಯಾಳನ್ನಾಗಿ, **अवेत्य** = ತಿಳಿದು, **सम्भ्रमात्** = ಗಾಬರಿಯಿಂದ, **उत्प्लवाय** = ಮೇಲೆ ಹಾರುವುದಕ್ಕೆ, **पुनः पुनः** = ಮತ್ತೆ ಮತ್ತೆ, **प्रायसत्** = ಪ್ರಯತ್ನಿಸಿತು. **उड्डयने** = ಹಾರುವುದಕ್ಕೆ (ಹಾರುವ ವಿಷಯದಲ್ಲಿ), **निराशताम्** = ನಿರಾಸೆಯನ್ನು, **गतः** = ಹೊಂದಿದ್ದಾಗಿ, **विरुत्य** = ಕಿರುಚುತ್ತಾ, **केवलम्** = ಕೇವಲ, **निरोद्धुः** = ತಡೆದವನ (ಹಂಸವನ್ನು ಹಿಡಿದ ನಳನ), **करौ** = ಕೈಗಳನ್ನು, **दशति स्म** = ಕಚ್ಚುತ್ತಿತ್ತು.

ವಿವರಣೆ : ಪ್ರಾಯಸತ್ = ಪ್ರ - ಉಪಸರ್ಗ + ಯಸು - ಪ್ರಯತ್ನೇ, ಲಙ್-ಲಕಾರ. ದಶತಿ ಸ್ಮ - ಸ್ಮ ಎಂಬ ಅವ್ಯಯವು ವರ್ತಮಾನ ಕಾಲದ ರೂಪದೊಂದಿಗೆ ಸಂಬಂಧವನ್ನು ಹೊಂದಿದಾಗ, ಭೂತಕಾಲದ ಅರ್ಥವನ್ನು ಕೊಡುತ್ತದೆ. ದಶತಿ = ದಂಶ - ದಶನೇ, ಲಟ್-ಲಕಾರ.

* उत् + डयने = उद् डयने । जश्त्वसन्धिः । झलां जशोऽन्ते ।

* उद् + डयने = उड्डयने । ष्टुत्वसन्धिः । ष्टुना ष्टुः ।

ससम्भ्रमोत्पातिपतत्कुलाकुलम्
सरः प्रपद्योत्कतयानुकम्प्रताम् ॥
तमूर्मिलोलैः पतगग्रहान्नृपम्
न्यवारयद्वारिरुहैः करैरिव ॥१२६॥

126. ಅನ್ವಯ : ससम्भ्रमोत्पातिपतत्कुलाकुलम् = ಆ ಕ್ಷಣದಲ್ಲಿ (ಭಯದಿಂದ) ಹಾರುತ್ತಿರುವ ಪಕ್ಷಿಗಳ ಗುಂಪುಗಳಿಂದ ಆವರಿಸಿದ, सरः = ಸರೋವರವು, उत्कतया = ಉತ್ಕಂಠತೆಯಿಂದ (ಬಹಳ ಒಲವಿನಿಂದ), अनुकम्प्रताम् = ಕರುಣೆಯನ್ನು, प्रपद्य = ಹೊಂದಿ, तम् = ಆ, नृपम् = ರಾಜನನ್ನು (ನಳನನ್ನು), ऊर्मिलोलैः = ಅಲೆಗಳಿಂದ ಚಂಚಲವಾದ, वारिरुहैः = ಕಮಲಗಳೆಂಬ, करैः इव = ಕೈಗಳಿಂದಲೋ ಎಂಬಂತೆ, पतगग्रहात् = ಹಕ್ಕಿಯನ್ನು (ಹಂಸವನ್ನು) ಹಿಡಿಯುವುದರಿಂದ, न्यवारयत् = ತಡೆಯಿತು.

ವಿವರಣೆ : ಹಂಸವನ್ನು ಬಿಟ್ಟುಬಿಡು ಎಂದು ಸರೋವರವು ಕಮಲಗಳೆಂಬ ಕೈಗಳಿಂದ ನಳನನ್ನು ತಡೆಯುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು.

पतत्रिणा तद्रुचिरेण वञ्चितम्
श्रियः प्रयान्त्याः प्रविहाय पल्वलम् ॥
चलत्पदाम्भोरुहनूपुरोपमा
चुकूज कूले कलहंसमण्डली ॥१२७॥

127. ಅನ್ವಯ : रुचिरेण = ಸುಂದರವಾದ, पतत्रिणा = ಪಕ್ಷಿಯಿಂದ (ಹಂಸದಿಂದ), वञ्चितम् = ವಿರಹವನ್ನು ಹೊಂದಿದಂತಹ (ಹಂಸವು ಇಲ್ಲದಿರುವಂತಹ), तत् = ಆ, पल्वलम् = ಸರೋವರವನ್ನು, प्रविहाय = ಬಿಟ್ಟು, प्रयान्त्याः = ಹೋಗುತ್ತಿರುವ, श्रियः = ಲಕ್ಷ್ಮಿಯ, चलत्पदाम्भोरुहनूपुरोपमा = ಚಲಿಸುತ್ತಿರುವ ಪಾದಕಮಲಗಳ ಗೆಜ್ಜೆಗೆ ಹೋಲುವಂತಹ, कलहंसमण्डली = ಕಲಹಂಸವೆಂಬ ಹಂಸಗಳ ಸಾಲು, कूले = ತೀರದಲ್ಲಿ, चुकूज = ಕೂಗಿತು.

ವಿವರಣೆ : ಕಲಹಂಸ = ಮಧುರವಾದ ಧ್ವನಿಯಿಂದ ಕೂಗುವ ಹಂಸ. ಕಲಹಂಸಗಳ ಕಲರವವನ್ನು ಕೇಳಿದಾಗ, ಸರೋವರದಲ್ಲಿದ್ದ ಲಕ್ಷ್ಮಿಯು ಹೊರಟುಹೋಗುತ್ತಿರುವಾಗ

ಉಂಟಾಗಿರುವ ಕಾಲ್ಗೆಜ್ಜೆಯ ನಾದವೆಂದು ಭಾಸವಾಗುತ್ತಿತ್ತು. ಚುಕೂಜ = ಕೂಜ - ಅವ್ಯಕ್ತಶಬ್ದೇ, ಲಿಟ್-ಲಕಾರ.

न वासयोग्या वसुधेयमीदृशः
त्वमङ्ग यस्याः पतिरुज्झितस्थितिः ॥
इति प्रहाय क्षतिमाश्रिता नभः
खगास्तमाचुक्रुशुरारवैः खलु ॥१२८॥

128. ಅನ್ವಯ : **इयम्** = ಈ, **वसुधा** = ಭೂಮಿಯು, **वासयोग्या** = ವಾಸ ಮಾಡುವುದಕ್ಕೆ ಯೋಗ್ಯವಾದುದು, **न** = ಅಲ್ಲ, **अङ्ग** = ಎಲೈ ! (ನಳನೇ !) **यस्याः** = ಯಾವ (ಭೂಮಿಯ), **उज्झितस्थितिः** = ಗೌರವವನ್ನು ಬಿಟ್ಟಿರುವ, **ईदृशः** = ಇಂತಹ, **त्वम्** = ನೀನು, **पतिः** = ರಾಜನಾಗಿರುವಿ, **इति** = ಎಂದು, **खगाः** = ಪಕ್ಷಿಗಳು (ಹಂಸಗಳು), **क्षतिम्** = ಭೂಮಿಯನ್ನು, **प्रहाय** = ಬಿಟ್ಟು, **नभः** = ಆಕಾಶವನ್ನು, **आश्रिताः** = ಆಶ್ರಯಿಸಿದವುಗಳಾಗಿ, **तम्** = ಅವನನ್ನು (ನಳನನ್ನು), **आरवैः** = ಕೂಗಾಟಗಳಿಂದ, **आचुक्रुशुः** = ಶಾಪ ಹಾಕುತ್ತಿದ್ದವು, **खलु** = ಅಲ್ಲವೇ ?

ವಿವರಣೆ : ಎಲ್ಲ ಪ್ರಾಣಿ-ಪಕ್ಷಿಗಳು ಭೂಮಿಯಲ್ಲಿ ಬದುಕುತ್ತವೆ. ಆದರೆ ನಿರಪರಾಧಿ ಹಂಸವನ್ನು ಹಿಡಿದು ನಳನು ಪೀಡಿಸುತ್ತಾ ಇದ್ದುದರಿಂದ, ಈ ಭೂಮಿಯ ಒಡೆಯನಾದ ರಾಜನೇ (ನಳನೇ) ನೀಚ ಕೆಲಸವನ್ನು ಮಾಡಿದಂತಾಯಿತು. ಈ ದುಃಖದಿಂದ ಎಲ್ಲ ಹಂಸಗಳು ಭೂಮಿಯನ್ನು ಬಿಟ್ಟು ಹೊರಟು ಹೋದಂತೆ ಅನಿಸಿತು. ಯಾಕೆಂದರೆ ಆ ಹಂಸಗಳು ಆಗಸದಲ್ಲಿ ಹಾರಾಡುತ್ತಿದ್ದವು. ಆಚುಕ್ರುಶುಃ = ಆ - ಉಪಸರ್ಗ + ಕ್ರುಶ - ಆಹ್ವಾನೇ ರೋದನೇ ಚ, ಲಿಟ್-ಲಕಾರ.

न जातरूपच्छदजातरूपता
द्विजस्य दृष्टेयमिति स्तुवन्मुहुः ॥
अवादि तेनाथ स मानसौकसा
जनाधिनाथः करपञ्जरस्पृशा ॥१२९॥

129. ಅನ್ವಯ : **अथ** = ಇನ್ನು,**इयम्** = ಈ, **जातरूपच्छदजातरूपता** = ಚಿನ್ನದ ರೆಕ್ಕೆಗಳಿಂದ ಉಂಟಾಗಿರುವ ಸೌಂದರ್ಯವು, **द्विजस्य** = ಹಕ್ಕಿಗೆ (ಹಂಸಕ್ಕೆ), **न दृष्टा** = (ಈವರೆಗೆ ಎಲ್ಲಿಯೂ) ಕಾಣಲಿಲ್ಲ, **इति** = ಎಂದು, **महुः** = ಮತ್ತೆ ಮತ್ತೆ, **स्तुवन्** = ಹೊಗಳುತ್ತಾ, **सः** = ಆ,

जनाधिनाथः = ರಾಜನು (ನಳನು), **करपञ्जरस्पृशा =** ಕೈಯೆಂಬ ಪಂಜರವನ್ನು ತಲುಪಿರುವ (ಬಂಧಿಸಲ್ಪಟ್ಟಿರುವ), **तेन =** ಆ, **मानसौकसा =** ಮಾನಸ ಸರೋವರದಲ್ಲಿ ವಾಸಿಸುವ ಹಂಸದಿಂದ, **अवादि =** ಹೇಳಲ್ಪಟ್ಟಿತು.

ವಿವರಣೆ : ಅವಾದಿ = ವದ - ವ್ಯಕ್ತಾಯಾಂ ವಾಚಿ, ಕರ್ಮಣಿಪ್ರಯೋಗ, ಲುಙ್-ಲಕಾರ.

धिगस्तु तृष्णातरलं भवन्मनः

समीक्ष्य पक्षान्मम हेमजन्मनः ॥

तवार्णवस्येव तुषारसीकरैः

भवेदमीभिः कमलोदयः कियान् ॥१३०॥

130. ಅನ್ವಯ : **हेमजन्मनः =** ಚಿನ್ನದ ಜನ್ಮವಿರುವ (ಜನ್ಮದಿಂದಲೇ ಚಿನ್ನವಾಗಿರುವ), **मम =** ನನ್ನ, **पक्षान् =** ರೆಕ್ಕೆಗಳನ್ನು, **समीक्ष्य =** ನೋಡಿ, **तृष्णातरलम् =** ಅತ್ಯಾಸೆಯಿಂದ ಚಂಚಲವಾದ, **भवन्मनः =** ನಿನ್ನ ಮನಸ್ಸನ್ನು ಕುರಿತು, **धिक् =** ಧಿಕ್ಕಾರವು, **अस्तु =** ಇರಲಿ, **अमीभिः =** ಈ, **तुषारसीकरैः =** ಮಂಜಿನ ಹನಿಗಳಿಂದ, **अर्णवस्य इव =** ಸಮುದ್ರದ್ದೋ ಎಂಬಂತೆ, **तव =** ನಿನ್ನ, **कमलोदयः =** ಸಂಪತ್ತಿನ ಅಭಿವೃದ್ಧಿಯು, **कियान् =** ಎಷ್ಟು, **भवेत् =** ಆಗಬಹುದು ?

ವಿವರಣೆ : ಹೇಗೆ ಮಂಜಿನ ಹನಿಗಳಿಂದ ಸಮುದ್ರವು ತುಂಬುವುದಿಲ್ಲವೋ ಹಾಗೆಯೇ ನನ್ನ ಚಿನ್ನದ ರೆಕ್ಕೆಗಳಿಂದ ನಿನ್ನ ರಾಜ್ಯದ ಖಜಾನೆ (ಕೋಶಾಗಾರ) ಎಷ್ಟು ತುಂಬಬಹುದು ? ನನ್ನ ಚಿನ್ನದ ರೆಕ್ಕೆಗಳನ್ನು ಬಳಸಿಕೊಂಡು ನೀನು ಸಂಪತ್ತನ್ನು ಸಂಪಾದಿಸಲು ಸಾಧ್ಯವಿಲ್ಲ ಎಂದರ್ಥ. ಕಮಲೋದಯಃ = ಇಲ್ಲಿ ಕಮಲಾ ಅಂದರೆ ಲಕ್ಷ್ಮೀ, ಸಂಪತ್ತು. ಉದಯ ಅಂದರೆ ಏಳಿಗೆ, ಅಭಿವೃದ್ಧಿ ಎಂದರ್ಥ.

न केवलं प्राणिवधो वधो मम

त्वदीक्षणाद्विश्वसितान्तरात्मनः ॥

विगर्हितं धर्मधनैर्निबर्हणम्

विशिष्य विश्वासजुषां द्विषामपि ॥१३१॥

131. ಅನ್ವಯ : **त्वदीक्षणात् =** ನಿನ್ನನ್ನು ನೋಡುವುದರಿಂದ, **विश्वसितान्तरात्मनः =** ವಿಶ್ವಾಸವುಳ್ಳ ಮನಸ್ಸಿರುವ, **मम =** ನನ್ನ, **वधः =** ಕೊಲೆಯು, **केवलम् =** ಕೇವಲ, **प्राणिवधः**

= ಪ್ರಾಣಿಗಳ ಕೊಲೆ, **न** = ಅಲ್ಲ. **विश्वासजुषाम्** = ವಿಶ್ವಾಸವಿಟ್ಟಿರುವ, **द्विषाम् अपि** = ಶತ್ರುಗಳಿಗೂ ಕೂಡ, **धर्मधनैः** = ಧರ್ಮವೇ ಸಂಪತ್ತಾಗಿರುವ ಮನು ಮೊದಲಾದ ಮಹಾರಾಜರಿಂದ, **विशिष्य** = ವಿಶೇಷವಾಗಿ, **विगर्हितम्** = ನಿಂದಿಸಲ್ಪಟ್ಟಿರುವ, **निबर्हणम्** = ಕೊಲೆ (ಆಗಿರುತ್ತದೆ).

ವಿವರಣೆ : ವಿಶ್ವಾಸಕ್ಕೆ ಯೋಗ್ಯವಾಗಿರುವ ಶತ್ರುಗಳನ್ನು ಕೊಲ್ಲುವುದು ಕೂಡ ಬಹಳ ದೊಡ್ಡ ಪಾಪವೇ ಆಗಿದೆ. ಇದನ್ನು ಧರ್ಮವೇ ಸಂಪತ್ತಾಗಿ ಹೊಂದಿದ್ದಂತಹ ಮನು ಮೊದಲಾದ ಮಹಾರಾಜರು ಹೇಳಿದ್ದಾರೆ. ಇಂತಹ ಅತ್ಯಂತ ನೀಚವಾದ ಕೆಲಸವನ್ನು ನೀನು (ನಳನು) ಮಾಡಿರುವಿ ಎಂದರ್ಥ.

पदे पदे सन्ति भटा रणोद्भटाः
नतेषु हिंसारस एष पूर्यते ॥
धिगीदृशं ते नृपते कुविक्रमम्
कृपाश्रये यः कृपणे पतत्रिणि ॥१३२॥

132. ಅನ್ವಯ : **रणोद्भटाः** = ಯುದ್ಧಗಳಲ್ಲಿ ಅತ್ಯಂತ ಕ್ರೂರಿಗಳಾಗಿರುವ, **भटाः** = ಸೈನಿಕರು, **पदे पदे** = ಹೆಜ್ಜೆ ಹೆಜ್ಜೆಗೂ, **सन्ति** = ಇರುತ್ತಾರೆ. **एषः** = ಈ, **हिंसारसः** = ಹಿಂಸಾರಸವು, **तेषु** = ಅವರಲ್ಲಿ (ಸೈನಿಕರಲ್ಲಿ), **न पूर्यते** = ತುಂಬಿಸಲ್ಪಡುವುದಿಲ್ಲ. **नृपते** = ಎಲೆ ಮಹಾರಾಜನೇ !, **यः** = ಯಾವುದು (ಯಾವ ಪರಾಕ್ರಮವು), **कृपाश्रये** = ಕರುಣೆಯ ಆಶ್ರಯವಾಗಿರುವ (ಕರುಣೆಗೆ ಯೋಗ್ಯವಾಗಿರುವ), **कृपणे** = ದುರ್ಬಲವಾದ, **पतत्रिणि** = ಹಕ್ಕಿಯಲ್ಲಿ, (ತೋರಿಸಲ್ಪಟ್ಟಿದೆಯೋ) **ते** = ನಿನ್ನ, **ईदृशम्** = ಇಂತಹ, **कुविक्रमम्** = ನೀಚ ಪರಾಕ್ರಮವನ್ನು ಕುರಿತು, **धिक्** = (ನನ್ನ) ಧಿಕ್ಕಾರ.

ವಿವರಣೆ : ಹಂಸ, ಪಾರಿವಾಳ, ಗಿಳಿ, ಗುಬ್ಬಚ್ಚಿ - ಮೊದಲಾದ ಪಕ್ಷಿಗಳು ತುಂಬ ಸೌಮ್ಯ ಸ್ವಭಾವದವುಗಳಾಗಿವೆ. ಹೀಗಿರುವಾಗ ಅವುಗಳ ಮೇಲೆ ದರ್ಪವನ್ನು ತೋರಿಸಿ, ಹಿಂಸೆಯನ್ನು ಮಾಡುವುದು ನಿನ್ನ (ನಳನ) ನೀಚತನವನ್ನು ತೋರಿಸುತ್ತದೆ. ಧಿಕ್ - ಎಂಬ ಅವ್ಯಯವನ್ನು ಬಳಸಿದಾಗ ಅದಕ್ಕೆ ಸಂಬಂಧಿಸಿದ ಶಬ್ದಕ್ಕೆ ದ್ವಿತೀಯಾ ವಿಭಕ್ತಿಯು ಬರುತ್ತದೆ.

फलेन मूलेन च वारिभूरुहाम्
मुनेरिवेत्थं मम यस्य वृत्तयः ॥

त्वयाद्य तस्मिन्नपि दण्डधारिणा

कथं न पत्या धरणी हृणीयते ॥१३३॥

133. ಅನ್ವಯ : **वारिभूरुहाम्** = ನೀರಿನಲ್ಲಿ ಬೆಳೆಯುವ ಕಮಲ (ಕಮಲದ ಗಿಡ) ಮತ್ತು ಭೂಮಿಯ ಮೇಲೆ ಬೆಳೆಯುವ ಗಿಡ-ಮರ-ಬಳ್ಳಿಗಳ, **फलेन** = ಹಣ್ಣಿನಿಂದ, **च** = ಮತ್ತು, **मूलेन** = ಬೇರಿನಿಂದ, **इत्थम्** = ಹೀಗೆ, **मुनेः इव** = ಮುನಿಯಂತೆ, **यस्य** = ಯಾವ, **मम** = ನನ್ನ, **वृत्तयः** = ಜೀವನ ನಿರ್ವಹಣೆಗಳು (ಇವೆಯೋ), **तस्मिन्** = ಅವನಲ್ಲಿಯೂ (ಅವನಿಗೂ), **अपि** = ಕೂಡ, **दण्डधारिणा** = ದೊಣ್ಣೆಯನ್ನು ಹಿಡಿದಿರುವ, **पत्या** = ರಾಜನಾದ, **त्वया** = ನಿನ್ನಿಂದ, **अद्य** = ಇಂದು, **धरणी** = ಭೂಮಿಯು, **कथम्** = ಹೇಗೆ, **न हृणीयते** = ಜುಗುಪ್ಸೆಪಡುವುದಿಲ್ಲ ?

ವಿವರಣೆ : ನಾನು ಯಾರಿಗೂ ತೊಂದರೆಯನ್ನು ಕೊಡುವುದಿಲ್ಲ. ಕಮಲ, ಹೂವು, ಹಣ್ಣು, ಬೇರುಗಳನ್ನು ತಿಂದು ಮುನಿಗಳಂತೆ ಬದುಕುತ್ತಿದ್ದೇನೆ. ಹೀಗಿದ್ದರೂ ನನ್ನ ಮೇಲೆ ನೀನು ಬಲಾತ್ಕಾರವನ್ನು ಮಾಡುತ್ತಿರುವೆ. ನಿನ್ನಂತಹ ಒಬ್ಬ ನೀಚ ರಾಜನ ಬಗ್ಗೆ ಭೂಮಿ ಯಾಕೆ ಜುಗುಪ್ಸೆಪಡುವುದಿಲ್ಲ ? (ಭೂಮಿಗೆ ಯಾಕೆ ಅಸಹ್ಯವೆನಿಸುವುದಿಲ್ಲ ?). ನಿಶ್ಚಯವಾಗಿಯೂ ಜುಗುಪ್ಸೆಪಡುತ್ತದೆ ಎಂದು ಹಂಸವು ನಳ ಮಹಾರಾಜನಿಗೆ ಹೇಳಿತು. ಹೃಣೀಯತೇ = ಹೃಣೀಙ್ - ರೋಷೇ ಲಜ್ಜಾಯಾಂ ಚ, ಕಂಡ್ವಾದಿಗಣ, ಲಟ್-ಲಕಾರ.

इतीदृशैस्तं विरचय्य वाङ्मयैः

सचित्रवैलक्ष्यकृपं नृपं खगः ॥

दयासमुद्रे स तदाशयेऽतिथी-

चकार कारुण्यरसापगा गिरः ॥१३४॥

134. ಅನ್ವಯ : **इति** = ಎಂಬುದಾಗಿ, **सः** = ಆ, **खगः** = ಪಕ್ಷಿಯು (ಹಂಸವು), **तम्** = ಆ, **नृपम्** = ರಾಜನನ್ನು (ನಳನನ್ನು), **ईदृशैः** = ಇಂತಹ, **वाङ्मयैः** = ಮಾತುಗಳಿಂದ, **सचित्रवैलक्ष्यकृपम्** = ಆಶ್ಚರ್ಯ, ನಾಚಿಕೆ ಮತ್ತು ಕರುಣೆಯುಳ್ಳವನನ್ನಾಗಿ ಮಾಡಿ, **दयासमुद्रे** = ಕರುಣಾಸಾಗರವಾಗಿರುವ, **तदाशये** = ಅವನ (ನಳನ) ಹೃದಯದಲ್ಲಿ, **कारुण्यरसापगाः** = ಕರುಣಾರಸದ ನದಿಗಳೆಂಬ, **गिरः** = ಮಾತುಗಳನ್ನು, **अतिथीचकार** = ಪ್ರವೇಶ ಮಾಡುವಂತೆ ಮಾಡಿತು (ಹೊಸ ಅತಿಥಿಗಳಂತೆ ಕಳುಹಿಸಿತು).

ವಿವರಣೆ : ನಳನು ಕರುಣಾಸಾಗರನೂ, ಸದ್ಗುಣ ಸಂಪನ್ನನೂ ಆಗಿದ್ದನು. ಆದರೆ ಹಂಸವನ್ನು ಹಿಡಿದಿರುವುದರಿಂದ ನೀಚತನದ ಕೆಲಸವನ್ನುಮಾಡಿದಂತೆ ಆಯಿತು. ಈ ಕಾರಣದಿಂದ ನಳನು ಆಶ್ಚರ್ಯಗೊಳ್ಳುವಂತೆ, ನಾಚಿಕೊಳ್ಳುವಂತೆ ಮತ್ತು ದಯೆ ತೋರುವಂತೆ ಮಧುರವಾದ ಮಾತುಗಳನ್ನು ಆ ಹಂಸವು ಹೇಳಿತು. ಆ ಮಾತುಗಳು ಕರುಣಾರಸದ ನದಿಗಳೋ ಎಂಬಂತೆ ಹೊಸ ಅತಿಥಿಗಳಾಗಿ ಕರುಣಾಸಾಗರನಾದ ನಳ ಮಹಾರಾಜನ ಹೃದಯದೊಳಗೆ ಹೊಕ್ಕಿದವು. ಅತಿಥಿಗಳು ಅಲ್ಲದಿರುವವರನ್ನು ಅತಿಥಿಗಳನ್ನಾಗಿ ಮಾಡುತ್ತಾನೆ ಎಂಬ ಅರ್ಥದಲ್ಲಿ ಅತಿಥೀಕರೋತಿ ಎಂಬ ಕ್ರಿಯಾಪದವು ಬಳಕೆಯಾಗುತ್ತದೆ. ಅತಿಥೀಚಕಾರ = ಲಿಟ್-ಲಕಾರ. ಊರ್ಯಾದಿಚ್ವಿಡಾಚಶ್ಚ - ಸೂತ್ರದಿಂದ ಅತಿಥೀ - ಎಂಬುದಕ್ಕೆ ಗತಿಸಂಜ್ಞೆಯು ಇರುತ್ತದೆ.

मदेकपुत्रा जननी जरातुरा

नवप्रसूतिर्वरटा तपस्विनी ॥

गतिस्तयोरेष जनस्तमर्दयन्

अहो विधे त्वां करुणा रुणद्धि न ॥१३५॥

135. ಅನ್ವಯ : **मदेकपुत्रा** = ನನ್ನನ್ನೊಬ್ಬನನ್ನೇ ಮಗನಾಗಿ ಹೊಂದಿದವ, **जननी** = ತಾಯಿಯು, **जरातुरा** = ವಯಸ್ಸಾದವಳು, (ಆಗಿದ್ದಾಳೆ). **वरटा** = ಹೆಂಡತಿಯು (ಹಂಸದ ಹೆಂಡತಿಯು), **नवप्रसूतिः** = ಬಾಣಂತಿಯೂ, **तपस्विनी** = ಪತಿವ್ರತೆಯೂ, (ಆಗಿದ್ದಾಳೆ). **एषः** = ಈ, **जनः** = ಜನ (ನಾನು ಅಂದರೆ ಹಂಸ), **तयोः** = ಅವರಿಬ್ಬರಿಗೂ (ತಾಯಿ ಮತ್ತು ಹೆಂಡತಿಗೆ), **गतिः** = ಆಧಾರವಾಗಿ (ಇದ್ದೇನೆ). **तम्** = (ಅಂತಹ) ಅವನನ್ನು (ಹಂಸವನ್ನು), **अर्दयन्** = ಪೀಡಿಸುತ್ತಾ, **अहो** = ಅಯ್ಯೋ !, **विधे** = ಹಣೆಬರಹವೇ ! (ಸೃಷ್ಟಿಕರ್ತೃವಾದ ಬ್ರಹ್ಮನೇ !), **त्वाम्** = ನಿನ್ನನ್ನು (ನಳನನ್ನು), **करुणा** = ಕರುಣೆಯು, **न रुणद्धि** = ತಡೆಯುತ್ತಿಲ್ಲ.

ವಿವರಣೆ : ತಾಯಿಯೂ, ಹೆಂಡತಿಯೂ ನನ್ನನ್ನು ಆಶ್ರಯಿಸಿ ಬದುಕಿರುವುದರಿಂದ, ಅವರಿಬ್ಬರಿಗೆ ನನ್ನನ್ನು ಬಿಟ್ಟು ಬೇರೆ ದಾರಿಯಿಲ್ಲ. ಹೀಗಿರುವಾಗ ನನ್ನನ್ನು ಯಾಕೆ ಪೀಡಿಸುತ್ತಿರುವೇ ? ಎಂದು ಹಂಸವು ನಳನನ್ನು ಕೇಳಿತು. ಅಯ್ಯೋ ಹಣೆಬರಹವೇ !, ಕರುಣೆ (ನಳನಲ್ಲಿಗೆ) ಬಂದು ಆ ನಳನನ್ನು ಯಾಕೆ ತಡೆಯುತ್ತಿಲ್ಲ ? ಎಂದು ಹಂಸವು ಗೋಳಾಡಿತು. ರುಣದ್ಧಿ = ರುಧಿರ್ - ಆವರಣೇ, ಲಟ್-ಲಕಾರ.

*** एकः पुत्रः यस्याः सा= एकपुत्रा । सङ्ख्यापूर्वपदः बहुव्रीहिः समासः । अनेकमन्यपदार्थे ।**

* मम एकपुत्रा = मदेकपुत्रा । षष्ठीतत्पुरुषः । षष्ठी । प्रत्ययोत्तरपदयोश्च ।

मुहूर्तमात्रं भवनिन्दया दया-

सखाः सखायः स्रवदश्रवो मम ॥

निवृत्तिमेष्यन्ति परं दुरुत्तरः

त्वयैव मातः सुतशोकसागरः ॥१३६॥

136. ಅನ್ವಯ : **मातः** = ಅಮ್ಮಾ ! **मम** = ನನ್ನ, **सखायः** = ಗೆಳೆಯರು, **दयासखाः** = ದಯೆಯುಳ್ಳವರು (ದಯೆಯ ಗೆಳೆಯರು), (ಆದ್ದರಿಂದಲೇ) **स्रवदश्रवः** = ಕಣ್ಣೀರು ಸುರಿಸುತ್ತಿರುವವರಾಗಿ, **मुहूर्तमात्रम्** = ಒಂದು ಕ್ಷಣ, **भवनिन्दया** = ಹುಟ್ಟು ಸಾವುಗಳೆಂಬ ಸಂಸಾರದ ನಿಂದೆ ಮಾಡುವುದರ ಮೂಲಕ, **निवृत्तिम्** = ದುಃಖದ ವಿರಾಮವನ್ನು, **एष्यन्ति** = ಹೊಂದಲಿದ್ದಾರೆ. **परम्** = ಆದರೆ, **त्वया एव** = ನಿನ್ನಿಂದಲೇ, **सुतशोकसागरः** = ಪುತ್ರಶೋಕವೆಂಬ ಸಾಗರವು, **दुरुत्तरः** = ದಾಟಲ್ಪಡುವುದಿಲ್ಲ.

ವಿವರಣೆ : ಅಮ್ಮಾ ! ನಳನು ನನ್ನನ್ನು ಕೊಂದರೆ ನಿನಗೆ ಮಾತ್ರ ಪುತ್ರಶೋಕವಲ್ಲ. ನನ್ನ ಗೆಳೆಯರೂ ಕೂಡ ಕಣ್ಣೀರು ಹಾಕುತ್ತಾರೆ. ಇದರಿಂದ ಪುತ್ರಶೋಕವೆಂಬ ಪಾಪವೇನಾದರೂ ಅವರಿಗೆ ಅಂಟಿದ್ದರೆ, ಅದು ನಾಶವಾಗಿ ಅವರೂ ಪುತ್ರಶೋಕದಿಂದ ದೂರವಾಗುತ್ತಾರೆ ಅಥವಾ ಮುಕ್ತಿಯನ್ನೂ ಪಡೆಯುತ್ತಾರೆ. ಆದರೆ ಒಬ್ಬನೇ ಮಗನಾಗಿರುವ ನನ್ನನ್ನು ಕೊಂದ ಪಾಪದಿಂದ ಉಂಟಾಗುವ ನಿನ್ನ ಪುತ್ರಶೋಕಕ್ಕೆ ಪರಿಹಾರವೇ ಇಲ್ಲ ಎಂದು ಹಂಸವು ನಳನಿಗೆ ಹೇಳುತ್ತದೆ.

मदर्थसन्देशमृणालमन्थरः

प्रियः कियद्दूर इति त्वयोदिते ॥

विलोकयन्त्या रुदतोऽथ पक्षिणः

प्रिये स कीदृग्भविता तव क्षणः ॥१३७॥

137. ಅನ್ವಯ : **प्रिये** = ಎಲೈ ಪ್ರಿಯತಮೆಯೇ ! (ಹಂಸದ ಹೆಂಡತಿ), **मदर्थसन्देशमृणालमन्थरः** = ನನಗೋಸ್ಕರ ಏನಾದರೊಂದು ಶುಭಸಂದೇಶ ಮತ್ತು ಆಹಾರವಾಗಿ ಕಮಲದ ದಂಟುಗಳನ್ನು ಕಳುಹಿಸುವುದರಲ್ಲಿ ವಿಳಂಬವನ್ನು ಮಾಡುತ್ತಿರುವ (ಆಲಸಿಯಾಗಿರುವ), **प्रियः** = ಪ್ರಿಯಕರನು (ಗಂಡನು), **कियद्दूरे** = ಎಷ್ಟು ದೂರದಲ್ಲಿ? (ಇದ್ದಾನೆ ?), **इति** = ಎಂದು, **त्वया** = ನಿನ್ನಿಂದ (ಹಂಸದ ಹೆಂಡತಿಯಿಂದ), **उदिते** = ಹೇಳಲ್ಪಟ್ಟಾಗ, **अथ** = ಆಮೇಲೆ,

रुदतः = ಅಳುತ್ತಿರುವ, **पक्षिणः** = ಹಕ್ಕಿಗಳನ್ನು (ಹಂಸಗಳನ್ನು), **विलोकयन्त्याः** = ನೋಡುತ್ತಿರುವಂತಹ, **तव** = ನಿನಗೆ, **सः** = ಆ, **क्षणः** = ಕ್ಷಣವು, **कीदृक्** = ಎಂತಹುದು, **भविता** = ಆಗಲಿದೆ ?

ವಿವರಣೆ : ನಾನೊಬ್ಬ ಗಂಡನಾಗಿ ಬಾಣಂತಿಯ ಆರೈಕೆ ಮಾಡುವುದು ನನ್ನ ಕರ್ತವ್ಯ. ಅವಳಿಗೆ ಒಳ್ಳೆಯ ವಾರ್ತೆಗಳನ್ನು ಕಳುಹಿಸುವುದು ಮತ್ತು ಕಮಲದ ದಂಟೆಂಬ ಆಹಾರವನ್ನು ಕಳುಹಿಸುವುದು ನನ್ನ ಕರ್ತವ್ಯ. ನಾನು ಕಳುಹಿಸದಿದ್ದರೆ ನನ್ನ ಹೆಂಡತಿಯು, ನನ್ನ ಗಂಡ ಎಲ್ಲಿ ಹೋಗಿದ್ದಾನೆ ? ಎಂದು ಉಳಿದ ಹಂಸಗಳಲ್ಲಿ ಕೇಳುತ್ತಾಳೆ. ಆಗ ಹಂಸಗಳು ಉತ್ತರವನ್ನು ಹೇಳಲಾರದೆ, ಕಣ್ಣೀರು ಹಾಕುತ್ತಾರೆ. ಏಕೆಂದರೆ ನಳನು ನನ್ನನ್ನು ಕೊಂದು ಹಾಕಿರುತ್ತಾನೆ. ಹಾಗೆ ಕಣ್ಣೀರು ಹಾಕುತ್ತಿರುವ ಹಂಸಗಳನ್ನು ನೋಡುತ್ತಿರುವ ನಿನ್ನ ದುಃಖದ ಕ್ಷಣವು ಹೇಗಿರಬಹುದು ? ಎಂದು ಆ ಗಂಡು ಹಂಸವು ತನ್ನಲ್ಲಿಯೇ ಅಳಲನ್ನು ತೋಡಿಕೊಳ್ಳುತ್ತದೆ.

कथं विधातर्मयि पाणिपङ्कजात्
तव प्रियाशैत्यमृदुत्वशिल्पिनः ॥
वियोक्ष्यते वल्लभयेति निर्गता
लिपिर्ललाटन्तपनिष्ठुराक्षरा ॥१३८॥

138. ಅನ್ವಯ : **विधातः** = ಎಲೈ ಬ್ರಹ್ಮನೇ !, **प्रियाशैत्यमृदुत्वशिल्पिनः** = ಪ್ರಿಯತಮೆಯಲ್ಲಿ ತಂಪನ್ನು ಮತ್ತು ಮೃದುತ್ವವನ್ನು ಸೃಷ್ಟಿ ಮಾಡುತ್ತಿರುವ, **तव** = ನಿನ್ನ (ಬ್ರಹ್ಮನ), **पाणिपङ्कजात्** = ಕೈಕಮಲದಿಂದ, **मयि** = ನನ್ನಲ್ಲಿ (ಗಂಡು ಹಂಸದಲ್ಲಿ), **ललाटन्तपनिष्ठुराक्षरा** = ಹಣೆಯು ಸುಟ್ಟು ಹೋಗುವಷ್ಟು ಕಠೋರವಾದ ಅಕ್ಷರಗಳಿರುವ, **वल्लभया** = ಪ್ರಿಯತಮೆಯಿಂದ, **वियोक्ष्यते** = ವಿಯೋಗವನ್ನು ಹೊಂದಲಿರುವಿ, **इति** = ಎಂಬ, **लिपिः** = ಬರವಣಿಗೆಯು, **कथम्** = ಹೇಗೆ, **निर्गता** = ಹೊರಟಿತು ?

ವಿವರಣೆ : ನನ್ನ ಹೆಂಡತಿಗೆ ತಂಪಾದ ದೇಹವನ್ನೂ, ಮೃದುವಾದ ಶರೀರವನ್ನೂ ಕೊಟ್ಟಿರುವಿ. ಆದರೆ ನಿನ್ನ ಹೆಂಡತಿಯಿಂದ ದೂರವಾಗುತ್ತಿ ಎಂಬ, ಹಣೆಯನ್ನು ಸುಟ್ಟು ಬೂದಿ ಮಾಡುವಷ್ಟು ಕಠೋರವಾದ ವಾಕ್ಯಗಳನ್ನು ನನ್ನ ಹಣೆಯ ಮೇಲೆ ಯಾಕೆ ಬರೆದಿರುವಿ ? ಆ ಬರವಣಿಗೆ ನಿನ್ನ ಕೈಯಿಂದ ಹೇಗೆ ಹೊರಟಿತು ? ಎಂದು ಬ್ರಹ್ಮನನ್ನು ಉದ್ದೇಶಿಸಿ ಗಂಡು ಹಂಸವು ಗೋಳಾಡುತ್ತದೆ.

अयि स्वयूथ्यैरशनिक्षतोपमम्
ममाद्य वृत्तान्तमिमं बतोदिता ॥
मुखानि लोलाक्षि दिशामसंशयम्
दशापि शून्यानि विलोकयिष्यसि ॥१३९॥

139. ಅನ್ವಯ : **अद्य** = ಇಂದು, **स्वयूथ्यैः** = ತನ್ನ ಗುಂಪಿನ ಹಂಸಗಳಿಂದ, **अशनिक्षतोपमम्** = ವಜ್ರಾಯುಧದ ಹೊಡೆತಕ್ಕೆ ಹೋಲುವ, **मम** = ನನ್ನ, **इमम्** = ಈ, **वृत्तान्तम्** = ವಾರ್ತೆಯನ್ನು, **उदिता** = ಹೇಳಲ್ಪಟ್ಟವಳಾಗಿ, **बत** = ಅಯ್ಯೋ ! **अयि** = ಎಲೈ, **लोलाक्षि** = ಚಂಚಲವಾದ ಕಣ್ಣುಗಳುಳ್ಳವಳೇ !, **दिशाम्** = ದಿಕ್ಕುಗಳ, **दश अपि** = ಹತ್ತೂ ಕೂಡ, **मुखानि** = ಮುಖಗಳನ್ನು, **शून्यानि** = ಶೂನ್ಯವಾಗಿ, **असंशयम्** = ನಿಶ್ಚಯವಾಗಿಯೂ, **विलोकयिष्यसि** = ನೋಡಲಿರುವಿ.

ವಿವರಣೆ : ನೀನು ಏನಾಯಿತೆಂದು ಕೇಳಿದಾಗ, ಹಂಸಗಳ ಗುಂಪು ನನ್ನನ್ನು ನಳನು ಹೊತ್ತು ನಡೆದಿರುವ ವಿಷಯವನ್ನು ನಿನಗೆ ತಿಳಿಸುತ್ತದೆ. ಆಗ ನೀನು ಹತ್ತು ದಿಕ್ಕುಗಳ ಮುಖಗಳನ್ನೂ ನೋಡಲಾಗದ ಸ್ಥಿತಿಯನ್ನು ತಲುಪಲಿರುವಿ. ಅಂದರೆ ದಿಕ್ಕು ತೋಚದವಳಾಗಿ ದುಃಖವನ್ನು ಅನುಭವಿಸಲಿರುವಿ ಎಂದು ಗಂಡು ಹಂಸವು ತನ್ನಲ್ಲಿಯೇ, ಹೆಣ್ಣು ಹಂಸವನ್ನು ಕುರಿತು ಹೇಳಿಕೊಳ್ಳುತ್ತದೆ.

ममैव शोकेन विदीर्णवक्षसा
त्वयापि चित्राङ्गि विपद्यते यदि ॥
तदास्मि दैवेन हतोऽपि हा हतः
स्फुटं यतस्ते शिशवः परासवः ॥१४०॥

140. ಅನ್ವಯ : **चित्राङ्गि** = ಎಲೈ ! ಬಣ್ಣಬಣ್ಣದ ಸುಂದರ ಶರೀರವುಳ್ಳವಳೇ !, **मम** = ನನ್ನ (ಬಗೆಗಿನ), **शोकेन एव** = ದುಃಖದಿಂದಲೇ, **विदीर्णवक्षसा** = ಸೀಳಲ್ಪಟ್ಟ ಹೃದಯವುಳ್ಳವಳಾದ, **त्वया अपि** = ನಿನ್ನಿಂದಲೂ ಕೂಡ, **यदि** = ಒಂದುವೇಳೆ, **विपद्यते** = ಸಾಯೋಣವಾಗುತ್ತದೆ, **तदा** = ಆಗ, **दैवेन** = ವಿಧಿಯಿಂದ (ಹಣೆಬರಹದಿಂದ), **हतः अपि** = ಸತ್ತಿದ್ದರೂ ಕೂಡ, **स्फुटम्** = ಸ್ಪಷ್ಟವಾಗಿ (ಇನ್ನೊಮ್ಮೆ), **हतः** = ಸತ್ತವನು, **अस्मि** = ಆಗುತ್ತೇನೆ. **हा** = ಅಯ್ಯೋ !, **यतः**

= ಯಾಕೆಂದರೆ, **ते** = ನಿನ್ನ, **शिशवः** = ಮಕ್ಕಳು (ಹಂಸದ ಮರಿಗಳು), **परासवः** = ಪ್ರಾಣಬಿಟ್ಟವುಗಳು (ಆಗುತ್ತವೆ).

ವಿವರಣೆ : ನಾನು ಸತ್ತಿದ್ದೇನೆ ಎಂಬ ವಾರ್ತೆಯನ್ನು ಕೇಳಿ, ನೀನೂ (ಹಂಸದ ಹೆಂಡತಿ) ಸತ್ತರೆ, ಅದರಿಂದ ನಾನು ಇನ್ನೊಮ್ಮೆ ಸಾಯುತ್ತೇನೆ. (ಸಾಯುವಾಗ ಉಂಟಾಗುವ ದುಃಖ ಇನ್ನೊಮ್ಮೆ ಉಂಟಾಗುತ್ತದೆ). ತಂದೆ, ತಾಯಿ ಇಲ್ಲದ ಮಕ್ಕಳು, ಸಾಕುವವರ ಅಭಾವದಿಂದ ನಿಶ್ಚಯವಾಗಿಯೂ ಸತ್ತು ಹೋಗುತ್ತವೆ ಎಂದು ಗಂಡು ಹಂಸವು ದುಃಖಿಸುತ್ತದೆ.

तवापि हा हा विरहात्क्षुधाकुलाः
कुलायकूलेषु विलुठ्य तेषु ते ॥
चिरेण लब्धा बहुभिर्मनोरथैः
गताः क्षणेनास्फुटितेक्षणा मम ॥१४१॥

141. ಅನ್ವಯ : (**चित्राङ्गि** = ಎಲೈ ! ಬಣ್ಣಬಣ್ಣದ ಸುಂದರ ಶರೀರವುಳ್ಳವಳೇ !), **हा हा** = ಅಯ್ಯೋ ಅಯ್ಯೋ ! **बहुभिः** = ಬಹಳ, **मनोरथैः** = ಆಸೆಗಳಿಂದ, **चिरेण** = ವಿಳಂಬವಾಗಿ, **लब्धाः** = ಸಿಕ್ಕಿರುವ, **अस्फुटितेक्षणाः** = ಕಣ್ಣು ಬಿಡದೇ ಇರುವಂತಹ, **मम** = ನನ್ನ, **ते** = ಇವರು (ಇವುಗಳು / ಮರಿಗಳು), **तव अपि** = ನಿನಗೂ ಕೂಡ, **विरहात्** = ವಿರಹದ ಕಾರಣದಿಂದ, **क्षुधाकुलाः** = ಹಸಿವೆಯಿಂದ ಕಂಗೆಟ್ಟವುಗಳಾಗಿ, **तेषु** = ಆ, **कुलायकूलेषु** = ಗೂಡಿನ ಅಂಚುಗಳಲ್ಲಿ, **विलुठ्य** = ನರಳಾಡಿ, **क्षणेन** = ಕ್ಷಣ ಮಾತ್ರದಿಂದಲೇ, **गताः** = ಹೋದವುಗಳು (ಸತ್ತುಹೋದವುಗಳು ಆಗುತ್ತವೆ).

ವಿವರಣೆ : ಬಹಳ ಕಾಲದಿಂದ ಮಕ್ಕಳೇ (ಮರಿಗಳೇ) ಆಗಿರಲಿಲ್ಲ. ಆಗಿರುವ ಮರಿಗಳು ಇನ್ನೂ ಕಣ್ಣು ತೆರೆದಿಲ್ಲ. ನಾವೇನಾದರೂ ಸತ್ತರೆ ಅವುಗಳಿಗೆ ಆಹಾರವೂ ಇಲ್ಲದೆ, ಗೂಡಿನ ಅಕ್ಕ-ಪಕ್ಕದಲ್ಲಿಯೇ ಒದ್ದಾಡಿ, ನರಳಾಡಿ ಸಾಯುತ್ತವೆ ಎಂದು ಗಂಡು ಹಂಸವು ಮನಸ್ಸಿನಲ್ಲಿಯೇ ಗೋಳಾಡಿತು.

सुताः कमाहूय चिराय चुङ्कृतैः
विधाय कम्प्राणि मुखानि कं प्रति ॥
कथासु शिष्यध्वमिति प्रमील्य सः
स्रुतस्य सेकाद् बुबुधे नृपाश्रुणः ॥१४२॥

142. ಅನ್ವಯ : **सुताः** = ಎಲೈ ಮಕ್ಕಳೇ ! (ಮರಿಗಳೇ !), **चुङ्कृतैः** = ಚಿಂವ್-ಚಿಂವ್ ಗುಟ್ಟುವಿಕೆಯಿಂದ, **चिराय** = ಬಹಳ ಕಾಲದವರೆಗೆ, **कम्** = ಯಾರನ್ನು, **आहूय** = ಕರೆದು, **कम् प्रति** = ಯಾರನ್ನು ಕುರಿತು (ಯಾರಿಗೆ), **कम्प्राणि** = ನಡುಗುತ್ತಿರುವ, **मुखानि** = ಮುಖಗಳನ್ನು, **विधाय** = ಮಾಡಿ, **कथासु** = ಕಥೆಗಳಲ್ಲಿ, **शिष्यध्वम्** = ಉಳಿಯಬೇಕು ? **इति** = ಎಂಬುದಾಗಿ, **प्रमील्य** = ಮೂರ್ಛೆಯನ್ನು ಹೋಗಿ (ಪ್ರಜ್ಞೆ ತಪ್ಪಿ), **सः** = ಅವನು (ಹಂಸವು), **स्नुतस्य** = ಸುರಿಯುತ್ತಿರುವ, **नृपाश्रुणः** = ರಾಜನ ಕಣ್ಣೀರಿನ, **सेकात्** = ಸಿಂಚನದಿಂದ, **बुबुधे** = ಎಚ್ಚರಗೊಂಡಿತು.

ವಿವರಣೆ : ಅಪ್ಪ-ಅಮ್ಮ ಸತ್ತು ಹೋದ ಮೇಲೆ, ಚಿಂವ್-ಚಿಂವ್ ಎಂದು ಕೂಗಾಡುತ್ತಾ ಯಾರಿಗೆ ಮುಖವನ್ನು ತೋರಿಸುತ್ತೀರಿ ? ಯಾರ ಜೊತೆ ಮಾತುಕತೆಯಲ್ಲಿ ತೊಡಗಿಕೊಂಡು, ಬದುಕುವಿರಿ ? ಎಂದು ಗೋಳಾಡುತ್ತಾ ಆ ಗಂಡು ಹಂಸವು ಮೂರ್ಛೆ ಹೋಯಿತು. ಅದರ ದುಃಖವನ್ನು ನೋಡಿ, ಕರುಣಾಮಯಿಯಾದ ನಳನೂ ಕಣ್ಣೀರನ್ನು ಸುರಿಸಿದನು. ಆ ಕಣ್ಣೀರು ಹಂಸದ ಮೇಲೆ ಬಿದ್ದಾಗ, ಮತ್ತೆ ಹಂಸವು ಎಚ್ಚರಗೊಂಡಿತು. ಸ್ನುತಸ್ಯ = ಷ್ಣು - ಪ್ರಸ್ರವಣೇ, ನಿಷ್ಠಾ ಕ್ತ-ಪ್ರತ್ಯಯ. ಬುಬುಧೇ = ಬುಧ - ಅವಗಮನೇ, ಲಿಟ್-ಲಕಾರ.

इत्थममुं विलपन्तममुञ्चद्-
दीनदयालुतयावनिपालः ॥
रूपमदर्शि धृतोऽसि यदर्थम्
गच्छ यथेच्छमथेत्यभिधाय ॥१४३॥

143. ಅನ್ವಯ : **यदर्थम्** = ಯಾವುದಕ್ಕೋಸ್ಕರ, **धृतः असि** = (ನೀನು) ಹಿಡಿಯಲ್ಪಟ್ಟಿರುವಿಯೋ, (ಆ) **रूपम्** = (ಚಿನ್ನದ) ದೇಹವು, **अदर्शि** = ನೋಡಲ್ಪಟ್ಟಿತು, **अथ** = ಇನ್ನು, **यथेच्छम्** = ನಿನ್ನ ಇಚ್ಛೆಯಂತೆ, **गच्छ** = ಹೋಗು, **इति** = ಎಂದು, **इत्थम्** = ಹೀಗೆ, **विलपन्तम्** = ಗೋಳಾಡುತ್ತಿರುವ, **अमुम्** = ಇದನ್ನು ಕುರಿತು (ಹಂಸಕ್ಕೆ) **अभिधाय** = ಹೇಳಿ, **अवनिपालः** = ರಾಜನು (ನಳನು), **दीनदयालुतया** = ದುಃಖಿತರ ಮೇಲೆ ದಯೆ ತೋರುವವನಾಗಿ, **अमुञ्चत्** = ಬಿಟ್ಟುಬಿಟ್ಟನು.

ವಿವರಣೆ : ವಿಚಿತ್ರವಾದ ಚಿನ್ನದ ಹಂಸವನ್ನು ನಳನು ಕೈಯಲ್ಲಿ ಹಿಡಿದಿದ್ದರೂ, ಅದರ ಗೋಳಾಟವನ್ನು ನೋಡಿ, ಅದರ ಮೇಲೆ ದಯೆ ತೋರಿ, ನೀನು ನಿನ್ನ ಇಷ್ಟದಂತೆ ಹೋಗು ಎಂದು ಬಿಟ್ಟುಬಿಟ್ಟನು. ದೋಧಕವೃತ್ತ.

*** इच्छाम् अनतिक्रम्य = यथेच्छम् । अव्ययीभावः । अव्ययं विभक्तीति सूत्रम् ।**

आनन्दजाश्रुभिरनुस्रियमाणमार्गान्
प्राक्शोकनिर्गमितनेत्रपयःप्रवाहान् ॥
चक्रे स चक्रनिभचङ्क्रमणच्छलेन
नीराजनां जनयतां निजबान्धवानाम् ॥१४४॥

144. ಅನ್ವಯ : **सः** = ಅವನು (ಹಂಸವು), **चक्रनिभचङ्क्रमणच्छलेन** = ಚಕ್ರದಂತೆ ವರ್ತುಲಾಕಾರವಾಗಿ ಹಾರಾಡುತ್ತಿರುವ ಕಾರಣದಿಂದ, **नीराजनाम्** = ಆರತಿಯನ್ನು, **जनयताम्** = ಉಂಟುಮಾಡುತ್ತಿರುವ, **निजबान्धवानाम्** = ತನ್ನ ಬಂಧುಗಳಿಗೆ (ಹಂಸಗಳಿಗೆ), **प्राक्** = ಮೊದಲು, **शोकनिर्गमितनेत्रपयःप्रवाहान्** = ದುಃಖದಿಂದ ಕಣ್ಣೀರಿನ ಪ್ರವಾಹವನ್ನು ಬಿಟ್ಟಿರುವವರನ್ನು (ಕಣ್ಣೀರು ಸುರಿಸಿದವರನ್ನು), **आनन्दजाश्रुभिः** = ಆನಂದಬಾಷ್ಪಗಳಿಂದ, **अनुस्रियमाणमार्गान्** = ಅನಸರಿಸಲ್ಪಡುವ ಮಾರ್ಗವುಳ್ಳವರನ್ನಾಗಿ, **चक्रे** = ಮಾಡಿದನು (ಹಂಸವು ಮಾಡಿತು). ವಸಂತತಿಲಕಾವೃತ್ತ.

ವಿವರಣೆ : ಚಿನ್ನದ ಹಂಸವನ್ನು ನಳನು ಹಿಡಿದಾಗ, ಅದರ ಸುತ್ತಲೂ ಕಣ್ಣೀರು ಸುರಿಸುತ್ತಾ ವರ್ತುಲಾಕಾರವಾಗಿ ಉಳಿದ ಹಂಸಗಳು ಆಕಾಶದಲ್ಲಿ ಹಾರಾಡುತ್ತಿದ್ದವು. ಈಗ ಈ ಚಿನ್ನದ ಹಂಸವನ್ನು ಬಿಟ್ಟಾಗ, ಅದೇ ಹಂಸಗಳು ಆನಂದಬಾಷ್ಪವನ್ನು ಸುರಿಸುತ್ತಾ, ಚಿನ್ನದ ಹಂಸಕ್ಕೆ ಆರತಿ ಮಾಡಿದಂತೆ ವರ್ತುಲಾಕಾರವಾಗಿ ಆಕಾಶದಲ್ಲಿ ಸುತ್ತಾಡಿದವು.

श्रीहर्षं कविराजराजिमुकुटालङ्कारहीरः सुतम्
श्रीहीरः सुषुवे जितेन्द्रियचयं मामल्लदेवी च यम् ॥
तच्चिन्तामणिमन्त्रचिन्तनफले शृङ्गारभङ्ग्या महा-
काव्ये चारुणि नैषधीयचरिते सर्गोऽयमादिर्गतः ॥१४५॥

145. ಅನ್ವಯ : **कविराजराजिमुकुटालङ्कारहीरः** = ಆಸ್ಥಾನಪಂಡಿತ ಮೊದಲಾದ ರಾಜಬಿರುದುಗಳಿಂದ ಸನ್ಮಾನಿಸಲ್ಪಟ್ಟ ಕವಿ ಸಾಲುಗಳ ಕಿರೀಟಕ್ಕೆ ಅಲಂಕಾರವಾಗಿರುವ ವಜ್ರದ

ಮಣಿಯಾಗಿರುವ, **श्रीहीरः** = ಶ್ರೀಹೀರನು, **च** = ಮತ್ತು, **मामल्लदेवी** = ಮಾಮಲ್ಲದೇವಿಯು, **जितेन्द्रियचयम्** = ಇಂದ್ರಿಯಗಳ ಗುಂಪನ್ನು (ಎಲ್ಲ ಇಂದ್ರಿಯಗಳನ್ನು) ಗೆದ್ದಿರುವ, **श्रीहर्षम्** = ಶ್ರೀಹರ್ಷ (ಎಂಬ), **यम्** = ಯಾವ, **सुतम्** = ಮಗನನ್ನು, **सुषुवे** = ಹಡೆದರೋ, **तच्चिन्तामणिमन्त्रचिन्तनफले** = ಅವನ (ಆ ಮಗನ) ಚಿಂತಾಮಣಿ ಎಂಬ ಮಂತ್ರದ ಧ್ಯಾನದ (ಜಪದ) ಫಲವಾಗಿರುವ, **शृङ्गारभङ्ग्या** = ಶೃಂಗಾರಭಂಗಿಯಿಂದ (ಪ್ರೇಮರಸದಿಂದ) ಕೂಡಿರುವ, **चारुणि** = ಸುಂದರವಾದ, **नैषधीयचरिते महाकाव्ये** = ನೈಷಧೀಯಚರಿತ ಮಹಾಕಾವ್ಯದಲ್ಲಿ, **अयम्** = ಇವನು (ಇದು), **आदिः** = ಮೊದಲನೆಯ, **सर्गः** = ಸರ್ಗವು, **गतः** = ಮುಗಿಯಿತು. ಶಾರ್ದೂಲವಿಕ್ರೀಡಿತವೃತ್ತ.

ವಿವರಣೆ : ಎಲ್ಲ ಕವಿಗಳಿಗೂ ಪೂಜ್ಯನಾದ ಶ್ರೀಹೀರ ಎಂಬ ಒಬ್ಬ ಕವಿ ಇದ್ದನು. ಅವನ ಪತ್ನಿ ಮಾಮಲ್ಲದೇವಿ. ಅವರ ಮಗನೇ ಶ್ರೀಹರ್ಷ. ಈ ಶ್ರೀಹರ್ಷನು ಚಿಂತಿಸಿದ ಆಸೆಗಳನ್ನು ಪೂರೈಸುವ ಚಿಂತಾಮಣಿ ಎಂಬ ಮಂತ್ರವನ್ನು ಜಪ ಮಾಡುತ್ತಿದ್ದನು. ಈ ಜಪದ ಫಲವಾಗಿಯೇ ಇಂತಹ ಅದ್ಭುತವಾದ ಚಿಂತನೆಗಳುಳ್ಳ ನೈಷಧೀಯಚರಿತ ಎಂಬ ಮಹಾಕಾವ್ಯವನ್ನು ಅವನು ಬರೆದನು. ಇಲ್ಲಿಗೆ ಈ ಮಹಾಕಾವ್ಯದ ಮೊದಲನೆಯ ಸರ್ಗವು ಮುಗಿಯಿತು.

॥ महाकविश्रीहर्षविरचिते नैषधीयचरिते महाकाव्ये प्रथमः सर्गः सम्पूर्णः ॥

ಮಹಾಕವಿ ಶ್ರೀಹರ್ಷವಿರಚಿತ ನೈಷಧೀಯಚರಿತ ಮಹಾಕಾವ್ಯದ ಮೊದಲ ಸರ್ಗವು ಸಂಪೂರ್ಣವಾಯಿತು.

॥ अनुक्रमणिका ॥

ಸಂಧಿ ಮತ್ತು ಸಮಾಸಗಳಿಗೆ ಒಂದು ಉದಾಹರಣೆ

****



॥ श्लोकानाम् अनुक्रमणिका ॥

ಅಂತ್ಯಾಕ್ಷರೀ ಕಲಿಯಲು ಅಕಾರಾದಿ ಅನುಕ್ರಮಣಿಕೆ

॥ श्लोकानाम् अनुक्रमणिका ॥

ಅಂತ್ಯಾಕ್ಷರೀ ಕಲಿಯಲು ಅಕಾರಾದಿ ಅನುಕ್ರಮಣಿಕೆ

॥ श्लोकानाम् अनुक्रमणिका ॥

ಅಂತ್ಯಾಕ್ಷರೀ ಕಲಿಯಲು ಅಕಾರಾದಿ ಅನುಕ್ರಮಣಿಕೆ

